ದುಡಿಯುವ ವರ್ಗದ ಈ ಪ್ರಖರ ವಾಣಿ ಇನ್ನು ಕೇಳಿಸದು

ಕಾಮ್ರೇಡ್ ಇಎಂಎಸ್ ಇನ್ನಿಲ್ಲ, ಸುಮಾರು ಆರು ದಶಕಗಳ ಕಾಲ ಭಾರತೀಯ ಸಮಾಜದ ಸುಧಾರಣೆಯ, ಪರಿವರ್ತನೆಯ, ವಿಮೋಚನೆಯ ಒಂದು ಶೋಷಣೆಯಿಲ್ಲದ ಸಮಾನತೆಯ ಸಮಾಜರಚನೆಯ, ಕ್ರಾಂತಿಯ ದಾರಿಯ ವಿಚಾರಗಳನ್ನು ಪ್ರತಿಪಾದಿಸುತ್ತಾ ಬಂದ ಈ ವಾಣಿ ಮಾರ್ಚ್ 19 ರ ಅಪರಾಹ್ನ 3.40 ಕ್ಕೆ ಮೌನವಾಯಿತು, ಇತಿಹಾಸದ ಪುಟ ಸೇರಿತು.

ಮಾರ್ಚ್ 19, 1998. ಎಂದಿನಂತೆ ಅಂದು ಬೆಳಿಗ್ಗೆ ಕೂಡಾ ಮಲೆಯಾಳಂ ದೈನಿಕ 'ದೇಶಾಭಿಮಾನಿ'ಗೆ ಇತ್ತೀಚಿನ ಚುನಾವಣೆಯನ್ನು ಕುರಿತಂತೆ ವಿಶ್ಲೇಷಣೆಯ ಮೂರನೇ ಭಾಗವನ್ನು ಪೂರ್ಣಗೊಳಿಸಿ ತಮಗೆ ಬಂದ ಪತ್ರಗಳಿಗೆ ಉತ್ತರಗಳನ್ನು ತಿಳಿಸಿ, ಇನ್ನೊಂದು ಲೇಖನವನ್ನು ಪೂರ್ಣಗೊಳಿಸಿದರು. ಈ ಸಮಯದಲ್ಲಿ ಕಾಣಿಸಿಕೊಂಡ ಉಸಿರಾಟದ ತೊಂದರೆ ಹೆಚ್ಚಾದಾಗ ಅಪರಾಹ್ನ ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತು. 3.40 ರ ವೇಳೆಗೆ ಕಾಮ್ರೇಡ್ ಇಎಂಎಸ್ ಕೊನೆಯುಸಿರೆಳೆದರು.

ಮಿಂಚಿನಂತೆ ಕೇರಳ ಮಾತ್ರವಲ್ಲ, ದೇಶಾದ್ಯಂತ ಹರಡಿತ ಈ ಸುದ್ದಿ ಅವರ ಮಿಲಿಯಾಂತರ ಅಭಿಮಾನಿಗಳಿಗೆ ಆಘಾತ ತಂದ ಸುದ್ದಿಯಾಗಿತ್ತು. ದೇಶಾದ್ಯಂತ ಕೆಂಬಾವುಟಗಳು ಅರ್ಧ ಮಟ್ಟಕ್ಕೆ ಇಳಿದವು. ಏಳು ದಿನಗಳ ಕಾಲ ಪಕ್ಷದ ಕಚೇರಿಗಳ ಮೇಲೆ ಇಎಂಸ್ ಗೌರವಾರ್ಥ ಕೆಂಬಾವುಟವನ್ನು ಅರ್ಧ ಮಟ್ಟದಲ್ಲಿ ಹಾರಿಸಲಾಗುವುದು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ತಿಳಿಸಿದೆ.

ಮಾರ್ಚ್ 20 ರಂದು ಕೇರಳದ ರಾಜಧಾನಿ ತಿರುವನಂತಪುರದಲ್ಲಿ ಸಂಜೆ 4 ಗಂಟೆಗೆ ಜನಸಾಗರ ಇಎಂಎಸ್ ರವರಿಗೆ ಅಂತಿಮ ವಿದಾಯ ನೀಡಿತು. ಅದೇ ವೇಳೆಗೆ ದೇಶಾದ್ಯಂತ ಕಮ್ಯುನಿಸ್ಟರು, ಇತರ ಪ್ರಜಾಪ್ರಭುತ್ವ ವಾದಿಗಳು ತಮ್ಮ ಗೌರವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು.

ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಹಾಗೂ ಪ್ರಧಾನ ಮಂತ್ರಿ ವಾಜಪೇಯಿಯುವರು ನವದೆಹಲಿ ಯಲ್ಲಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಕಚೇರಿಗೆ ಭೇಟಿ ನೀಡಿ ಇಎಂಎಸ್ ನಿಧನಕ್ಕೆ ತಮ್ಮ ಸಂತಾಪವನ್ನು ವ್ಯಕ್ತಪಡಿಸಿದರು.

ಜೂನ್ 14, 1909 ರಂದು ಒಂದು ಸಂಪನ್ನ, ಸನಾತನ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಇ.ಎಂ.ಶಂಕರನ್ ನಂಬೂದರಿಪಾಡ್ ತನ್ನ 14ನೇ ವಯಸ್ಸಿನಲ್ಲಿಯೇ ಜನಗಳನ್ನು ವಿಭಜಿಸುವ ಜಾತಿ, ಆಸ್ತಿಗಳ ಬಗ್ಗೆ ಆತಂಕದಿಂದ ಯೋಚಿಸಲಾರಂಭಿಸಿದವರು. ನಂಬೂದರಿ ಸಮಾಜದಲ್ಲಿನ ಮೂಢ ಸಂಪ್ರದಾಯಗಳ ವಿರುದ್ಧ ಪಾಳೆಯಗಾರಿ ಮೌಲ್ಯಗಳ ವಿರುದ್ಧ ಬಂಡೆದ್ದವರು. ತ್ರಿಶೂರಿನ ಸೈಂಟ್ ಥಾಮಸ್ ಕಾಲೇಜಿನಲ್ಲಿರುವಾಗಲೇ ಗಾಂಧೀಜಿಯ ನೇತೃತ್ವದ ನಾಗರಿಕ ಅಸಹಕಾರ ಆಂದೋಲನಕ್ಕೆ ಧುಮುಕಿದ ಅವರು ಮೊದಲಬಾರಿ ಜೈಲುವಾಸವನ್ನು ಅನುಭವಿಸಿದರು. ಇದರಿಂದ ಅವರ ಶಿಕ್ಷಣ ಅರ್ಧಕ್ಕೆ ನಿಂತಿತು. "ನಾನೊಬ್ಬ ಅತ್ಯುತ್ತಮ ವಿದ್ಯಾರ್ಥಿಯನ್ನು ಕಳಕೊಂಡಿದ್ದೇನೆ. ಆದರೆ ಆತ ಕೇವಲ ಇತಿಹಾಸದ ವಿದ್ಯಾರ್ಥಿಯಲ್ಲ, ಇತಿಹಾಸ ನಿರ್ಮಿಸುವಾತ' ಎಂದರು ಅವರ ಅಧ್ಯಾಪಕರಾದ ಪ್ರೊ. ನಾರಾಯಣ ಸ್ವಾಮಿ. ಅವರ ಮಾತು ಅಕ್ಷರಶಃ ನಿಜವಾಯಿತು.


ಅಸಹಕಾರ ಆಂದೋಲನದ ಮೂಲಕ ಕಾಂಗ್ರೆಸ್ ಸೇರಿದ ಇಎಂಎಸ್ ಅಷ್ಟಕ್ಕೇ ನಿಲ್ಲಲಿಲ್ಲ. ಅವರ ತೀಕ್ಷ್ಣ ಬುದ್ಧಿ ಮತ್ತೆ ಹಾಗೂ ಸುತ್ತಲಿನ ಬೆಳವಣಿಗೆಗಳು ಅವರನ್ನು ಎಡ ಪಂಥೀಯ ವಿಚಾರಧಾರೆಯತ್ತ ಸೆಳೆದವು. 1934 ರಲ್ಲಿ ಇಎಂಎಸ್ ಕೇರಳ ಪ್ರಾಂತ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಅದೇ ವರ್ಷ ಜಯಪ್ರಕಾಶ್ ನಾರಾಯಣ್, ಲೋಹಿಯಾ ಮತ್ತಿತರರ ಜೊತೆಗೆ ಕಾಂಗ್ರೆಸ್ ಸೋಶಲಿಸ್ಟ್ ಪಾರ್ಟಿ ಸ್ಥಾಪಿಸಿದರು. ಅದರ ಜಂಟಿ ಕಾರ್ಯದರ್ಶಿಗಳಾದರು. 1939-40 ರಲ್ಲಿ ಅವರು ಮತ್ತೆ ಕಾಂಗ್ರೆಸ್‌ನ ಕೇರಳ ಪ್ರಾಂತ ಸಮಿತಿಯ ಕಾರ್ಯದರ್ಶಿಯಾದರು. ಇಎಂಎಸ್ ಭಾರತ ಕಮ್ಯುನಿಸ್ಟ್ ಪಕ್ಷದ ಕೇರಳ ಘಟಕದ ಸ್ಥಾಪಕ ಸದಸ್ಯರಲ್ಲಿ ಒಬ್ಬರು. 1941 ರಲ್ಲಿ ಅವರು ಪಕ್ಷದ ಕೇಂದ್ರ ಸಮಿತಿಗೆ ಆಯ್ಕೆಯಾದರು. 1950 ರಿಂದ ಅವರು ಪಕ್ಷದ ಅತ್ಯುನ್ನತ ಸಮಿತಿಯಾದ ಪಾಲಿಟ್‌ಬ್ಯೂರೋ ಸದಸ್ಯರಾಗಿದ್ದರು.

1953, 1954 ಹಾಗೂ 1955-56 ರಲ್ಲಿ ಅವರು ಪಕ್ಷದ ಪ್ರಧಾನ ಕಾರ್ಯದರ್ಶಿಯ ಜವಾಬ್ದಾರಿಯನ್ನು ತಾತ್ಕಾಲಿಕವಾಗಿ ವಹಿಸಿಕೊಂಡರು. 1963-64 ರಲ್ಲಿ ಅವಿಭಜಿತ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದರು. ವಿಭಜನೆಯ ನಂತರ 1964 ರಲ್ಲಿ ಸಿಪಿಐ(ಎಂ) ರಚನೆಗೊಂಡಂದಿನಿಂದ ಕೊನೆಯುವರೆಗೂ ಅದರ ಪೊಲಿಟ್‌ಬ್ಯೂರೋ ಸದಸ್ಯರಾಗಿ ಸೇವೆ ಸಲ್ಲಿಸಿದರು. 1977 ರಿಂದ 1992 ರ ವರೆಗೆ ಇಎಂಎಸ್ ಸಿಪಿಐ(ಎಂ) ನ ಪ್ರಧಾನ ಕಾರ್ಯದರ್ಶಿಯಾಗಿ ದೇಶಾದ್ಯಂತ ಸಂಚರಿಸಿದರು.

ಇಎಂಎಸ್ ಸ್ವಾತಂತ್ರ್ಯ ಪೂರ್ವದಲ್ಲೇ 1939 ರಲ್ಲಿ ಮದ್ರಾಸ್ ಪ್ರಾಂತ್ಯದ ಶಾಸನ ಸಭೆಗೆ ಆಯ್ಕೆಯಾಗಿದ್ದರು. ಕೇರಳ ರಾಜ್ಯ ರಚನೆಯಾದ ನಂತರ 1957, 1960, 1965, 1967 ಹಾಗೂ 1977 ರಲ್ಲಿ ಕೇರಳ ವಿಧಾನ ಸಭೆಗೆ ಆಯ್ಕೆಯಾದರು. 1957-59 ರಲ್ಲಿ ಕಮ್ಯುನಿಸ್ಟ್ ಪಕ್ಷ ರಚಿಸಿದ ಸರಕಾರದ ಹಾಗೂ 1967-69 ರಲ್ಲಿ ಸಂಯುಕ್ತ ರಂಗ ಸರಕಾರದ ಮುಖ್ಯಮಂತ್ರಿಯಾಗಿ ನೇತೃತ್ವ ನೀಡಿದರು.

1937 ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷಕ್ಕೆ ಬಂದಂದಿನಿಂದ ಕೊನೆಯ ಉಸಿರಿನವರೆಗೂ ಕಾಮ್ರೇಡ್ ಇಎಂಎಸ್‌ರ ಬದುಕಿನ ಕಥೆ ಭಾರತದ ಕಮ್ಯುನಿಸ್ಟ್ ಆಂದೋಲನದೊಂದಿಗೆ ಹಾಸುಹೊಕ್ಕಾದ ಇತಿಹಾಸ. ಕೇರಳದಲ್ಲಿ 1937 ರಲ್ಲಿ ಕೇವಲ ನಾಲ್ಕು ಸದಸ್ಯರಿಂದ ಆರಂಭವಾದ ಪಕ್ಷ ಈಗ ರಾಜ್ಯದ ಅತ್ಯಂತ ಬಲಿಷ್ಟ ಪಕ್ಷವಾಗಿರುವಲ್ಲಿ, ಅಖಿಲ ಭಾರತ ಮಟ್ಟದಲ್ಲೂ ಈ ಅರವತ್ತು ವರ್ಷಗಳಲ್ಲಿ ಮೂರು ರಾಜ್ಯ ಸರಕಾರಗಳನ್ನು ನಡೆಸುವ ಪಕ್ಷವಷ್ಟೇ ಅಲ್ಲ, ರಾಷ್ಟ್ರದ ರಾಜಕಾರಣದಲ್ಲಿ ನಿರ್ಣಾಯಕ ಪಾತ್ರವಹಿಸುವ ಪಕ್ಷವಾಗಿ ಸಾಧಿಸಿದ ಬೆಳವಣಿಗೆಯಲ್ಲಿ ಹಾಗೂ 35 ವರ್ಷಗಳ ಹಿಂದೆ ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನ ಬದಿಗೊತ್ತಿದ್ದ ಪಕ್ಷ ಈಗ ಅದರ ಒಂದು ಪ್ರಮುಖ ತುಕಡಿಯಾಗಿ ಬೆಳೆದಿರುವಲ್ಲಿ ಇಎಂಎಸ್‌ರ ಕೊಡುಗೆ ಅಪಾರ. ಈ ಹಿರಿಯ ಸ್ವಾತಂತ್ರ್ಯ ಯೋಧ, ಅಂತರ್ರಾಷ್ಟ್ರೀಯ ಖ್ಯಾತಿಯ ಧೀಮಂತ ಕಮ್ಯುನಿಸ್ಟ್ ಕ್ರಾಂತಿಕಾರಿ, ಸಿದ್ಧಾಂತವೇತ್ತ, ತ್ಯಾಗಜೀವಿ, ಸರಳ ಜೀವಿ ಕಾಮ್ರೇಡ್ ಇಎಂಎಸ್ ಗೆ ಕರ್ನಾಟಕದ ದುಡಿಯುವ ಜನರ ಪರವಾಗಿ 'ಐಕ್ಯರಂಗ' ತನ್ನ ಗೌರವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತದೆ.

○



ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕಂಬನಿ

ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳವಳಿಯ ಧೀಮಂತ ನಾಯಕರು, ಭಾರತ ಕಮುಯನಿಸ್ಟ್ ಚಳುವಳಿಯ ಆಧಾರ ಸ್ತಂಭವಾದ ಕಾಂ।। ಇ.ಎಂ.ಎಸ್. ನಂಬೂದರಿ ಪಾದ್ ನಮ್ಮನ್ನಗಲಿದ್ದಾರೆ. ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರೂ ಕೇರಳದಲ್ಲಿ ಸಮಾಜ ಸುಧಾರಣಾ ಚಳುವಳಿಯ ನೇತಾರರು, ಜವಾಹರ್‌ಲಾಲ್ ನೆಹರು, ಜಯಪ್ರಕಾಶ್ ನಾರಾಯಣ ರವರ ಒಡನಾಡಿಗಳು ಆದ ಕಾಂ।। ಇ.ಎಂ.ಎಸ್. ನಂಬೂದರಿಪಾದ್ ರವರ ನಿಧನ ಭಾರತದ ಪ್ರಾಜಾಸತ್ತಾತ್ಮಕ ಚಳುವಳಿಗೆ ಕ್ರಾಂತಿಕಾರಿ ಚಳುವಳಿಗೆ ಒಂದು ದೊಡ್ಡ ನಷ್ಟ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ತನ್ನ ಅಶ್ರುತರ್ಪಣ ಸಲ್ಲಿಸಿದೆ.

ಪುಟ 8 ನೋಡಿ

ಐಕ್ಯರಂಗ
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ
ಸಂಪುಟ 21 ಸಂಚಿಕೆ 13 ಮಾರ್ಚ್ 23-29, 1998 ರೂ.2.00




ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (೧೭೫೭ -೧೯೪೭)

ಸಾಮ್ರಾಜ್ಯಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಳೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಈ ಅವಧಿಯಲ್ಲಿ ಗಮನಸೆಳೆದ ಇನ್ನೊಂದು ಸಾಹಸವೆಂದರೆ ಫ್ಯಾಸಿಸಂ-ವಿರೋಧಿ ಯುದ್ಧದಲ್ಲಿ ಫ್ರಾನ್ಸಿನಲ್ಲಿ ಭಾರತೀಯ ಹುಡುಗಿಯೊಬ್ಬಳ ಬಲಿದಾನ. ಆಕೆಯ ಹೆಸರು **ನೂರ್ ಇನಾಯತ್ ಖಾನ್** ಅಥವಾ ನೂರುನ್ನೀಸಾ ಬೇಗಂ. ಪ್ಯಾರಿಸಿನಲ್ಲಿ




ವಾಸಿಸಲಾರಂಭಿಸಿದ್ದ ಟಿಪ್ಪುಸುಲ್ತಾನ್ ವಂಶಜಳು ಆಕೆ. ಫ್ರಾನ್ಸ್ ನಾಝಿ ಜರ್ಮನಿ ವಶವಾದಾಗ ಆಕೆಯ ಕುಟುಂಬ ಇಂಗ್ಲೆಂಡಿಗೆ ಓಡಿಹೋಯಿತು. ಅಲ್ಲಿ ಈಕೆ ವಿಮಾನ ಪಡೆ ಸೇರಿದಳು. ಆಕೆಯ ಕೇಳಿಕೆಯ ಮೇರೆಗೆ ಆಕೆಯನ್ನು ಪ್ಯಾರಾಚೂಟ್ ಮೂಲಕ ಪ್ಯಾರಿಸಿನಲ್ಲಿ ಇಳಿಬಿಡಲಾಯಿತು. ಅಲ್ಲಿ ಹದಿನೆಂಟು ತಿಂಗಳು ಆಕೆ ಗುಪ್ತ ರೇಡಿಯೋ ಮೂಲಕ ನಾಝಿ ಚಟುವಟಿಕೆಗಳ ವರದಿಯನ್ನು ಬ್ರಿಟಿಶರಿಗೆ ಕೊಡುವ ಅಪಾಯಕಾರಿ ಕೆಲಸ ಮಾಡುತ್ತಿದ್ದಳು. ಕೊನೆಗೂ ಸಿಕ್ಕಿಬಿದ್ದು ನಾಝಿಗಳು ಚಿತ್ರಹಿಂಸೆ ಮಾಡಿದರೂ ತುಟಿಪಿಟಿಕ್ಕೆನ್ನದ ಆಕೆಯನ್ನು ಕುಖ್ಯಾತ ಡಕಾವು ಯಾತನಾ ಶಿಬಿರಕ್ಕೊಯ್ದು ಗುಂಡಿಕ್ಕಿ ಕೊಂದರು.

ಸೆಪ್ಟೆಂಬರ್ 1939 ರಲ್ಲಿ ಎರಡನೇ ಮಹಾಯುದ್ಧ ಭುಗಿಲೆದ್ದಾಗ ಭಾರತದಲ್ಲಿ ಬ್ರಿಟಿಶ್ ಸಾಮ್ರಾಜ್ಯಶಾಹಿಯ ವಿರುದ್ಧ ಏರ್ಪಟ್ಟಿದ್ದ ಐಕ್ಯ ರಾಷ್ಟ್ರೀಯ ರಂಗ ಮೂರು ವಿಭಾಗಗಳಾಗಿ ಒಡೆಯಿತು ಎಂಬುದನ್ನು ಈ ಹಿಂದೆ ಓದಿದ್ದೀರಿ. ಅವುಗಳಲ್ಲಿ ಕಾಂಗ್ರೆಸ್ ನೇತೃತ್ವದ ಕ್ವಿಟ್ ಇಂಡಿಯಾ ಚಳುವಳಿ ಹಾಗೂ ನೇತಾಜಿ ಬೋಸರ ನೇತೃತ್ವದ ಆಝಾದ್ ಹಿಂದ್ ಸೇನೆಯ ಹೋರಾಟದ ಬಗ್ಗೆಯೂ ಓದಿರುವಿರಿ. ಇದರಲ್ಲಿ ಮೂರನೇ ವಿಭಾಗವೆಂದರೆ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಫ್ಯಾಸಿಸಂ-ವಿರೋಧಿ ಜನತಾಯುದ್ಧ ಆಂದೋಲನ.

ಜೂನ್ 22, 1941 ರಂದು ಹಿಟ್ಲರ್‌ನ ಜರ್ಮನಿ ಸೋವಿಯತ್ ಒಕ್ಕೂಟದ ಮೇಲೆ ಧಾಳಿ ಮಾಡಿದಾಗ ಆಗ ಕಾನೂನುಬಾಹಿರವಾಗಿದ್ದ ಭಾರತ ಕಮ್ಯುನಿಸ್ಟ್ ಪಕ್ಷದೊಳಗೆ ಒಂದು ದೊಡ್ಡ ಚರ್ಚೆ ಆರಂಭವಾಯಿತು. ಈ ಯುದ್ಧದ ಸ್ವರೂಪ ಎಂತಹದು? ಸೋವಿಯತ್ ಒಕ್ಕೂಟದ ಮೇಲೆ ಧಾಳಿಯೊಂದಿಗೆ ಈ ಮಹಾಯುದ್ಧದ ಸ್ವರೂಪದಲ್ಲಿ ಮೂಲಭೂತ ಬದಲಾವಣೆ ಬಂದಿದೆ, ಇದು ಸಾಮ್ರಾಜ್ಯಶಾಹಿ ಯುದ್ಧದಿಂದ ಈಗ ಫ್ಯಾಸಿಸಂ-ವಿರೋಧಿ ಯುದ್ಧವಾಗಿ ಮಾರ್ಪಟ್ಟಿದೆ ಎಂಬ ತೀರ್ಮಾನಕ್ಕೆ ಭಾರತ ಕಮ್ಯುನಿಸ್ಟ್ ಪಕ್ಷ ಬಂತು. ಆದ್ದರಿಂದ ಯುದ್ಧ-ವಿರೋಧಿ ನಿಲುವನ್ನು ಬದಲಿಸಿ ಅದನ್ನು ಬೆಂಬಲಿಸುವ ಸ್ವತಂತ್ರ ನಿಲುವನ್ನು ಸಿಪಿಐ ತಳೆಯಿತು.

ಪಕ್ಷವನ್ನು ಕಾನೂನುಬದ್ಧಗೊಳಿಸುವ ಬೇಡಿಕೆಯನ್ನಿಡಲಾಯಿತು. ಹಿಟ್ಲರನ ವಿರುದ್ಧ ಯುದ್ಧದಲ್ಲಿ ತೊಡಗಿದ್ದ ಬ್ರಿಟಿಶರು ಜುಲೈ 1942 ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷವನ್ನು ಕಾನೂನುಬದ್ಧ ಗೊಳಿಸಿದರು.

ಕಮ್ಯುನಿಸ್ಟರು ಎಲ್ಲಾ ಜನವಿಭಾಗಗಳ ಪ್ರತಿನಿಧಿಗಳನ್ನೊಳಗೊಂಡ **'ಫ್ರೆಂಡ್ಸ್ ಆಫ್ ಸೋವಿಯತ್ ಯೂನಿಯನ್'**(ಸೋವಿಯತ್ ಯೂನಿಯನ್‌ನ ಮಿತ್ರರು -FSU.) ಎಂಬ ಸಂಘಟನೆಯನ್ನು ರಚಿಸುವಲ್ಲಿ ಮುತುವರ್ಜಿ ವಹಿಸಿದರು. ಪ್ರಸಿದ್ಧ ಕ್ರಾಂತಿಕಾರಿ ಡಾ.ಭೂಪೇಂದ್ರನಾಥ್ ದತ್ ಇದರ ಅಧ್ಯಕ್ಷರಾದರು.



ಯುದ್ಧದ ಫ್ಯಾಸಿಸಂ-ವಿರೋಧಿ ಸ್ವರೂಪವನ್ನು ಜನಜನಿತಗೊಳಿಸಲು ಸಿಪಿಐ ಈ ಸಮಯದಲ್ಲಿ ಅನುಸರಿಸಿದ ಕಾರ್ಯತಂತ್ರದ ಮುಖ್ಯ ಅಂಶವೆಂದರೆ ಬಂಧಿತ ರಾಷ್ಟ್ರೀಯ ಮುಖಂಡರನ್ನು ಬಿಡುಗಡೆ ಮಾಡಬೇಕು, ಒಂದು ರಾಷ್ಟ್ರೀಯ ಸರಕಾರ ರಚಿಸಬೇಕು ಎಂಬ ಒತ್ತಾಯ ತರುವುದು.

1941 ರಲ್ಲಿ ಮಲಬಾರಿನ ಪ್ರಸಿದ್ಧ ಕಮ್ಯುನಿಸ್ಟ್ ಮುಖಂಡ ಹಾಗೂ ಒಂದು ಬೃಹತ್ ರೈತ-ಹೋರಾಟದ ಮುಖಂಡ ಕೆ.ಪಿ.ಆರ್.ಗೋಪಾಲನ್‌ಗೆ ಮರಣದಂಡನೆ ವಿಧಿಸಲಾಯಿತು. ಗಾಂಧೀಜಿ, ನೆಹರೂರವರ ಪ್ರಯತ್ನಗಳಿಂದಾಗಿ ವಿಶ್ವವ್ಯಾಪಿಯಾಗಿ ನಡೆದ ಪ್ರತಿಭಟನೆಯಿಂದಾಗಿ ಅವರಿಗೆ ಮರಣದಂಡನೆಯಾಗಲಿಲ್ಲ. 1943 ರಂದು ಕಯ್ಯೂರು ರೈತ ಹೋರಾಟದ ನಾಲ್ಕು ವೀರರಿಗೆ ಮರಣದಂಡನೆ ವಿಧಿಸಲಾಯಿತು. ಈ ಶಿಕ್ಷೆಯನ್ನು ಮಾಫಿ ಮಾಡಬೇಕೆಂಬ ಮನವಿಯನ್ನು ತಿರಸ್ಕರಿಸಲಾಯಿತು. ಮಾರ್ಚ್ 29 ರಂದು **ಮಡತ್ತಿಲ್ ಅಪ್ಪು, ಕುಞಂಬು ನಾಯರ್, ಚಿರಕುಂಡನ್** ಹಾಗೂ **ಅಬುಬಕರ್** ಕಣ್ಣಾನೂರು ಜೈಲಿನಲ್ಲಿ ಗಲ್ಲು ಗಂಬವೇರಿದರು.




ಕಯ್ಯೂರು ಹುತಾತ್ಮರಿಗೆ ವೀರವಂದನೆ

ಫ್ಯಾಸಿಸಂ-ವಿರೋಧಿ ಹೋರಾಟದ ಭಾಗವಾಗಿ ಪ್ರಗತಿಶೀಲ ಸಾಂಸ್ಕೃತಿಕ ಆಂದೋಲನವೂ ಬೆಳೆಯಿತು. ಫ್ಯಾಸಿಸಂ-ವಿರೋಧಿ ಲೇಖಕರ, ಕಲಾವಿದರ ಸಂಘ ರಚನೆಗೊಂಡಿತು.



ಈ ಸಮಯದಲ್ಲೇ ಇಡೀ ದೇಶವನ್ನು ತಲ್ಲಣಿಸಿದ ಬಂಗಾಳದ ಬರ ಸಂಭವಿಸಿತು. ಕಮ್ಯುನಿಸ್ಟ್ ಪಕ್ಷ ಟ್ರಾಮ್ ಕಾರ್ಮಿಕರ ಸಂಘ, ವಿದ್ಯಾರ್ಥಿ ಫೆಡರೇಷನ್ ಜನರಕ್ಷಾ ಸಮಿತಿ ಮತ್ತು ಮಹಿಳಾ ಆತ್ಮರಕ್ಷಾ ಸಮಿತಿಯ ಮೂಲಕ ಬರಪೀಡಿತರಿಗೆ ತನ್ನ ಕೈಲಾದ ಸಹಾಯ ನೀಡಲು ಪ್ರಯತ್ನಿಸಿತು. ಆಹಾರಧಾನ್ಯವನ್ನು ಗೋದಾಮಿನಿಂದ ಹೊರಗೆಳೆದು ವಿದ್ಯಾರ್ಥಿ ಫೆಡರೇಷನ್ ಮತ್ತು ಜನರಕ್ಷಾ ಸಮಿತಿ ಬರಪೀಡಿತರ ನಡುವೆ ಹಂಚಿದವು.



1945 ರ ಆಗಸ್ಟ್ ತಿಂಗಳು - ಜಪಾನಿನ ಕ್ವಾಂಗ್ ಟಾಂಗ್ ಸೇನೆಯನ್ನು ಸೋವಿಯತ್ ಸೇನೆ ಸುಮಾರಾಗಿ ಸಂಪೂರ್ಣವಾಗಿಯೇ ಧ್ವಂಸ ಮಾಡಿತ್ತು. ಅದು ಇನ್ನೇನು ಶರಣಾಗುವುದರಲ್ಲಿತ್ತು. ಅಷ್ಟರಲ್ಲೇ ಅಮೆರಿಕನ್ ಅಧ್ಯಕ್ಷ ಟ್ರೂಮನ್‌ರ ಆದೇಶದ ಮೇರೆಗೆ ಹಿರೋಶಿಮಾ ಮತ್ತು ನಾಗಾಸಾಕಿಯ ಮೇಲೆ ಅಣುಬಾಂಬ್ ಹಾಕಿದಾಗ ಅಣುಯುಗ ಆರಂಭವಾಯಿತು. ಅಣುಬಾಂಬಿನ ವಿನಾಶದ ಸುದ್ದಿಗಳು ಜಗತ್ತನ್ನೇ ತತ್ತರಗೊಳಿಸಿದವು. ಇದಕ್ಕೆ ಮೊದಲು ಹಿಟ್ಲರ್ ಪಡೆ ಸೋವಿಯತ್ ಕೆಂಪು ಸೇನೆಗೆ ಶರಣಾಗಿತ್ತು.

(ಮುಂದುವರಿಯುವುದು)



ಹೆಚ್ಚಿನ ಉದಾರೀಕರಣದ ತಯಾರಿ

ಕೇಂದ್ರ ಸರ್ಕಾರದ ವಿವಿಧ ಮಂತ್ರಾಲಯಗಳ ಮುಖ್ಯ ಅಧಿಕಾರಿಗಳ ಗುಂಪೊಂದು ಉದಾರೀಕರಣದ ಪಥದಲ್ಲಿ ಮುಂದೆ ಏನೇನು ಮಾಡಬೇಕೆಂಬುದರ ಚರ್ಚೆ ನಡೆಸಿದೆಯಂತೆ. ವಿವಿಧ ಮಂತ್ರಾಲಯಗಳ ಜೊತೆಗೆ ಸಮಾಲೋಚಿಸಿ ಈಗಿನ ಸ್ಥಿತಿಯಲ್ಲಿ ಏನೇನು ಲೋಪಗಳಿವೆ ಮತ್ತು ಅವುಗಳನ್ನು ಸರಿಪಡಿಸಲು ಎಂತೆಂತಹ ಕ್ರಮಗಳನ್ನು ಕೈಗೊಳ್ಳಬೇಕೆಂಬುದು ಈ ಚರ್ಚೆಯ ತಿರುಳು. ಇಲ್ಲಿ ಗುಮನಾರ್ಹವಾದುದೇನೆಂದರೆ ಬಿಜೆಪಿಯ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬರುತ್ತದೆ ಮತ್ತು ಬಿಜೆಪಿ ಧೋರಣೆಯಿಂದ ಸಿದ್ಧಾಂತದ ನೆಲೆಯಿಂದ ಏನೇನು ಮಾಡಬೇಕೆಂಬ ಬಗ್ಗೆಯೆ ಚರ್ಚೆ ನಡೆಯಿತಂತೆ. ಅಂದರೆ ಈ ಅಧಿಕಾರಿಗಳು ಬಿಜೆಪಿ ಅಧಿಕಾರಕ್ಕೆ ಬಂದರೂ ಉದಾರೀಕರಣದ ಆರ್ಥಿಕ ಮುಂದುವರೆಯುತ್ತದೆ. ಈಗಿರುವ ಸ್ಥಿತಿಯಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳು ಎಲ್ಲೆಲ್ಲಿ ಆಗಬೇಕೆಂಬ ಬಗ್ಗೆ ತಮ್ಮ ವಿಚಾರಗಳನ್ನು ಕೇಂದ್ರೀಕರಿಸಿದ್ದರು.

ಈ ಗುಂಪು ಚರ್ಚೆಮಾಡಿದ ವಿಷಯಗಳನ್ನು ನೋಡಿ:

- ಹೂಡಿಕೆಗಳಿಗೆ ತಂತಾನೆ ಅನುಮೋದನೆ ದೊರೆವ ಬಗ್ಗೆ ಆಂತರ್‌ರಚನಾ ಸೌಕರ್ಯಗಳು ಮತ್ತು ಎಲೆಕ್ಟ್ರಾನಿಕ್ಸ್ ವಲಯಗಳಲ್ಲಿ ಹೆಚ್ಚಿನ ಉದಾರೀಕರಣದ ಅವಶ್ಯಕತೆ,
- ವಿದೇಶೀ ನೇರ ಹೂಡಿಕೆಗಳ ವಿಷಯದಲ್ಲಿ ಈಗಿರುವ ಅಡೆ ತಡೆಗಳು ಹೂಡಿಕೆಯನ್ನು ಆಕರ್ಷಿಸಬೇಕಾದ ಕ್ಷೇತ್ರಗಳನ್ನು ಗುರುತಿಸುವುದು.
- ಎಲೆಕ್ಟ್ರಾನಿಕ್ಸ್ ಕ್ಷೇತ್ರಕ್ಕೆ ಮೊದಲ ಆದ್ಯತೆ ನೀಡುವುದು ಇತ್ಯಾದಿ.

ಇದು ಒಂದು ವಿಷಯವನ್ನಂತು ಬಹಳ ಸ್ಪಷ್ಟಗೊಳಿಸುತ್ತದೆ. ಬಿಜೆಪಿ ಹೇಳುವ ಸ್ವದೇಶಿ ಇತ್ಯಾದಿಗಳು ಸುದ್ದಿ ಮಾಡಲು ಮಾತ್ರ. ನಿಜದಲ್ಲಿ ಅದು ಕಾಂಗ್ರೆಸ್‌ನ ಉದಾರೀಕರಣವನ್ನೇ ಮುಂದುವರೆಸಿಕೊಂಡು ಹೋಗುತ್ತದೆ. ಸ್ವದೇಶಿ ಎಂಬ ಮುಖವಾಡ ವಿರುತ್ತದೆ.

ಬಿಜೆಪಿ ಈಗ ಎಲ್ಲ ವಿಷಯದಲ್ಲೂ ಒಂದೊಂದು ಮುಖವಾಡ ಧರಿಸಿ ತನ್ನ ನಿಜ ಸ್ವರೂಪವನ್ನು ಮುಚ್ಚಿಟ್ಟುಕೋಳ್ಳುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಿದೆ ಎಂಬುದು ಎದ್ದು ಕಾಣಿಸುತ್ತಿದೆಯಲ್ಲವೆ? ○

ಬದುಕನ್ನೇ ಕಹಿಮಾಡಬಲ್ಲ ಆಮದು ಸಕ್ಕರೆ

ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಕ್ಕರೆಯ ಬೆಲೆ ಕುಸಿದಿದೆ. ಇದರಿಂದಾಗಿ ಭಾರತಕ್ಕೆ ಆಮದು ಸಕ್ಕರೆ ದೊಡ್ಡ ಪ್ರಮಾಣದಲ್ಲಿ ಹರಿದು ಬರಬಹುದು. ಹೀಗೆ ಸಕ್ಕರೆ ಆಮದಾದರೆ ದೇಶದಲ್ಲಿ ಸಕ್ಕರೆ ಬೆಲೆಗಳು ಕುಸಿಯಬಹುದು. ಬೆಲೆಗಳು ಕುಸಿದರೆ ಕಬ್ಬು ಬೆಳೆದ ರೈತರಿಗೆ ಹೊಡೆತ ಬೀಳುತ್ತದೆ. ಆಂಧ್ರದಲ್ಲಿ ಹತ್ತಿ ರೈತರು, ಬೀದರಿನಲ್ಲಿ ತೊಗರಿ ರೈತರು ಆತ್ಮಹತ್ಯೆ ಮಾಡಿಕೊಂಡಂತೆ ಕಬ್ಬು ರೈತರು ಬೃಹತ್ ಸಮಸ್ಯೆ ಎದುರಿಸಬೇಕಾಗುತ್ತದೆ.

ಭಾರತ 1994-95 ರಲ್ಲಿ ಸಕ್ಕರೆ ಆಮದಿಗೆ ಅನುಮತಿ ನೀಡಿತು. ಆ ವರ್ಷದಲ್ಲಿ ದೇಶದಲ್ಲಿ ಸಕ್ಕರೆ ಉತ್ಪಾದನೆ ಕಡಿಮೆಯಾದದ್ದರಿಂದ ಬೆಲೆಗಳು ಗಗನಕ್ಕೇರ ತೊಡಗಿದ್ದವು. ಬೆಲೆಗಳನ್ನು ತಡೆಯಲು ಆಮದಿಗೆ ಅನುಮತಿ ನೀಡಲಾಯಿತು. ಈ ಆಮದಿನಲ್ಲಿ ದೊಡ್ಡ ಹಗರಣವೇ ನಡೆಯಿತು. ಆ ವಿಷಯ ಬೇರೆ.

ಆ ಅವಧಿಯ ನಂತರ ದೇಶದಲ್ಲಿ ಸಕ್ಕರೆ ಉತ್ಪಾದನೆ ಹೆಚ್ಚಿತು. ಆದರೆ ಸರ್ಕಾರ ಸುಂಕವಿಲ್ಲದೆ ಆಮದು ಮಾಡುವುದನ್ನು ಮುಂದುವರೆಸಿದೆ. ಆಮದು ಸುಂಕಕ್ಕೆ ತೆರಿಗೆ ವಿನಾಯತಿ ಇರುವುದರಿಂದ ದೇಶೀ ಉತ್ಪಾದಕರಿಗೆ ಹೊಡೆತ ಬೀಳುತ್ತದೆ.

ಅಲ್ಲದೆ ಬೆಳೆಗಾರನಿಗೆ ಲಾಭದಾಯಕ ಬೆಲೆದೊರಕದೇ ಹೋದಾಗ ಆತ ಈ ಬೆಳೆಯನ್ನು ಬಿಟ್ಟು ಬೇರೆ ಬೆಳೆ ಬೆಳೆಯ ಹೋಗುತ್ತಾನೆ. ಇದರಿಂದಾಗಿ ಸಕ್ಕರೆ ಉತ್ಪಾದನೆ ಕಡಿಮೆಯಾಗುತ್ತದೆ. ಮತ್ತೆ ಆಮದಿನ ಮೊರೆ ಹೋಗಬೇಕಾಗುತ್ತದೆ. ಇಂತಹ ಸಂದರ್ಭಗಳಿಗಾಗಿ ಕಾಯುತ್ತಿರುವ ಬಂಡವಾಳಿಗರು ಬೆಲೆಗಳನ್ನು ಯದ್ವಾ ತದ್ವಾ ಏರಿಸಿ ಅಥವಾ ಆಮದನ್ನು ಹೆಚ್ಚಿನ ಬೆಲೆಗೇ ಮಾರಿ ಲಾಭ ಹೊಡೆಯಲು ಮುಂದಾಗುತ್ತಾರೆ. ಬೆಳೆಗಾರ ಬಳಕೆದಾರ ಇಬ್ಬರೂ ಇದರ ನೋವನ್ನುಣ್ಣಬೇಕಾಗುತ್ತದೆ.

ಹೀಗೆ ಸಕ್ಕರೆ ಬೆಳೆಗಾರರಿಗೆ ಮತ್ತು ಬಳಕೆದಾರರಿಬ್ಬರಿಗೂ ಕಹಿಯಾಗುತ್ತದೆ.

ಕಹಿಯಾಗಲಿರುವ ಚಹಾ?

ಸಕ್ಕರೆ ಕಹಿಯಾದರೆ ಚಹಾ ಎಷ್ಟು ಕಹಿಯಾಗ ಬೇಡ? ಅಲ್ಲವೆ? ಈ ವರ್ಷದಲ್ಲಿ ಚಹಾ ಸಹ ಹೆಚ್ಚು ಕಹಿಯಾಗುವ ಲಕ್ಷಣಗಳು ಆಗಲೇ ಕಾಣತೊಡಗಿವೆ. ಈ ವರ್ಷದಲ್ಲಿ ಚಹಾ ಉತ್ಪಾದನೆ ಹೆಚ್ಚಾಗುವುದರ ಜೊತೆಗೇ ರಫ್ತು ಬೇಡಿಕೆಯೂ ಹೆಚ್ಚಾಗಿದೆಯಂತೆ. ಆದ್ದರಿಂದ ಉತ್ಪಾದನೆ ಹೆಚ್ಚಾದರೂ ರಫ್ತು ಹೆಚ್ಚಿರುವುದರಿಂದ ಭಾರತದ ಗ್ರಾಹಕರಿಗೆ ಚಹಾದ ಬೆಲೆ ಹೆಚ್ಚಾಗತೊಡಗಿದೆ. ಆದ್ದರಿಂದಲೇ ಚಹಾ ಹೆಚ್ಚು ಕಹಿಯಾಗತೊಡಗಿರುವುದು.

ನಮ್ಮ ದೇಶದ ಆಂತರಿಕ ಬೇಡಿಕೆ 63.5 ಕೋಟಿ ಕೇಜಿಗಳಷ್ಟು. ರಫ್ತು ಹೆಚ್ಚಿದೊಡನೆ ಆಂತರಿಕ ಪೂರೈಕೆ ಕಡಿಮೆಯಾಗುವುದರಿಂದ ಬೆಲೆಗಳು ಏರತೊಡಗಿವೆ.

ಈ ಸಾಲಿನಲ್ಲಿ ಇತರ ಚಹಾ ಉತ್ಪಾದಕ ದೇಶಗಳಾದ ಶ್ರೀಲಂಕಾ ಕೀನ್ಯಾ ಮತ್ತು ಇಂಡೋನೇಶಿಯಾಗಳಲ್ಲಿ ಬೆಳೆ ವಿಫಲವಾಗಿರುವುದರಿಂದ ಭಾರತದ ಚಹಾಕ್ಕೆ ಭಾರಿ ಬೇಡಿಕೆ ಉಂಟಾಗಿದೆ. ಇದರ ಜೊತೆಗೆ ಬಹಳ ವರ್ಷದ ನಂತರ(ಸೋವಿಯತ್ ವಿಘಟನೆಯ ನಂತರ) ರಷ್ಯ ಭಾರತದ ಚಹವನ್ನು ಮತ್ತೆ ಕೊಳ್ಳಲು ಮುಂದೆ ಬಂದಿದೆಯಂತೆ ಅದು ಭಾರತದಿಂದ 8 ಕೋಟಿ ಕೇಜಿಗಳಷ್ಟು ಚಹಾ ಕೊಳ್ಳಲಿದೆಯಂತೆ.

ಹೀಗೆ ಎಲ್ಲ ಕಡೆಗಳಿಂದ ಬೇಡಿಕೆ ಹೆಚ್ಚಾಗಿರುವುದರಿಂದ ಚಹಾದ ಆಂತರಿಕ ಬೆಲೆ ಹೆಚ್ಚಾಗಿದೆ. ಸ್ವಾವಲಂಬನೆಯನ್ನು ಮರೆತು ಬರೀ ರಫ್ತಿಗಾಗಿ ನಮ್ಮ ಆರ್ಥಿಕವನ್ನು ಹದಗೊಳಿಸಲು ಹೊರಟರೆ ಇದಾಗದೆ ಇನ್ನೇನು ಆದೀತು? ದೇಶಕ್ಕೆ ರಫ್ತು ಬಹಳ ಮುಖ್ಯವೇ ಸರಿ. ಯಾಕೆಂದರೆ ಅದು ಬಹು ಅಮೂಲ್ಯವಾದ ವಿದೇಶೀ ವಿನಿಮಯವನ್ನು ತರುತ್ತದೆ. ನಮ್ಮ ದೇಶದ ಜನರ ಹಿತಗಳು ಅಷ್ಟೇ ಮುಖ್ಯವಲ್ಲವೆ? ಉದಾರೀಕರಣಕ್ಕಿದು ಅರ್ಥವಾಗದು ಅಷ್ಟೇ.

ಹಿಂದೂಸ್ಥಾನ್ ಲಿವರ್‌ನ ಹಗರಣ

ಉದಾರೀಕರಣ ಅಂದರೆ ಹಗರಣಗಳ ಅಧಿಕಾರ ಎಂದೇ ಹೇಳಬಹುದು. ಯಾಕೆಂದರೆ ಹಗರಣಗಳಿಗೆ ಅವಕಾಶ ಮಾಡಿಕೊಡುವುದು ಹಗರಣಗಳ ಮೇಲಿನ ನಿರ್ಬಂಧಗಳನ್ನು ತೆಗೆದು ಹಾಕುವುದೇ ಉದಾರೀಕರಣ. ಅಂಗೈ ಕೊಟ್ಟರೆ ಮುಂಗೈ ನುಂಗಿದ ಎಂಬಂತೆ ಒಂದು ಮಟ್ಟದ ನಿರ್ಭಂಧಗಳನ್ನು ತೆಗೆದು ಹಾಕಿದರೆ ಇನ್ನೊಂದು ಮಟ್ಟದಲ್ಲಿನ ನಿರ್ಬಂಧಗಳನ್ನು ಕಂಪನಿಗಳು ಮುರಿಯುತ್ತವೆ. ಅದರಲ್ಲೂ ಬಹುರಾಷ್ಟ್ರೀಯ ಕಂಪನಿಗಳ ವಿಷಯವಂತೂ ಕೇಳುವುದೇ ಬೇಡ.

ಈಗಿನ ವಿಲೀನ, ವಶೀಕರಣದ ಯುಗದಲ್ಲಿ ಹಿಂದೂಸ್ಥಾನ್ ಲಿವರ್ ಲಿಮಿಟೆಡ್ ಮತ್ತು ಬ್ರೂಕ್ ಬಾಂಡು ಲಿಪ್ಟನ್ ಇಂಡಿಯಾ ಲಿಮಿಟೆಡ್‌ಗಳ ವಿಲೀನ ಇತ್ತೀಚೆಗೆ ನಡೆಯಿತು. ಇಂತಹ ವಿಲೀನಗಳ ಸಂದರ್ಭದಲ್ಲಿ ಕಂಪನಿಗಳ ಶೇರುಗಳನ್ನು ಕೊಳ್ಳುವ ಮೂಲಕ ಹಿಡಿತವನ್ನು ಸಾಧಿಸ ಲಾಗುವುದರಿಂದ ಶೇರುಗಳ ವ್ಯವಹಾರ ಜೋರಾಗಿ ನಡೆಯುತ್ತದೆ.

ಇದರಲ್ಲಿ ದೊಡ್ಡ ಪ್ರಮಾಣದ ಮೋಸಗಳಾಗುತ್ತವೆ. ಆದ್ದರಿಂದ ಸೆಬಿ(ಅಂದರೆ ಸೆಕ್ಯುರಿಟೀಸ್ ಎಕ್ಸ್ ಚೇಂಜ್ ಬೋರ್ಡ್ ಆಫ್ ಇಂಡಿಯಾ) ವಿಲೀನಗಳ ಮೇಲೆ ಕೆಲವು ನಿರ್ಬಂಧಗಳನ್ನು ಹೇರಿದೆ.

ವಿಲೀನದ ನಿರ್ಧಾರ ಗೊತ್ತಿರುವ ಕಂಪನಿ ಒಳಗಿನವರು ಶೇರುಗಳ ವ್ಯವಹಾರ ದಲ್ಲಿ ತೊಡಗಬಾರದು. ಯಾಕೆಂದರೆ ಅವರಲ್ಲಿ ಶೇರುಗಳ ಬೆಲೆಗಳ ಬಗೆಗಿನ ಸೂಕ್ಷ್ಮ ಮಾಹಿತಿ ಇರುತ್ತದೆ.

ಹೆಚ್.ಎಲ್.ಎಲ್.ನ ನಿರ್ದೇಶಕರುಗಳು ಇಂತಹ ವ್ಯವಹಾರದಲ್ಲಿ ತೊಡಗಿದರು. ಅವರು ಯು.ಟಿ.ಐ ನಿಂದ 3.40 ಕೋಟಿ ರೂಪಾಯಿಗಳ ಬ್ರೂಕ್ ಬಾಂಡ್ ಲಿಪ್ಟನ್ ಇಂಡಿಯಾ ಲಿಮಿಟೆಡ್ (ಬಿಬಿಎಲ್‌ಐಎಲ್)ನ ಶೇರುಗಳನ್ನು ಖರೀದಿಸಿದರು. ಇದು ಸೆಬಿಯ ನಿರ್ಬಂಧನೆಗಳ ಉಲ್ಲಂಘನೆ ಎಂದು ಸೆಬಿ ತೀರ್ಮಾನವಿತ್ತಿದೆ. ಸೆಬಿ ಹೆಚ್‌ಎಲ್‌ಎಲ್‌ನ ಐದು ಜನ ನಿರ್ದೇಶಕರಿಗೆ ಶಿಕ್ಷೆ ನೀಡುವ ತೀರ್ಮಾನ ನೀಡಿದೆ.

ಭಾರತದಲ್ಲಿ ಇಂತಹ ತೀರ್ಮಾನ ಮೊದಲ ಬಾರಿಗೆ ಬಂದಿದೆ ಎನ್ನಲಾಗುತ್ತಿದೆ. ಈ ತೀರ್ಪಿನ ವಿರುದ್ಧ ಕೇಂದ್ರ ಸರ್ಕಾರಕ್ಕೆ ಮೊರೆ ಹೋಗುವ ಅವಕಾಶವಿದೆ. ಆದ್ದರಿಂದ ಮುಂದಿನ ಕೇಂದ್ರ ಸರ್ಕಾರ ಯಾವುದಿರುತ್ತದೆ ಮತ್ತು ಅದು ಎಂತಹ ನಿಲುವನ್ನು ಈ ವಿಷಯದಲ್ಲಿ ತಾಳುತ್ತದೆ ಎಂಬುದು ಮುಖ್ಯ.

ಸೆಬಿ ಹಿಂದೂಸ್ಥಾನ್ ಲಿವರ್ ಲಿಮಿಟೆಡ್ ತನ್ನ ಸಮರ್ಥನೆಗಾಗಿ ಬಳಸಿದ ವಾದಗಳನ್ನೇ ಅದರ ವಿರುದ್ಧದ ಸಾಕ್ಷಿಯಾಗಿ ಬಳಸಿದೆ ಎಂದು ಹೇಳಲಾಗುತ್ತಿದೆ.

ಏನೇ ಇರಲಿ, ಕಂಪನಿಗಳ ವಿಷಯದಲ್ಲಿ ಇದೊಂದು ಮುಖ್ಯ ತೀರ್ಪು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ.

ಚಾಲ್ತಿ ಖಾತೆಯಲ್ಲಿ ಕೊರತೆಯ ಭೂತ

ವಿದೇಶೀ ವಿನಿಮಯದ ಶಿಲ್ಕು ಬೇಕಾದಷ್ಟಿದೆ ಎಂದು ಸರ್ಕಾರ ಡಂಗುರ ಸಾರುತ್ತಿದ್ದರೆ ಇಲ್ಲಿ ಈ ಚಾಲ್ತಿ ಖಾತೆಯ ಕೊರತೆಯ ಸುದ್ದಿ ಬರುತ್ತಿದೆ. ಚಾಲ್ತಿ ಖಾತೆಯಲ್ಲಿ ಕೊರತೆ ಎಂದರೆ ರಫ್ತಿನ ಮೊತ್ತಕ್ಕಿಂತ ಆಮದಿನ ಮೊತ್ತವೇ ಹೆಚ್ಚಾಗಿದೆ ಎಂದರ್ಥ. ಅಂದರೆ ರಫ್ತನ್ನು ಹೆಚ್ಚು ಮಾಡಲಾಗದಿದ್ದರೂ ದೇಶದ ಆಮದು ಹೆಚ್ಚಾಗಿದೆ ಎಂದರ್ಥ.

ಕಳೆದ ವರ್ಷ ಈ ಕೊರತೆ 3.7 ಬಿಲಿಯನ್ ಅಮೇರಿಕನ್ ಡಾಲರುಗಳಷ್ಟಿದ್ದರೆ ಈ ಸಾಲಿನಲ್ಲಿ ಅದು 5.4 ಬಿಲಿಯನ್ ಅಮೇರಿಕನ್ ಡಾಲರುಗಳಷ್ಟಕ್ಕೆ ಏರಿದೆಯಂತೆ.

ಎನ್.ಜಿ.ಇ.ಎಫ್ ಮತ್ತೆ ಮಾರಾಟಕ್ಕೆ

ಕರ್ನಾಟಕದ ಸರ್ಕಾರಿ ಉದ್ಯಮವಾದ ಎನ್.ಜಿ.ಇ.ಎಫ್.ಅನ್ನು ಸರ್ಕಾರ ಮತ್ತೆ ಮಾರಾಟಕ್ಕೆ ಇಟ್ಟಿದೆಯಂತೆ. ಐ.ಡಿ.ಬಿ.ಐ ಈ ಉದ್ದಿಮೆಯ ಪುನರುಜ್ಜೀವನಕ್ಕೆ ಯೋಜನೆಯೊಂದನ್ನು ತಯಾರಿಸಿದ್ದು ಈ ಯೋಜನೆ ಎನ್.ಜಿ.ಇ.ಎಫ್.ನ ಆಸ್ತಿಯ ಮಾರಾಟದ ಮೇಲೆ ಅವಲಂಬಿಸಿದೆಯಂತೆ.

ಈಗ ಭೂಮಿಯ ಬೆಲೆಯಲ್ಲಿ ಕುಸಿತ ಉಂಟಾಗಿರುವುದರಿಂದ ನಿರೀಕ್ಷಿಸಿದಷ್ಟು ನಗದು ಹರಿದು ಬರುತ್ತಿಲ್ಲವಂತೆ. ಆದ್ದರಿಂದ ಸರ್ಕಾರ ಕೈ ಚೆಲ್ಲಿದೆ. ಬೇರೆ ಯಾವುದೇ ಪ್ರಯತ್ನಗಳನ್ನು ಮಾಡದೆ ಉದ್ಯಮವನ್ನೇ ಖಾಸಗಿಯವರಿಗೆ ಮಾರುವ ನಿರ್ಧಾರಕ್ಕೆ ಅದು ಬಂದಿದೆಯಂತೆ.

ಇದಲ್ಲವೇ ಉದಾರೀಕರಣದ ರೀತಿ!!

ಕೋಲಾರ ಕ್ಷೇತ್ರದ ಫಲಿತಾಂಶ: ಒಂದು ವಿಮರ್ಶೆ

ಎಸ್.ವೈ.ಗುರುಶಾಂತ್

ಕೋಲಾರ ಲೋಕಸಭಾ ಕ್ಷೇತ್ರದ ಫಲಿತಾಂಶ ಹಲವಾರು ಗಂಭೀರ ಅಂಶಗಳನ್ನು ತೆರದಿಟ್ಟಿದೆ. ಕಾಂಗ್ರೆಸ್ 3,04261 ಮತಗಳನ್ನು ಗಳಿಸಿ ಮತ್ತೆ ಗೆದ್ದಿದೆ. ಕಳೆದ ಬಾರಿ 17 ಸಾವಿರ ಮತಗಳ ಅಂತರದಲ್ಲಿ ಸೋಲನ್ನಪ್ಪಿದ್ದ ಜನತಾದಳ ಈ ಬಾರಿ 2,26,289 ಮತಗಳನ್ನೂ, 83 ಸಾವಿರ ಮತ ಪಡೆದಿದ್ದ ಬಿಜೆಪಿಯು 2,25368 ಮತಗಳನ್ನುಗಳಿಸಿವೆ. ಸಿಪಿಐ(ಎಂ) ಗೆ ಬಂದ ಮತಗಳು 8127.

1996 ರ ಲೋಕಸಭಾ ಚುನಾವಣೆ ಯಲ್ಲಿ ಆದ ಮತದಾನ ಶೇಕಡಾ 68. ಈ ಬಾರಿ 72 ಕ್ಕೆ ಹೆಚ್ಚಿದೆ. ಒಟ್ಟು ಮತದಾರರ ಸಂಖ್ಯೆಯೂ ಹೆಚ್ಚಾಗಿದ್ದು ಇದರಲ್ಲಿ ಬಹುಪಾಲು ಯುವಜನರದ್ದು. ಹಾಗೆ ನೋಡಿದರೆ ಕಾಂಗ್ರೆಸ್ ತನ್ನ ಮತದಾರರ ಸಂಖ್ಯೆಯನ್ನು ಕಾಯ್ದುಕೊಂಡಿದೆ. ಅಂದರೆ ಕಾಂಗ್ರೆಸ್‌ನಿಂದ ಜನ ದೂರ ಸರಿದೇ ಇಲ್ಲ ಎಂದು ಅರ್ಥವಲ್ಲ. ಆದರೆ ಜನತಾದಳ ದಿಂದ ದೂರ ಸರಿಯುತ್ತಿರುವುದನ್ನು ಅದರಲ್ಲಿಯೂ ಅಲ್ಪಸಂಖ್ಯಾತರನ್ನು ಸೆಳೆಯು ವುದರ ಮೂಲಕ ತನ್ನ ಕೊರತೆಯನ್ನು ತುಂಬಿಕೊಂಡಿದೆ. ಜನತಾದಳ ಸುಮಾರು 78 ಸಾವಿರದಷ್ಟು ಮತದಾರರನ್ನು ಕಳೆದುಕೊಂಡಿದ್ದು ಅದರಲ್ಲಿ ಬಿಜೆಪಿಯತ್ತ ಸರಿದಿರುವುದು ಹೆಚ್ಚು. ಈ ಪ್ರಕ್ರಿಯೆಯನ್ನು ಚುನಾವಣಾ ಪ್ರಚಾರದ ವೇಳೆಯಲ್ಲಿ ಸ್ಪಷ್ಟ ವಾಗಿ ಗಮನಿಸಬಹುದಿತ್ತು. ಜನತಾದಳದ ವಿರುದ್ಧ ಜನತೆಯ ಮನೋಭಾವ ಮತ್ತು ಕಾಂಗ್ರೆಸ್‌ನಲ್ಲಾಗುತ್ತಿದ್ದ ರಾಜಕೀಯ ಏರುಪೇರುಗಳ ನಡುವೆ ಪಕ್ಷದ ಪ್ರಚಾರಕ್ಕೆ ಜನರು ಉತ್ತಮ ಸ್ಪಂದನ ನೀಡಿದಾಗ್ಯೂ ನಮ್ಮ ಸಂಘಟನಾತ್ಮಕ ಕೊರತೆಯಿಂದಾಗಿ ಅದನ್ನೆಲ್ಲಾ ಮತಗಳನ್ನಾಗಿ ಪರಿವರ್ತಿಸ ಲಾಗಲಿಲ್ಲ. ಇವೆಲ್ಲದರ ನಡುವೆಯೂ ನಮ್ಮ ರಾಜಕೀಯಕ್ಕೆ ಒಲಿದು ದೃಢವಾಗಿ ನಿಂತವರೇ ಈ 8127 ಜನ ಮತದಾರರು.

ಜನಮನ ಸೆಳೆದ ಪ್ರಚಾರ

ಇಡೀ ಕ್ಷೇತ್ರದ ತುಂಬಾ ಅತ್ಯಂತ ಪರಿಣಾಮಕಾರಿಯಾಗಿ ಪ್ರಚಾರ ನಡೆದಿದೆ. ಆರು ರಾಜ್ಯ ಸೆಕ್ರಟಾರಿಯೇಟ್ ಸದಸ್ಯರ ಚುನಾವಣಾ ಸಮಿತಿಯಲ್ಲದೇ, ಆಯಾ ವಿಧಾನಸಭಾ ವಾರು ರಾಜ್ಯ ಸಮಿತಿ ಸದಸ್ಯರ ಅಧ್ಯಕ್ಷತೆಯಲ್ಲಿ, ಸ್ಥಳೀಯ ಮುಖಂಡರು, ಕಾರ್ಯದರ್ಶಿಯಾಗುಳ್ಳ ಚುನಾವಣಾ ಸಮಿತಿಗಳು ಮತ್ತು ಕೇಂದ್ರೀಯವಾಗಿ ಸುಮಾರು 175 ಕಾರ್ಯಕರ್ತರು ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಪ್ರತಿ ಸಂತೆಗಳಲ್ಲಿಯೂ ಹಾಗೂ ಮುಖ್ಯವಾದ ಊರುಗಳಲ್ಲಿ, ಬಹಿರಂಗ ಸಭೆಗಳು ನಡೆದಿವೆ. ಅಸಂಖ್ಯಾತ ಬೀದಿ ಬದಿಯ ಸಭೆಯನ್ನು ನಡೆಸಲಾಗಿದೆ. ಮಹಿಳಾ ತಂಡದ ಪ್ರಚಾರ ಜನರ ಅಭಿನಂದನೆಗೆ ಪಾತ್ರವಾಗಿದೆ. ಕನ್ನಡ ಹಾಗೂ ತೆಲುಗು ನಾಟಕ, ಹಾಡು ಭಾಷಣವುಳ್ಳ ಎರಡು ಕಲಾಜಾಥಾಗಳು ಇಡೀ ಕ್ಷೇತ್ರದಲ್ಲಿ ಸಂಚರಿಸಿ ಜನಮನ ಸೆಳೆದಿವೆ. ಪಕ್ಷದ ಪ್ರಧಾನ ಕಾರ್ಯದರ್ಶಿಗಳಾಗಿರುವ ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್‌ರವರು ಕೆಜಿಎಫ್‌ನಲ್ಲಿ ಫೆಬ್ರವರಿ 15 ರಂದು ಬಹಿರಂಗ ಸಭೆಯನ್ನು ದ್ದೇಶಿಸಿ ಮಾತನಾಡಿದ್ದಾರೆ. ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ. ಪಿ.ರಾಮ ಚಂದ್ರನ್ ಕ್ಷೇತ್ರಕ್ಕೆ ಭೇಟಿ ನೀಡಿದ್ದಾರೆ. ಮಾರ್ಗದರ್ಶನ ನೀಡಿದ್ದಾರೆ. ರಾಜ್ಯ ನಾಯಕರು ಪ್ರಚಾರದಲ್ಲಿ ಭಾಗವಹಿಸಿದ್ದಾರೆ. ನಮ್ಮ ಸಂಗಾತಿಗಳ ಪ್ರಚಾರ ಪರಿಣಾಮಕಾರಿ ಯಾಗಿದ್ದರಿಂದ ಬಿಜೆಪಿ, ಕಾಂಗ್ರೆಸ್, ಜನತಾದಳದವರು ಅಡ್ಡಿ ಉಂಟು ಮಾಡಿದ್ದಾರೆ. ಮಾಲೂರು, ಶ್ರೀನಿವಾಸಪುರ ಗಳಲ್ಲಿ ಬಿಜೆಪಿಯವರು, ಕೋಲಾರದಲ್ಲಿ ಜನತಾದಳದವರು ಹಲ್ಲೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಜನತೆಯೇ ಹಲ್ಲೆಕೋರರಿಂದ ರಕ್ಷಣೆ ನೀಡುವಲ್ಲಿ ಮುಂದಾಗಿ, ಅವರನ್ನು ಹಿಮ್ಮೆಟ್ಟಿಸಿದ್ದಾರೆ. ಇಡೀ ಕ್ಷೇತ್ರದಲ್ಲಿ ನಮ್ಮ ಪಕ್ಷದ ಬಗ್ಗೆ ಅಭಿಮಾನದಿಂದ ಆಸಕ್ತಿಯಿಂದ ಜನರು ಸ್ಪಂದಿಸಿದುದು ಕಂಡುಬಂದಿದೆ. 'ನಾವು ಸ್ಪರ್ಧೆಯಿಂದ ಹಿಂತೆಗೆದು ಅವರಿಗೆ ಬೆಂಬಲಿಸುತ್ತೇವೆ' ಎಂದೆಲ್ಲಾ ಜನತಾದಳ ದವರು ಆರಂಭದಿಂದ ಕೊನೆಯವರೆಗೂ ಪ್ರಚಾರಿಸುತ್ತಾ ಗೊಂದಲ ಸೃಷ್ಟಿಸಲು ಯತ್ನಿಸುತ್ತಲೇ ಬಂದರು. ಕಳೆದ 27 ವರ್ಷಗಳ ಬಳಿಕ ಸ್ಪರ್ಧಿಸುತ್ತಿರುವ ನಮ್ಮ ಪಕ್ಷ ಸ್ಪರ್ಧೆಯ ಗಂಭೀರತೆಯನ್ನು ಪುನಃ ಪುನಃ ಸಾಬೀತು ಪಡಿಸಬೇಕಾದ ಪ್ರಸಂಗ ಹಲವು ಬಾರಿ ಬಂದಿದೆ.

ಮುಂದೇನು?

ಪಕ್ಷದ ರಾಜ್ಯ ಸಮ್ಮೇಳನದ ಭಾರೀ ಯಶಸ್ವಿ ಹಾಗೂ ಈ ಚುನಾವಣಾ ಕಾರ್ಯದಲ್ಲಿ ಜನತೆಯ ಸ್ಪಂದನ ಉತ್ತಮವಾಗಿದ್ದಾಗ್ಯೂ ಗಳಿಸಿದ ಮತಗಳು ಆ ಪ್ರಮಾಣದಂತೆ ಇಲ್ಲ. ಹೀಗೇಕೆ ಎಂಬ ಬಗ್ಗೆ ಪಕ್ಷದ ರಾಜ್ಯ ಸಮಿತಿಯು ವಿವರವಾಗಿ ವಿಮರ್ಶಿಸಿದೆ. ಸಂಘಟನಾತ್ಮಕ ದೌರ್ಬಲ್ಯ ಗಳನ್ನು ಹಾಗೂ ಕೊರತೆಗಳನ್ನು ಇದು ಎತ್ತಿ ತೋರಿಸಿದೆ. ಪಕ್ಷದ ಕೆಲಸಕ್ಕೆ ಮುಳಬಾಗಿಲು, ಕೆ.ಜಿ.ಎಫ್.ಗಳಲ್ಲಿ ಇನ್ನೂ ಹೆಚ್ಚಿನ ಗಮನ ಕೇಂದ್ರೀಕರಿಸಬೇಕೆಂದು ಸೂಚಿಸಿದೆ. ಕೆಜಿಎಫ್,ಮುಳಬಾಗಿಲು, ಚಿಂತಾಮಣಿ ಗಳನ್ನು ಹೊರತುಪಡಿಸಿದರೆ ಉಳಿದ 5 ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳು ಇದೀಗ ಬೆಳೆಯುತ್ತಿವೆ. ಈ ಚುನಾವಣಾ ಕಾರ್ಯ ದಲ್ಲಿ ನೂರಾರು ಹೊಸ ಕಾರ್ಯಕರ್ತರು ಸಂಪರ್ಕಕ್ಕೆ ಬಂದಿದ್ದು ಅದನ್ನೆಲ್ಲಾ ಬಳಸಿ ಯುವಜನ ಹಾಗೂ ರೈತ ಚಳುವಳಿ ರೂಪಿಸಲು ತಕ್ಷಣ ಕ್ರಮ ವಹಿಸಲು ನಿರ್ಧರಿಸಲಾಗಿದೆ. ಈ ಹಿನ್ನಲೆಯಲ್ಲಿ ಕಾರ್ಯಕರ್ತರ ಸಭೆಗಳು ಮುಗಿದಿದ್ದು ಪುನಃ ಕ್ಷೇತ್ರವಾರು ಒಂದು ದಿನದ ತರಗತಿಗಳನ್ನು ನಡೆಸಲು ಕೋಲಾರ ಜಿಲ್ಲಾ ಸಮಿತಿ ಕಾರ್ಯಕ್ರಮ ರೂಪಿಸಿದೆ. ಸ್ಥಳೀಯ ಚುನಾವಣೆಗಳಲ್ಲಿ ಜನತೆಯ ವ್ಯಾಪಕ ಚಳುವಳಿ ಹಾಗೂ ಅದಕ್ಕಾಗಿ ಸಂಘಟನಾ ಸನ್ನದ್ಧತೆಯಿಂದ ಕಾರ್ಯಕ್ಕಿಳಿದಲ್ಲಿ ಪಕ್ಷವು ಬಲವಾಗಿ ಅತ್ಯಂತ ವೇಗದಲ್ಲಿ ವೃದ್ಧಿಸು ವುದು. ಇದಕ್ಕೆ ಸಹಾಯಕವಾದ ಅತ್ಯಂತ ಸಕಾರಾತ್ಮಕ ಅಂಶವೆಂದರೆ ಪಕ್ಷದ ರಾಜಕೀಯ ಹಾಗೂ ಜನತೆಯ ಆಂದೋಲನದ ಪ್ರಬಲ ಪರಂಪರೆಯ ಹಿನ್ನೆಲೆ.



ಮಾರ್ಚ 13

- ಹಿಂದಿನ ದಿನರಾತ್ರಿ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿದರೆನ್ನಲಾದ ದೇಶಪಾಂಡೆಯವರಿಂದ ಮೊಗಸಾಲೆ ಯಲ್ಲಿ ಜನತಾದಳದ ಶಾಸಕರ ಸಹಿ ಸಂಗ್ರಹಣೆ.
- ಸೇವೆಯಲ್ಲಿದ್ದಾಗಲೇ ಅಕಾಲಿಕ ಮರಣಕ್ಕೀಡಾಗುವ ನೌಕರರ ಸಂಬಂಧಿಕರಿಗೆ ಅನುಕಂಪದ ಉದ್ಯೋಗ ನೀಡಬೇಕೆಂಬ ಸುಪ್ರಿಂ ಕೋರ್ಟ್ ಸೂಚನೆಯನ್ನು ಜಾರಿಗೊಳಿಸಲು ರಾಜ್ಯ ಸರ್ಕಾರದ ಒಪ್ಪಿಗೆ.

ಮಾರ್ಚ್ 14

- ಬೆಂಗಳೂರು ನಗರ ಸಾರಿಗೆ ಮುಷ್ಕರ ತೀವ್ರ - ಅಪಘಾತದ ಸಂದರ್ಭದಲ್ಲಿ ವ್ಯಕ್ತಿಗಳು ಮೃತಪಟ್ಟರೆ ಅದಕ್ಕೆ ಚಾಲಕರನ್ನೇ ನೇರ ಜವಾಬ್ದಾರಿಯಾಗಿ ಮಾಡಬೇಕೆನ್ನುವ ಕಾನೂನಿನ ವಿರುದ್ಧ ಆಕ್ರೋಶ.
- ಪಟೇಲ್ ಸರಕಾರ ಉರುಳಿಸಲು ಜನತಾದಳದ ಶಾಸಕರ ಬೆಂಬಲ ದೊರಕದು ಎಂದು ಲೋಕಶಕ್ತಿಯ ನಾಯಕರ ಹಿಂದೇಟು.

ಮಾರ್ಚ್ 16

- ಲೋಕಶಕ್ತಿಗೆ ಆಹ್ವಾನಿಸಲು ಪಟೇಲರನ್ನು ಭೇಟಿ ಮಾಡಿದ್ದಾಗಿ ದೇಶಪಾಂಡೆ.

ಮಾರ್ಚ್ 17

- ಹುಬ್ಬಳ್ಳಿಯಲ್ಲಿ ಹೋಳಿ ಹಿಂಸಾಚಾರ; ಗೋಲೀಬಾರ್, ಕರ್ಫ್ಯೂ, ಕಂಡಲ್ಲಿ ಗುಂಡು ಆಜ್ಞೆ.
- ವಂದನಾ ನಿರ್ಣಯ ಅಂಗೀಕೃತ. ಪಟೇಲ್ ಸರಕಾರ ಉರುಳಿಸುವ ಪ್ರಯತ್ನ ವಿಫಲ.
- ಬೆಂಗಳೂರು ಸಾರಿಗೆ ಸಿಬ್ಬಂದಿ ಮುಷ್ಕರ ಅಂತ್ಯ-ತನ್ನ ತೀರ್ಪನ್ನು ಮರುಪರಿಶೀಲಿಸಲು ಹೈಕೋರ್ಟ್ ಒಪ್ಪಿಗೆ.
- ಪ್ರೊ. ಜಿ.ವೆಂಕಟಸುಬ್ಬಯ್ಯ, ವಿಜೇಂದ್ರರ ಸಿಂಪಿ, ವಿಜಯ ಸಾಸನೂರು, ಡಾ. ವಿಜಯಾ ಹಾಗೂ ಬೋಳುವಾರು ಮಹಮ್ಮದ್ ಕುಞಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ 1997 ರ ಗೌರವ ಪ್ರಶಸ್ತಿಗಳು.

ಮಾರ್ಚ್ 18

- 220 ಕೋಟಿ ರೂ. ಹೊಸ ತೆರಿಗೆಯ, 196 ಕೋಟಿ ರೂ. ಕೊರತಾದ ರಾಜ್ಯ ಬಜೆಟ್.
- ಹುಬ್ಬಳ್ಳಿಯಲ್ಲಿ ಶಾಂತಿ, ಮ್ಯಾಜಿಸ್ಟ್ರೇಟ್ ತನಿಖೆ ನಡೆಸುವುದಾಗಿ ಹೆಚ್ಚುವರಿ ಪೋಲೀಸ್ ಮಹಾನಿರ್ದೇಶಕರು.
- ಚಳುವಳಿಗಾರರ ವಿರುದ್ಧ ಹೂಡಿರುವ ಪ್ರಕರಣಗಳನ್ನು ಹಿಂತೆಗೆದುಕೊಳ್ಳುವುದಾಗಿ ಕಾನೂನು ಮಂತ್ರಿಗಳು.

ರಾಜ್ಯಸಭಾ ಸದಸ್ಯತ್ವಕ್ಕೆ ವೆಂಕಯ್ಯನಾಯ್ಡು ಸ್ಪರ್ಧೆ

ಸಂವಿಧಾನದ ಆಶಯಕ್ಕೆ ವ್ಯತಿರಿಕ್ತವಾದುದು

ಕರ್ನಾಟಕದಿಂದ ರಾಜ್ಯ ಸಭಾ ಸದಸ್ಯತ್ವಕ್ಕೆ ಆಯ್ಕೆ ಬಯಸಿ ಭಾರತೀಯ ಜನತಾ ಪಕ್ಷವು ವೆಂಕಯ್ಯನಾಯ್ಡು ರವರನ್ನು ಅಭ್ಯರ್ಥಿಯನ್ನಾಗಿಸಿದ ಕ್ರಮದ ಸಂವಿಧಾನದ ಉದ್ದೇಶಕ್ಕೆ ವ್ಯತಿರಿಕ್ತ ವಾಗಿರುವಂತಹದ್ದು ಎಂದು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯು ಅಭಿಪ್ರಾಯಪಟ್ಟಿದೆ.

ರಾಜ್ಯ ಸಭೆಯ ಹೆಸರೇ ಸೂಚಿಸುವಂತೆ ರಾಜ್ಯದ ಪ್ರತಿನಿಧಿಯಾಗಿ ಭಾರತದ ಒಕ್ಕೂಟ ತತ್ವದ ಆಧಾರದಲ್ಲಿ ಇರುವಂತಹದು. ಆದ್ದರಿಂದಲೇ ರಾಜ್ಯಸಭೆಗೆ ಆಯಾ ರಾಜ್ಯದ ನಿವಾಸಿ ನಾಗರೀಕರಿಗೆ ಮಾತ್ರ ಸ್ಪರ್ಧಿಸುವ ಅರ್ಹತೆಯಿರುತ್ತದೆ. ಹೀಗಿರುವಾಗ ವೆಂಕಯ್ಯನಾಯ್ಡುರವರು ಕರ್ನಾಟಕದ ನಾಗರೀಕರೇ ಎಂದು ಸಿಪಿಐ(ಎಂ) ಪ್ರಶ್ನೆ ಹಾಕಿದೆ. ಆಂಧ್ರದ ವಾಸಿಯಾಗಿರುವ ಅವರು ರಾಜ್ಯದಲ್ಲಿ ಯಾವುದೇ ನಾಮಕಾವಸ್ಥೆ ವಿಳಾಸ ನೀಡುವುದು ವಂಚನೆಯಲ್ಲದೇ ಮತ್ತೇನು?- ಇದು ಸಿಪಿಐ(ಎಂ) ಪ್ರಶ್ನೆ. ಇದರಲ್ಲಿ ಬಿ.ಜೆ.ಪಿ.ಯ ನೈತಿಕ, ರಾಜಕೀಯ ನೆಲೆಗಟ್ಟಾದರೂ ಎಂತಹದ್ದು ಎಂದು ಅದು ಟೀಕಿಸಿದೆ.

ಅನ್ಯರಾಜ್ಯಗಳ ನಾಯಕರುಗಳನ್ನು ಬೇರೆ ರಾಜ್ಯಗಳ ವಿಧಾನಸಭೆಯಿಂದ ಆಯ್ಕೆ ಮಾಡುವ ಪ್ರವೃತ್ತಿಯನ್ನು ಸಿಪಿಐ(ಎಂ) ಸದಾಕಾಲ ವಿರೋಧಿಸುತ್ತ ಬಂದಿದೆ. ಅಂತಹ ಪ್ರವೃತ್ತಿ ಕರ್ನಾಟಕದ ಜನತೆಗೆ ಎಸಗಿದ ಅವಮಾನ ಹಾಗೂ ರಾಜ್ಯದ ಹಿತಾಸಕ್ತಿಗಳಿಗೆ ಬಗೆದ ದ್ರೋಹ. ಇದನ್ನು ರಾಜ್ಯದ ವಿಧಾನ ಸಭೆಯ ಎಲ್ಲಾ ಸದಸ್ಯರು ಒಕ್ಕೊರಲಿನಿಂದ ವಿರೋಧಿಸಬೇಕೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ವಿನಂತಿಸಿದೆ.

ಅವಿರೋಧ ಆಯ್ಕೆಗೆ ಪಟೇಲ್ ಯತ್ನ-ಸಿಪಿಐ(ಎಂ) ವಿರೋಧ:

ಸಂಯುಕ್ತ ರಂಗವು ಕೋಮುವಾದಿ ಬಿ.ಜೆ.ಪಿ.ಯನ್ನು ಎದುರಿಸಿ ಹೋರಾಡುತ್ತಿರುವಾಗ ರಾಜ್ಯದ ಮುಖ್ಯಮಂತ್ರಿ ಜೆ.ಹೆಚ್.ಪಟೇಲ್ ರವರು ಬಿ.ಜೆ.ಪಿ.ಯ ಅಭ್ಯರ್ಥಿಯನ್ನು ಒಳಗೊಂಡು ಅವಿರೋಧ ಆಯ್ಕೆಗಾಗಿ ಪ್ರಯತ್ನ ನಡೆಸಿರುವ ಮನೋಭಾವವನ್ನು ಸಿಪಿಐ(ಎಂ) ತೀವ್ರವಾಗಿ ವಿರೋಧಿಸಿದೆ. ಇದನ್ನು ಕೈಬಿಡಲು ಆಗ್ರಹಿಸಿದೆ.

ಬೀದರ್ ರೈತರು ಆತ್ಮಹತ್ಯೆಗೇಕೆ ಇಳಿದಿದ್ದಾರೆ?

ಸಿಪಿಐ(ಎಂ) ಸತ್ಯಶೋಧನ ತಂಡದ ಪರಿಶೀಲನೆ

ಬೆಳೆ ಬೆಳೆದು ನಾಡಿನ ಬದುಕನ್ನು ಹಸನು ಗೊಳಿಸುವುದರ ಜೊತೆಗೆ ತನ್ನ ಮಡದಿ ಮಕ್ಕಳ ಜೊತೆಗೂಡಿ ಒಂದು ನೆಮ್ಮದಿ ಬದುಕನ್ನು ಕಾಣಲು ಯತ್ನಿಸಿ, ಸಾಲದ ಶೂಲದಲ್ಲಿ ಸಿಕ್ಕಿಕೊಂಡು ತನ್ನ ಬದುಕನ್ನು ಅಂತ್ಯಮಾಡಿ ಕೊಂಡ ಬೀದರ್ ರೈತರ ಆತ್ಮಹತ್ಯೆ ನಿಜವೋ? ಸುಳ್ಳೋ? ಈ ಬಗ್ಗೆ ಸರ್ಕಾರ ಎರೆಡೆಣಿಸುತ್ತಿದ್ದಾಗ, ಸಿಪಿಐ(ಎಂ) ಸತ್ಯಶೋಧನ ತಂಡ ಶಾಸಕ ಜಿ.ವಿ.ಶ್ರೀರಾಮರೆಡ್ಡಿ ನೇತೃತ್ವದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆ, ಗುಲ್ಬರ್ಗ ಜಿಲ್ಲಾ ಸಮಿತಿ ಸದಸ್ಯ ಬಸವರಾಜಮರಡಿ, ಬೀದರ್‌ನ ಸಂಗ್ರಾಮ್ ಹಾಗೂ ಮನೋಹರ್ ಬೀದರ್ ಜಿಲ್ಲೆಯ ಭಾಲ್ಕಿ, ಹುಮನಬಾದ್, ಬೀದರ್ ತಾಲೂಕುಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಊರು ಕೇರಿ, ಮನೆ-ಮಠಗಳಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿದ ವರದಿ ಇಲ್ಲಿದೆ.

ಭಾಲ್ಕಿ ತಾಲೂಕಿನ ಸಿದ್ದೇಶ್ವರ ಗ್ರಾಮದ 40ರ ಹರೆಯದ ಶಿವರಾಜ್ ಕೃಷಿಯಲ್ಲಿ ಮೇಲೆರಬೇಕೆಂಬ ಮಹಾತ್ವಾಕಾಂಕ್ಷೆವುಳ್ಳ 2 ಮಕ್ಕಳ ತಂದೆ. 2 ಎಕರೆ 32 ಗುಂಟೆ ಸ್ವಂತ ಜಮಿನಿದೆ. ಮಕ್ಕಳ ಭವಿಷ್ಯರೂಪಿಸಲು ಇಷ್ಟೆ ಭೂಮಿ ಸಾಲದು ಮಡದಿ, ಮಕ್ಕಳ ಜೊತೆ ಹಸಿರು ಬದುಕು ಕಾಣಲು ಬೇರೆಯವರಿಂದ 16 ಎಕರೆ ಭೂಮಿಯನ್ನು ಸಮಪಾಲಿಗೆ ಪಡೆದು ಬಿತ್ತನೆ ಬಿತ್ತುವ ಯೋಜನೆ ಅವರದು. ಹಣವಿಲ್ಲ ಆದರೂ ಚಿಂತೆಯಿಲ್ಲ. ಸಾಲವೊ! ಶೂಲವೊ! ಸೇವಾ ಸಹಕಾರ ಸಂಘದಿಂದ 27-28 ರೂ ಸಾಲ ಪಡೆದು ಹತ್ತಿ, ತೋಗರಿ ಬಿತ್ತಿದ್ದಾಯಿತು. ಬಿತ್ತನೆ ಮೊಳಕೆಯೊಡೆ ಯಿತು. ಶಿವರಾಜ್ ಮನದಲ್ಲಿ ಆಶೆಯೂ ಬೇರೂರಿತು. ಅಷ್ಟರಲ್ಲಿ ಬೆಳೆಗೆ ಕ್ರಿಮಿಗಳ ದಾಳಿ, ರೈತ ಕಂಗಾಲಾದ. 19 ಎಕರೆ ಬೆಳೆ ಹೇಗಾದರೂ ಉಳಿಸಿ ಕೊಳ್ಳಲೇಬೇಕು, ಮಕ್ಕಳಿಗೆ ಒಳ್ಳೆಯ ಭವಿಷ್ಯ ರೂಪಿಸಲೇ ಬೇಕು. ಏನು? ಮಾಡುವುದು? ಇನ್ನೇನು ಊರಿನ ಹಣವಂತರ ಬಳಿ ತನ್ನೆರಡು ಮಕ್ಕಳನ್ನು ಜೀತಕ್ಕಿಟ್ಟು ಸಾಲ ಪಡೆದು ಔಷದಿ ಸಿಂಪಡಿಸಿ ಕೀಟ ನಾಶ ಮಾಡುವ ಯತ್ನ, ಕೊನೆಗೆ ಕೀಟಗಳೇ ಬೆಳೆನಾಶ ಮಾಡಿದವು. ಶಿವರಾಜ್ ಹತಾಶೆಗೊಳಗಾದ. ಸಾಲದ ಭಾರ ಹೆಚ್ಚಾಗತೊಡಗಿದ ಹಾಗೆ ಮಕ್ಕಳ ಭವಿಷ್ಯಕ್ಕೆ ಎಳ್ಳು ನೀರು ಬಿಟ್ಟು ಸಾಲದಿಂದ ಶೂಲಕ್ಕೇರಿದ ಅವರ ಮನೆಗೆ ಭೇಟಿ ನೀಡಿದಾಗ ಅವರ ಮಡದಿಗೆ ಬಿಕ್ಕಳಿಸಿ ಬಿಕ್ಕಳಿಸಿ ಅಳುವುದನ್ನು ಬಿಟ್ಟರೆ ಮತ್ಯಾವ ಅನ್ಯ ಮಾರ್ಗ ಕಾಣಸಿಗುತ್ತಿಲ್ಲ. ಇದು ಕೇವಲ ಶಿವರಾಜ್ ಕುಟುಂಬದ ಕಥೆಯಲ್ಲ. ಬೀದರ್, ಗುಲ್ಬರ್ಗ, ರಾಯಚೂರು ಕೊಪ್ಪಳ ಪ್ರದೇಶಗಳ ಸಾವಿರಾರು ರೈತ ಕುಟುಂಬಗಳ ನಿತ್ಯದ ಕಥೆಯಾಗಿದೆ ಎನ್ನುತ್ತಾರೆ ಶ್ರೀರಾಮರೆಡ್ಡಿ.

ಬೀದರ್ ರೈತರೇ ಅಲ್ಲ, ಇಡೀ ಉತ್ತರ ಕರ್ನಾಟಕದ ರೈತರು ಬೆಳೆ ನಾಶದಿಂದಾಗಿ ದಾರಿಕಾಣದೆ ದಿಕ್ಕೆಟ್ಟು ಕುಳಿತಿರುವಾಗ ಅವರ ಸಂಕಷ್ಟಗಳಿಗೆ ಸ್ಪಂದಿಸುವ ಬದಲಾಗಿ ರೈತ ಸರ್ಕಾರವೆಂದು ಹೇಳಿಕೊಳ್ಳುವ ರಾಜ್ಯ ಸರ್ಕಾರ ರೈತರ ಸಾವು ಬೆಳೆಹಾನಿ ಆತ್ಮ ಹತ್ಯೆಯೋ, ಸಹಜ ಸಾವೋ ಎಂದು ಸಿಓಡಿ ತನಿಖೆಗೆ ಆದೇಶಿಸಿರುವುದು ರೈತರ ಜಂಘಾ ಬಲವನ್ನು ಉಡುಗಿಸುವಂತಾಗಿದೆ. ಸರ್ಕಾರ ಜವಾಬ್ದಾರಿಯಿಂದ ಜಾರಿ ಕೊಳ್ಳಲು ಕೇವಲ ಮೂರು ಜನ ಮಾತ್ರ ಸತ್ತಿದ್ದಾರೆ ಎನ್ನುವುದು ಹೊಣೆಗೇಡಿ ಸರ್ಕಾರದ ಬೇಜವಾಬ್ದಾರಿ ಹೇಳಿಕೆ ಖಂಡನಾರ್ಹ ಎಂದರು. ತಂಡದ ವರದಿ ಬೀದರ್ ಜಿಲ್ಲೆಯಲ್ಲಿ 10 ರೈತರು ಆತ್ಮಹತ್ಯೆಮಾಡಿ ಕೊಂಡಿದ್ದಾರೆ ಎನ್ನುತ್ತದೆ.

ಬೀದರ್ ಜಿಲ್ಲಾಧಿಕಾರಿ ಸಂದೀಪ್ ದವೆ ತನ್ನ ಸಾಮ್ರಾಜ್ಯದಲ್ಲಿ ಎಲ್ಲವೂ ಸೌಖ್ಯ ಎನ್ನುವ ರೀತಿ ಆತ್ಮಹತ್ಯೆಗಳಾವೂ ಬೆಳೆನಾಶ ದಿಂದಾಗಿ ಅಲ್ಲ ಎಂದು ವರದಿ ಕಳುಹಿಸಿ ರೈತರ ಬೆನ್ನು ಮೂಳೆ ಮುರಿದು ಸರ್ಕಾರಕ್ಕೆ ಮಂಡಿಸಿದ ನಂತರ ವಿಧಾನ ಸಭೆಯಲ್ಲಿ ಚರ್ಚೆಗೆ ಬಂದಾಗ ಎಲ್ಲ ಆತ್ಮಹತ್ಯೆಗಳು ಬೆಳೆನಾಶದಿಂದಾಗಿ ಆದವಲ್ಲ, ಕೆಲವು ಮಾತ್ರ ಎಂದು ಹೇಳಿ ತನ್ನ ಅಧಿಕಾರಶಾಹಿ ಮೆರೆದಿರುವ ಹಾಗೂ ತಪ್ಪು ವರದಿ ನೀಡಿರುವ ಜಿಲ್ಲಾಧಿಕಾರಿಯನ್ನು ತಕ್ಷಣ ಸೇವೆಯಿಂದ ಅಮಾನತುಗೋಳಿಸುವಂತೆ ಬೀದರ್‌ನಲ್ಲಿ ನಡೆದ ಪತ್ರಿಕಾಗೋಷ್ಠಿ ಯಲ್ಲಿ ಶ್ರೀರಾಮರೆಡ್ಡಿ ಹಾಗೂ ಮಾನ್ಪಡೆ ಆಗ್ರಹಿಸಿದ್ದಾರೆ.

ಆತ್ಮಹತ್ಯೆಗೆ ಮುಖ್ಯ ಕಾರಣ:

ಕೇಂದ್ರ ರಾಜ್ಯ ಸರ್ಕಾರಗಳು ದೇಶದ ಜನತೆಯನ್ನು ಸ್ವರ್ಗದರ್ಶನಕ್ಕೆ ಕೊಂಡೊಯ್ಯಲು ವಿದೇಶಿ ಕಂಪನಿಗಳೇ ಸರಿಮಾರ್ಗ ವೆಂದು ತೀರ್ಮಾನಿಸಿ ದೇಶದ ಕೊಟ್ಯಾಂತರ ಜನತೆಯ ಪ್ರತಿರೋಧವನ್ನು ಪಕ್ಕಕ್ಕೆ ತಳ್ಳಿ ಬಹುರಾಷ್ಟ್ರೀಯ ಕಂಪನಿಗಳ ನೀಡಿದ ಬಿಗಿ ಅಪ್ಪುಗೆಯೇ ಅಂಧ್ರದಿಂದ ಬೀದರ್ ಗುಲ್ಬರ್ಗ ಮಾರ್ಗವಾಗಿ ರಾಯಚೂರು ತಲುಪಿರುವ ರೈತರ ಆತ್ಮಹತ್ಯೆಯ ಶಕೆ. ಇದು ಇಡೀ ಕೃಷಿಕ ಸಮಾಜವನ್ನು ತಲುಪಬಹುದೆಂಬ ಶಂಕೆಯನ್ನು ಸತ್ಯಶೋಧನ ತಂಡ ವ್ಯಕ್ತಿ ಪಡಿಸಿದೆ.

ಈ ಹತಾಶ ರೈತರ ಆತ್ಮಹತ್ಯಗೆ ಬಿತ್ತನೆ

ಪುಟ 6 ನೋಡಿ

ಭಾಲ್ಕಿ ಮತ್ತು ಬಸವಕಲ್ಯಾಣ ತಾಲೂಕಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರು

ಹೆಸರು	ಮರಣ ದಿನಾಂಕ	ವಯಸ್ಸು	ಭೂ ಹಿಡುವಳಿಪ್ರಮಾಣ		ಸಾಲ(ರೂ.)
			ಸ್ವಂತ	ಬಟಾಯಿ	
ಶಿವರಾಜ್	12.12.97	40	2 ಎಕ್ರೆ, 3 ಗುಂಟೆ	16 ಎಕ್ರೆ	60,000
ದಿಲೀಪ್		33	15	25	80,500
ಬಸಪ್ಪ	27.1.98	50	12	5	60,000
ಜೀಜಾಬಾಯಿ	6.2.98	35	15	-	44180
ಭೋಜರಾಜ್	14.2.98	37	4	12	170,000
ಪ್ರಭು	10.2.98	40	4	12	40,000
ಭಾರತ್		35	5	15	53,000
ಲಕ್ಷ್ಮಿಬಾಯಿ	15.2.98	41	5	7	40,000
ಸಂಜು	10.1.98	28	5	-	25,000

1998ರ ತೀರ್ಪಿನ ಅರ್ಥವೇನು?

ಸೀತಾರಾಂ ಯೆಚೂರಿ

ಮೂರನೇ ಎರಡರಷ್ಟು ಮಂದಿ ಕೋಮುವಾದಿ ಕೂಟವನ್ನು ತಿರಸ್ಕರಿಸುವಾಗ ಬಿಜೆಪಿಗೆ 'ಜನಾದೇಶ' ಇದೆ, 'ಅವರಿಗೊಂದು ಅವಕಾಶ ಕೊಡಲೇಬೇಕು' ಎಂಬುದೆಲ್ಲಾ ಫ್ಯಾಸಿಸ್ಟ್ ಮಾದರಿ ಬೆದರಿಕೆಯ ಮುಂಗಾಣ್ಕೆಯಲ್ಲವೇ? ಭಾರತದ ಸಾಮಾಜಿಕ ವೈವಿಧ್ಯತೆ ರಾಜಕೀಯ ವ್ಯವಸ್ಥೆಯಲ್ಲೂ ಪ್ರತಿಫಲಿಸಿದೆ ಎಂಬ ೧೯೯೬ ರ ವಿಶ್ಲೇಷಣೆಯನ್ನೂ ಇದು ಸಾಬೀತುಪಡಿಸಿದೆ. ಅಲ್ಲದೆ ಈ ಬಾರಿ ಎದ್ದು ಕಾಣುವ ಇನ್ನೊಂದು ಅಂಶವೆಂದರೆ ಉದಾರೀಕರಣ ಆರ್ಥಿಕ ನೀತಿಗಳಿಂದ ಜನ ಹೆಚ್ಚೆಚ್ಚು ಭ್ರಮನಿರಸನಗೊಳ್ಳುತ್ತಿದ್ದಾರೆ.

1998 ಸಾರ್ವತ್ರಿಕ ಚುನಾವಣೆ ನಿರೀಕ್ಷೆಯಂತೆ ಒಂದು ತ್ರಿಶಂಕು ಸಂಸತ್ತನ್ನೇ ನೀಡಿದೆ. ಒಂದು 'ಜನಾದೇಶ' ವೆಂಬುದೇ ಇಲ್ಲದ ಸನ್ನಿವೇಶದಲ್ಲಿ ಕೋಮುವಾದಿ ಶಕ್ತಿಗಳಿಗೆ ಒಂದು 'ಜನಾದೇಶ'ವನ್ನು ಕೊಡಿಸಲು ಚುನಾವಣಾ ವಿಶ್ಲೇಷಣಾ ತಜ್ಞರು ಹಾಗೂ ಟಿಪ್ಪಣಿಕಾರರು ಆಕರ್ಷಕ ಪದಗುಚ್ಛಗಳನ್ನು, ವಿವರಣೆಗಳನ್ನು ಸೃಷ್ಟಿಸಲು ಭಾರಿ ಶ್ರಮ ಪಟ್ಟಿದ್ದಾರೆ.

ಒಂದಂಶವಂತೂ ಸ್ಪಷ್ಟ. ಯಾವುದೇ ಒಂದು ಪಕ್ಷಕ್ಕೆ ಹಾಗೂ ಚುನಾವಣಾ -ಪೂರ್ವ ಕೂಟಕ್ಕೆ ಸರಕಾರ ರಚಿಸಲು ಸ್ಪಷ್ಟ ಬಹುಮತ ಸಿಕ್ಕಿಲ್ಲ ; ಖಂಡಿತಾ ಸಿಕ್ಕಿಲ್ಲ. ಬಿಜೆಪಿಯನ್ನು ಸಂತುಷ್ಟ ಪಡಿಸಲು ತಲೆಕೆಳಗಾಗಿ ನಿಲ್ಲಲೂ ಸಿದ್ಧವಿರುವ ಪತ್ರಿಕಾ ಮತ್ತು ಇಲೆಕ್ಟ್ರಾನಿಕ್ ಮಾಧ್ಯಮದ ಒಂದುವಿ ಭಾಗ ಎಷ್ಟೇ ಅಬ್ಬರ ಎಬ್ಬಿಸಿದರೂ ಬಿಜೆಪಿಯ ಹೆಚ್ಚಿನ ಗಳಿಕೆಯೆಂದರೆ ಕೇವಲ 17 ಸ್ಥಾನಗಳು-ಈ ಚುನಾವಣೆಯಲ್ಲಿ ಅದು ತನ್ನ ಕೋಮುವಾದಿ ಬತ್ತಳಿಕೆಯಲ್ಲಿನ ಎಲ್ಲಾ ಅಸ್ತ್ರಗಳನ್ನೂ ಬಳಸಿಕೊಂಡಿತು; ಅತ್ಯಂತ ಸಮಯಸಾಧಕ ಮೈತ್ರಿಗಳನ್ನು ಮಾಡಿ ಕೊಂಡಿತು. ಅಪರಾಧ ಪಟ್ಟಿ ಗಳಲ್ಲಿರುವ ಕುಖ್ಯಾತರಿಗೆ, ಭ್ರಷ್ಟಾಚಾರದ ಹಗರಣಗಳಲ್ಲಿ ಸಿಬಿಐ ಆರೋಪ ಪಟ್ಟಿಗೊಳಗಾದವರಿಗೆ ಟಿಕೇಟುಗಳನ್ನು ನೀಡಿ ರಾಜಕೀಯ ನೈತಿಕತೆಯ ನಟನೆ ಕೂಡಾ ಅದಕ್ಕೆ ಅಗತ್ಯವೆನಿಸಲಿಲ್ಲ. ಆದರೂ ತಾನು ಹೊಸದಾಗಿ ಪಡಕೊಂಡ ಮಿತ್ರರೊಂದಿಗೆ ಕೂಡಾ ಸಿಕ್ಕಿದ್ದು 252 ಸ್ಥಾನಗಳಷ್ಟೇ - ಸ್ಪಷ್ಟ ಬಹುಮತಕ್ಕಿಂತ ಬಹುದೂರ.

'ಸ್ಥಿರತೆ' ತನ್ನಿಂದಲೇ ಎನ್ನುವ ಅದರ ಪ್ರಯತ್ನವೂ ವಿಫಲವಾಗಿದೆ ಎಂಬುದು ಸ್ಪಷ್ಟ. ಮತದಾನ ಮಾಡಿದವರಲ್ಲಿ ಸುಮಾರು ಮೂರನೇ ಎರಡರಷ್ಟು ಮಂದಿ ಈ ಕೋಮುವಾದಿ ಕೂಟವನ್ನು ತಿರಸ್ಕರಿಸಿ ದ್ದಾರೆ. ಆದ್ದರಿಂದ ಗಮನಾರ್ಹ ಸಂಖ್ಯೆ ಯಲ್ಲಿ ಸೀಟು ಗಳಿಸಿಕೊಂಡರೂ ತಮಗೆ ಆಳುವ ಜನಾದೇಶ ಸಿಕ್ಕಿದೆಯೆಂದು ಯಾವ ರೀತಿಯಲ್ಲೂ ಹೇಳಿಕೊಳ್ಳಲು ಅವರಿಗೆ ಸಾಧ್ಯವಿಲ್ಲ.

ವಾಸ್ತವತೆ ಹೀಗಿರುವಾಗ ಎಡ ಹಾಗೂ ಜಾತ್ಯಾತೀತ ಶಕ್ತಿಗಳು ಬಿಜೆಪಿ ಹಾಗೂ ಕೋಮುವಾದಿ ಶಕ್ತಿಗಳು ಸರಕಾರ ರಚಿಸುವುದನ್ನು ತಡೆಯಲು ಗುಂಪುಗೂಡಿವೆ ಎಂಬ ಮಾತು ಶುದ್ಧ ಅಸಂಬದ್ಧ. ಬಿಜೆಪಿ ಅಧಿಕಾರ ವಹಿಸದಂತೆ ಯಾರಾದರೂ ತಡೆದಿದ್ದರೆ ಅದು ಭಾರತೀಯ ಮತದಾರರೇ - ಆ ಕೂಟಕ್ಕೆ ಅವರು ಸ್ಪಷ್ಟ ಬಹುಮತ ನೀಡಲು ನಿರಾಕರಿಸಿದ್ದಾರೆ.

'ಅವಕಾಶ ಕೊಡಿ' ಎಂದರೇನು?

ಇನ್ನೊಂದು ಅಸಂಬದ್ಧ ಮಾತೆಂದರೆ ಬಿಜೆಪಿ ಅತಿದೊಡ್ಡ ಪಕ್ಷವಾಗಿ ಬಂದಿರುವುದರಿಂದ ಅದಕ್ಕೊಂದು 'ಅವಕಾಶ' ಕೊಡಬೇಕು ಎಂದು. ಇದು ಇಬ್ಬಂದಿತನದ ಪರಮಾವಧಿ. ಹಿಮಾಚಲ ಪ್ರದೇಶದ ರಾಜ್ಯಪಾಲರು ಅತಿದೊಡ್ಡ ಪಕ್ಷವೆಂದು ಕಾಂಗ್ರೆಸ್ಸಿಗೆ ಸರಕಾರ ರಚಿಸುವ ಆಹ್ವಾನ ನೀಡಿದ್ದಕ್ಕೆ ಇದೇ ಪಕ್ಷ ಬೊಬ್ಬೆ ಎಬ್ಬಿಸಲಿಲ್ಲವೇ? ಕಾಂಗ್ರೆಸ್ ಮತ್ತು ಬಿಜೆಪಿ ಇಬ್ಬರೂ ಒಬ್ಬ ನಿರ್ದಿಷ್ಟ ಎಂ.ಎಲ್.ಎ. ಯ ಬೆಂಬಲ ತನಗಿದೆಯೆಂದು ಹೇಳು ತ್ತಿರುವುದನ್ನು ಕಂಡ ಆ ರಾಜ್ಯಪಾಲರು ಹೆಚ್ಚು ಸ್ಥಾನ ಪಡೆದಿದ್ದ ಕಾಂಗ್ರೆಸ್ಸನ್ನು ಆಹ್ವಾನಿಸಿ ಸದನದಲ್ಲಿ ಬಹುಮತ ಸಿದ್ಧಪಡಿಸಲು ಹೇಳಿದರು. ಇದು 'ಪ್ರಜಾಪ್ರಭುತ್ವದ ಕೊಲೆ' ಎಂದೆಲ್ಲಾ ಬಿಜೆಪಿ ಬೊಬ್ಬಾಟ ನಡೆಸಿದರೂ ಕೇಂದ್ರದಲ್ಲಿ ಮಾತ್ರ ಶಿಮ್ಲಾದಲ್ಲಿ ನಡೆದದ್ದೇ ನಡೆಯಬೇಕು ಎಂದು ಅದು ಆಗ್ರಹ ಪಡಿಸುತ್ತದೆ!

ಬಿಜೆಪಿಗೊಂದು 'ಅವಕಾಶ' ಕೊಡುವ ಈ ತರ್ಕ ಇಲ್ಲಿಗೇ ನಿಲ್ಲುವುದಿಲ್ಲ. ಅದಕ್ಕೆ ಬಹುಮತವಿಲ್ಲದಿದ್ದರೂ ಅದನ್ನು ವಿರೋಧಿಸುವ ಎಲ್ಲಾ ಪಕ್ಷಗಳೂ, ಎಂ.ಪಿ.ಗಳೂ ಅದು ಅಧಿಕಾರದಲ್ಲಿ ಮುಂದುವರಿಯಲೂ ಅವಕಾಶ ಕೊಡಬೇಕಂತೆ. ಅಂದರೆ ಬಿಜೆಪಿಗೆ ಕಾನೂನು ಬಾಹಿರವಾಗಿ ಆಳಲು ಬೇರೆಲ್ಲರೂ ಅವಕಾಶ ಕೊಡಬೇಕು! ಇಲ್ಲವಾದರೆ ಅಂತರ್ಯುದ್ಧ ನಡೆಸುವುದಾಗಿ ಬಾಳಾಠಾಕ್ರೆ ಬೆದರಿಸಿದರೆ, ಬೇರೆಯವರು ಎಲ್ಲಾ ಪಕ್ಷಗಳು ಬಿಜೆಪಿ ಆಳಲು ಬಿಡಲು 'ಬದ್ಧ' ರಾಗಿದ್ದಾರೆ ಎನ್ನುತ್ತಾರೆ.

ಈ ಎರಡನೇ ಗುರಿಸಾಧನೆಯಾಗ ಬೇಕಾದರೆ ಅತ್ಯಂತ ಮಹತ್ವದ್ದೆಂದರೆ ಭಾರತದಂತಹ ವಿಶಾಲ ಗಾತ್ರದ, ಕ್ಲಿಷ್ಟತೆಯ ಒಂದು ದೇಶದ ಐಕ್ಯತೆಯನ್ನು ಕಾಪಾಡಿಕೊಳ್ಳಲು ಅದರ ವೈವಿಧ್ಯತೆಯಲ್ಲಿ ಹಾಸುಹೊಕ್ಕಾಗಿರುವ ಸಮಾನ ಅಂಶಗಳನ್ನು ಬಲಗೊಳಿಸುವುದು ಅಗತ್ಯ ಎಂದರಿತ ಒಂದು ರಾಜಕೀಯ ಕಣ್ಣೋಟ. ಕೋಮುವಾದಿ ಶಕ್ತಿಗಳು ಕಂಡರಿಸುವ

ನಿಜವಾಗಿ ಇದು ಪ್ರಜಾ ಪ್ರಭುತ್ವದ ಒಂದು ವಿಚಿತ್ರ ವಿವರಣೆ ಅಥವಾ ಮುಂಬರುವ ಫ್ಯಾಸಿಸ್ಟ್ ಮಾದರಿ ಬೆದರಿಕೆಯ ಮುಂಗಾಣ್ಕೆಯೇ ಇದು?

ಒಂದು ಸಂಸದೀಯ ಪ್ರಜಾಪ್ರಭುತ್ವ ದಲ್ಲಿ ರಾಜಕೀಯ ಪಕ್ಷಗಳು ಒಂದು ರಾಜಕೀಯ ಕಾರ್ಯಕ್ರಮ ಹಾಗೂ ಸಿದ್ಧಾಂತದ ಆಧಾರದ ಮೇಲೆ ಕೆಲಸ ಮಾಡುತ್ತಾ ಸರಕಾರ ರಚಿಸಲು ಜನಾದೇಶ ಕೇಳುತ್ತದೆ. ಯಾರಿಗೂ ಸ್ಪಷ್ಟ 'ಜನಾದೇಶ' ವಿರದ ಪರಿಸ್ಥಿತಿಯಲ್ಲಿ ಎಲ್ಲ ಪಕ್ಷಗಳು ತಂತಮ್ಮ ಸೈದ್ಧಾಂತಿಕ ಹಾಗೂ ರಾಜಕೀಯ ನಿಲುವುಗಳ ಪ್ರಕಾರ ತಂತಮ್ಮ ನಿಲುವುಗಳನ್ನು ರೂಪಿಸಿಕೊಳ್ಳುತ್ತವೆ.

ಆದ್ದರಿಂದ ಎಲ್ಲಾ ಪಕ್ಷಗಳೂ ಈಗ ಚುನಾವಣಾ ನಂತರದ ವ್ಯವಸ್ಥೆಗಳನ್ನು ರೂಪಿಸಿಕೊಂಡು, ಆ ಮೂಲಕ ಒಂದು ಸರಕಾರ ರಚಿಸುವಂತಾಗಿ, ಇನ್ನೊಂದು ಚುನಾವಣೆ ಜನಗಳ ಮೇಲೆ, ದೇಶದ ಮೇಲೆ ಹೇರುವುದನ್ನು ತಡೆಯುವ ಬಗ್ಗೆ ಯೋಚಿಸುತ್ತಿದ್ದಾರೆ.

ಎಡಪಕ್ಷಗಳ ವಿರೋಧವೇಕೆ?

ಬಿಜೆಪಿಗೆ ಸರಕಾರ ರಚಿಸಿ ಸದನದಲ್ಲಿ ಬಹುಮತ ಸಾಬೀತು ಪಡಿಸಲು ಕೇಳಿದಲ್ಲಿ ಬಿಜೆಪಿಯ ವಿಶ್ವಾಸ ಠರಾವನ್ನು ವಿರೋಧಿಸಲು ಎಡಪಕ್ಷಗಳು ನಿರ್ಧರಿಸಿವೆ. ಆಧುನಿಕ ಭಾರತದ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಅಡಿಗಲ್ಲನ್ನು ರಕ್ಷಿಸಲು ಅವು ಹೀಗೆ ಮಾಡುತ್ತಿವೆ. ಬಿಜೆಪಿಯ ಕೋಮುವಾದಿ ಅಜೆಂಡಾ ಹಾಗೂ 'ಹಿಂದೂರಾಷ್ಟ್ರ'ದ ಅದರ ಸೈದ್ಧಾಂತಿಕ ಯೋಜನೆ ಆಧುನಿಕ ಭಾರತೀಯ ಪ್ರಭುತ್ವದ ಅಡಿಗಲ್ಲಿಗೇ ಸಂಪೂರ್ಣವಾಗಿ ವಿರುದ್ಧವಾದಂತದ್ದು. ಈ ಅಡಿಗಲ್ಲನ್ನು ರಕ್ಷಿಸದೆ ಈ ವಿಶಾಲ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಉಳಿಸಿ ಕೊಳ್ಳುವ ದಾಗಲೀ, ಜನಗಳ ಕಲ್ಯಾಣ ಹಾಗೂ ಸಮೃದ್ಧಿಯ ಪ್ರಯತ್ನ ನಡೆಸುವುದಾಗಲೀ ಸಾಧ್ಯವಿಲ್ಲ.

ಇಂತಹ ಸನ್ನಿವೇಶದಲ್ಲಿ ಬಿಜೆಪಿಗೆ 'ಅವಕಾಶ' ಕೊಡಿ ಎನ್ನುವುದು ಎಡ ಮತ್ತು ಇತರ ಪಕ್ಷಗಳು ತಮ್ಮ ರಾಜಕೀಯವನ್ನು ತ್ಯಜಿಸಬೇಕು ಎಂದೇ ಅರ್ಥ! ಇದನ್ನು ಸಾಧಿಸಲು ಅಂತರ್ಯುದ್ಧ ಹರಿಯ ಬಿಡುತ್ತೇವೆನ್ನುವಲ್ಲಿ ಸಂಸದೀಯ ಪ್ರಜಾಪ್ರಭುತ್ವದ ಕುರಿತಂತೆ, ಕಾನೂನು ಬದ್ಧ ರಾಜಕೀಯ ಚಟುವಟಿಕೆ ಕುರಿತಂತೆ ಫ್ಯಾಸಿಸ್ಟ್ ಮಾದರಿಯ ಅಸಹಿಷ್ಣುತೆಯ ವಾಸನೆ ಹೊಡೆ ಯುತ್ತದೆ.

ಇಂತಹ ಸನ್ನಿವೇಶದಲ್ಲಿ ಬಿಜೆಪಿಗೆ 'ಅವಕಾಶ' ಕೊಡಿ ಎನ್ನುವುದು ಎಡ ಮತ್ತು ಇತರ ಪಕ್ಷಗಳು ತಮ್ಮ ರಾಜಕೀಯವನ್ನು ತ್ಯಜಿಸಬೇಕು ಎಂದೇ ಅರ್ಥ! ಇದನ್ನು ಸಾಧಿಸಲು ಅಂತರ್ಯುದ್ಧ ಹರಿಯ ಬಿಡುತ್ತೇವೆನ್ನುವಲ್ಲಿ ಸಂಸದೀಯ ಪ್ರಜಾಪ್ರಭುತ್ವದ ಕುರಿತಂತೆ, ಕಾನೂನುಬದ್ಧ ರಾಜಕೀಯ ಚಟುವಟಿಕೆ ಕುರಿತಂತೆ ಫ್ಯಾಸಿಸ್ಟ್ ಮಾದರಿಯ ಅಸಹಿಷ್ಣುತೆಯ ವಾಸನೆ ಹೊಡೆಯುತ್ತದೆ.

ಒಂದು ಕೃತಕ ಬಹುಮತ ಪೇರಿಸು ವಲ್ಲಿ ಬಿಜೆಪಿಯದ್ದು ಎತ್ತಿದ ಕೈ. ಅದು ಲಕ್ನೌದಲ್ಲಿ ಮಾಡಿದ್ದನ್ನು ದಿಲ್ಲಿಯಲ್ಲೂ ಪುನರಾವರ್ತಿಸಲು ಉತ್ತರ ಪ್ರದೇಶದ ಅನುಭವದ ಮೊರೆ ಹೋಗುತ್ತಿದೆ. ಭಾರೀ ಪ್ರಮಾಣದ ಹಣಕಾಸಿನ ಆಮಿಷಗಳು ಹಾಗೂ ಅಧಿಕಾರದ ಆಮಿಷಗಳು ಅನುಸರಿಸುವ ವಿಧಾನಗಳಲ್ಲಿ ಕೆಲವು.

ಅದಕ್ಕೂ ಮುಖ್ಯವಾಗಿ ಬಿಜೆಪಿ ಹೆಚ್ಚಿನ ಬೆಂಬಲ ಗಿಟ್ಟಿಸಲು ತಾನು ಎಲ್ಲರೊಂದಿಗೂ ಹೊಂದಿಕೊಳ್ಳುವ ಹಾಗೆ ಕಾಣಲು ಪ್ರಯತ್ನಿಸುತ್ತಿದೆ. ತನ್ನ ಕೋಮುವಾದಿ ಅಜೆಂಡಾವನ್ನು ಬದಿಗೊತ್ತುವುದಾಗಿ ಅದು ಕೂಡಲೇ ಹೇಳಿದೆ. ಅಯೋಧ್ಯೆ, 370ನೇ ಕಲಮು, ಏಕರೂಪ ನಾಗರೀಕ ಸಂಹಿತೆ ಮುಂತಾದವುಗಳ ಬಗ್ಗೆ ಭಜರಂಗ ದಳ, ವಿಹೆಚ್‌ಪಿ ಮುಂತಾದ ಕಾವಿಪಡೆಗಳ ಇತರರು ಎತ್ತಿಕೊಳ್ಳುತ್ತಾರಷ್ಟೆ! ಅಯೋಧ್ಯೆ ಕುರಿತಂತೆಯೂ ಈ ಹಿಂದೆ ಬಿಜೆಪಿ ಇದೇ ತಂತ್ರ ಅನುಸರಿಸಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಆರಂಭದಲ್ಲಿ ವಿಹೆಚ್‌ಪಿ ಮತ್ತಿತರರು ಈ ಆಂದೋಲನ ನಡೆಸಿ ಕೋಮು ಭಾವೋದ್ರೇಕ ಎಬ್ಬಿಸಲು ಪ್ರಯತ್ನಿಸಿದರು. ನಂತರ ಬಿಜೆಪಿ ಈ ಆಂದೋಲನಕ್ಕೆ ನೇತೃತ್ವ ನೀಡಲು ಧುಮುಕಿತು, ಆ ಮೂಲಕ 1991 ರಲ್ಲಿ ಅಧಿಕಾರಕ್ಕೆ ಲಗ್ಗೆ ಹಾಕಲು ಪ್ರಯತ್ನಿಸಿತು. ಇದನ್ನು ಮರೆಯುವುದೆಂದರೆ ನಾವೇ ಗಂಡಾಂತರ ತಂದುಕೊಂಡಂತೆಯೇ!

ನಿಜವಾಗಿ, ಬಿಜೆಪಿ ರೂಪಿಸುತ್ತಿರುವ 'ರಾಷ್ಟ್ರೀಯ ಅಜೆಂಡಾ' ಕೇವಲ ಒಂದು ಮರೆಮಾಚುವ ತಂತ್ರ. ಈಗ ಅದು ಹೇಗಾದರೂ ಮಾಡಿ 'ರಾಜಕೀಯ ಇಂಜಿನಿಯರಿಂಗ್' ಮೂಲಕ ಒಂದು ಸರಕಾರವನ್ನು ಜೋಡಿಸುವತ್ತ ತನ್ನ ಗಮನ ಕೇಂದ್ರೀಕರಿಸಿದೆ. ಆದರೆ ಇದರ ಹಿಂದಿರುವ ನಿಜವಾದ ಅಜೆಂಡಾವನ್ನು ಎಷ್ಟು ದಿನ ಮುಚ್ಚಿಡಲು ಸಾಧ್ಯ? ಅಜೆಂಡಾ ತೆರೆದು ಕೊಳ್ಳುತ್ತಾ ಹೋದಂತೆ ಭಾರತದ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಅಡಿಗಲ್ಲಿಗೆ ಅತ್ಯಂತ ಗಂಭೀರ ಸವಾಲು ಬರಲಾರಂಭಿಸುತ್ತದೆ.

ನಕಾರಾತ್ಮಕ ಬೆಳವಣಿಗೆಯಾಗಬೇಕಿಲ್ಲ

ಒಟ್ಟಾರೆಯಾಗಿ ಈ ಫಲಿತಾಂಶಗಳು, ಒಂದರ್ಥದಲ್ಲಿ 1996 ರ ವೇಳೆಗೆ ಮಾಡಿದ ವಿಶ್ಲೇಷಣೆಯನ್ನು ದೃಢಪಡಿಸಿವೆ. ದೇಶ ಹಾಗೂ ಜನ ನಿಜವಾಗಿಯೂ ಒಂದು ಆಳವಾದ ಮಂಥನದ ಪ್ರಕ್ರಿಯೆಯ ಮೂಲಕ ಹಾದು ಹೋಗುತ್ತಿದೆ. ಭಾರತದ ಸಾಮಾಜಿಕ ವೈವಿಧ್ಯತೆ, ಬಹುಮುಖತೆ ರಾಜಕೀಯ ವ್ಯವಸ್ಥೆಯಲ್ಲೂ ಸ್ಪಷ್ಟವಾಗಿ ಪ್ರಕಟಗೊಳ್ಳುತ್ತಿದೆ. ಈಗ ಕಾಣುತ್ತಿರುವ ರಾಜಕೀಯ ಅಸ್ಥಿರತೆ ಇದರ ಅಭಿವ್ಯಕ್ತಿ ತ್ರಿಶಂಕು ಸಂಸತ್ತುಗಳು, 'ಬಿರುಕು ಬಿಟ್ಟ' ತೀರ್ಪುಗಳು ನಕಾರಾತ್ಮಕವಾದ ಹಾಗೂ ಪ್ರತಿಗಾಮಿಯಾದ ಬೆಳವಣಿಗೆಯಾಗಲೇ ಬೇಕೆಂದೇನಿಲ್ಲ. ಇದು ಭಾರತೀಯ ಪ್ರಜಾಪ್ರಭುತ್ವ ಪ್ರೌಢಗೊಳ್ಳುತ್ತಿರುವ ಪ್ರಕ್ರಿಯೆಯ ಪ್ರತಿಫಲನ. ಆದರೆ ಈ ಪ್ರಕ್ರಿಯೆ ಒಂದೋ ಒಂದು ವಿಕೃತಿ ಪ್ರಜಾಪ್ರಭುತ್ವವಾಗಿ ಅವನತಿಗೊಳ್ಳಬಹುದು ಅಥವಾ ಒಂದು ಹೆಚ್ಚು ಚೈತನ್ಯಶೀಲ ಹಾಗೂ ಜನ ಭಾಗವಹಿಸು ವಂತಹ ಪ್ರಜಾ ಪ್ರಭುತ್ವದತ್ತ ಸಾಗು ವಂತೆ ಮಾಡ ಬಹುದು.

ಹೊಸ ಹೊಸ ಪದಗಳನ್ನು ಸೃಷ್ಟಿಸಲು ಸದಾ ತುದಿಗಾಲ ಮೇಲೆ ನಿಂತಿರುವ ಚುನಾವಣಾ ವಿಶ್ಲೇಷಣಾ ತಜ್ಞರು ಇಂತಹ ಫಲಿತಾಂಶಗಳನ್ನು ವಿವರಿಸಲು 'ಅಧಿಕಾರಸ್ಥರಾಗಿರುವ ಅಂಶ', 'ವಿರೋಧಿ ಐಕ್ಯತೆಯ ಸೂಚ್ಯಂಕ' ಇತ್ಯಾದಿ ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಆದರೆ ತ್ರಿಪುರಾದಲ್ಲಿ ಎಡರಂಗ ತನ್ನ ಮೂರನೇ ಎರಡು ಬಹುಮತವನ್ನು ಉಳಿಸಿಕೊಂಡು ಭಾರೀ ಜಯ ಸಾಧಿಸಿರುವುದು, ಪಶ್ಚಿಮ ಬಂಗಾಳ ಹಾಗೂ ಕೇರಳಗಳಲ್ಲಿ ಸಿಪಿಐ(ಎಂ) ಒಂದೊಂದು ಸ್ಥಾನಗಳನ್ನು ಹೆಚ್ಚಿಸಿಕೊಂಡಿರುವುದನ್ನು ನೋಡಿದಾಗ ಇಂತಹ ಪದಗಳು ನಿರರ್ಥಕ, ಅವು ಏನನ್ನು ವಿವರಿಸುವುದಿಲ್ಲ ಎಂಬುದು ಸ್ಪಷ್ಟವಾಗು ತ್ತದೆ.

ಈ ಎರಡನೇ ಗುರಿಸಾಧನೆಯಾಗ ಬೇಕಾದರೆ ಅತ್ಯಂತ ಮಹತ್ವದ್ದೆಂದರೆ ಭಾರತದಂತಹ ವಿಶಾಲ ಗಾತ್ರದ, ಕ್ಲಿಷ್ಟತೆಯ ಒಂದು ದೇಶದ ಐಕ್ಯತೆಯನ್ನು ಕಾಪಾಡಿಕೊಳ್ಳಲು ಅದರ ವೈವಿಧ್ಯತೆ ಯಲ್ಲಿ ಹಾಸು ಹೊಕ್ಕಾಗಿರುವ ಸಮಾನ ಅಂಶಗಳನ್ನು ಬಲಗೊಳಿಸುವುದು ಅಗತ್ಯ ಎಂದರಿತ ಒಂದು ರಾಜಕೀಯ ಕಣ್ಣೋಟ. ಕೋಮುವಾದಿ ಶಕ್ತಿಗಳು ಕಂಡರಿಸುವ ರೀತಿಯಲ್ಲಿ ಈ ವೈವಿಧ್ಯತೆಯ ಮೇಲೆ ಏಕರೂಪತೆಯನ್ನು ಹೇರಿ ಈ ಐಕ್ಯತೆ ಯನ್ನು ಉಳಿಸಿಕೊಳ್ಳುವುದು ಸಾಧ್ಯವಿಲ್ಲ. ಒಂದರ್ಥದಲ್ಲಿ ಬಿಜೆಪಿ ಕೂಟದ ಸ್ಥಾನ ಗಳಲ್ಲಿ ಹೆಚ್ಚಳ ಕೂಡಾ ಈ ವಾಸ್ತವತೆ ಯನ್ನೇ ತೋರುತ್ತದೆ. ಬಿಜೆಪಿಯ ಸ್ಥಾನಗಳಲ್ಲಿ ಹೆಚ್ಚಳವಾದದ್ದು ತನ್ನ ಪ್ರಾದೇಶಿಕ ಮಿತ್ರರ ಬೆನ್ನೇರಿ ಬಂದ ಹೆಚ್ಚಳದಿಂದಷ್ಟೇ. ಅದರ ಎಂದಿನ ನೆಲೆಗಳನ್ನು ವಾಸ್ತವವಾಗಿ ಅದು ಕಳಕೊಂಡಿದೆ. ಇಲ್ಲೇ ನಾವು ಒಂದು ಮೂಲಭೂತ ವೈರುಧ್ಯವನ್ನು ಕಾಣ ಬಹುದು. ಅದರ ರಾಜಕೀಯ ಮುನ್ನಡೆಯ ಬೆನ್ನೆಲುಬಾದ 'ಹಿಂದೂರಾಷ್ಟ್ರ'ದ ಸಾಂಪ್ರದಾಯಿಕ ಕಣ್ಣೋಟ ಹಾಗೂ ಭಾರತದ ಕ್ಲಿಷ್ಟ ವೈವಿಧ್ಯತೆ ಇವುಗಳ ನಡುವಿನ ವೈರುಧ್ಯವದು. ಈ ವೈರುಧ್ಯವನ್ನು ಪರಿಶೀಲಿಸಿಕೊಳ್ಳುವುದು ಬಿಜೆಪಿಗೆ ಕಷ್ಟಸಾಧ್ಯ.

ಇದರ ಇನ್ನೊಂದು ಮಗ್ಗುಲೆಂದರೆ ಈ ಚುನಾವಣೆಗಳು ಸಂಯುಕ್ತ ರಂಗದ ವಿಕಾಸ ಕೇವಲ ಆಕಸ್ಮಿಕವಲ್ಲ ಎಂಬುದನ್ನೂ ದೃಢಪಡಿಸಿವೆ. ಸಂಯುಕ್ತ ರಂಗದ ಕೆಲವು ಅಂಗಪಕ್ಷಗಳು ವಿಶೇಷವಾಗಿ ಜನತಾದಳದ ಫಲಿತಾಂಶ ಶೋಚನೀಯವಾಗಿದ್ದರೂ ಕೂಡಾ ಸಂಯುಕ್ತ ರಂಗದ ಪರಿಕಲ್ಪನೆ ಮೇಲೆ ಹೇಳಿದ ಭಾರತದ ವಾಸ್ತವತೆಯ ಕಣ್ಣೋಟವನ್ನು ಬಿಂಬಿಸುವ ಒಂದು ಪರಿಕಲ್ಪನೆ ಎಂಬುದಂತೂ ಸತ್ಯ ಸಂಗತಿ. ಕೆಲವು ಅಂಗಪಕ್ಷಗಳ ವಿಫಲತೆಗೆ ಕೂಡಾ ಮುಖ್ಯವಾಗಿ ಈ ಸಂಯುಕ್ತರಂಗದ ಪರಿಕಲ್ಪನೆಯ ಅಪೂರ್ಣ ಅರಿವು ಹಾಗೂ ಅದನ್ನು ಸಾಕಷ್ಟು ರೀತಿಯಲ್ಲಿ ಗ್ರಹಿಸದಿರುವುದೇ ಕಾರಣ ಎಂದರೆ ತಪ್ಪಾಗಲಾರದು. ಭಾರತದ ಭವಿಷ್ಯದ ದೃಷ್ಟಿಯಿಂದಲೂ ಈ ದೌರ್ಬಲ್ಯವನ್ನು ಬೇಗನೇ ನೀಗಲಾಗುವುದು ಎಂದು ಆಶಿಸೋಣ.

ಏನೂ ವಿವರಿಸದ ನಿರರ್ಥಕ ಪದಗುಚ್ಛ

ಕೊನೆಯದಾಗಿ, ಈ ಚುನಾವಣೆಗಳು ಇನ್ನೊಂದು ವಾಸ್ತವತೆಯನ್ನು ಬಿಂಬಿಸಿವೆ. ಕೆಲವು ರಾಜ್ಯಗಳಲ್ಲಿ ಆಳುವ ಕೂಟಗಳು ತೀವ್ರ ಹೊಡೆತ ತಿಂದಿವೆ. ಎಲ್ಲೆಲ್ಲಿ ರಾಜ್ಯ ಸರಕಾರಗಳು ಜನಗಳ ಮೇಲೆ ಹೆಚ್ಚಿನ ಹೊರೆ ಹೇರುವ ಉದಾರೀಕರಣದ ಆರ್ಥಿಕ ನೀತಿಗಳನ್ನು ಅನುಸರಿಸಿವೆಯೋ ಅಲ್ಲೆಲ್ಲಾ ಜನರ ತೀವ್ರ ಅಸಂತೃಪ್ತಿಗೆ ಅವು ಈಡಾಗಿ ಅದಕ್ಕಾಗಿ ಬೆಲೆ ತೆರಬೇಕಾಗಿ ಬಂದಿವೆ ಎಂಬುದು ಗಮನಾರ್ಹ. ಹೊಸ ಹೊಸ ಪದಗಳನ್ನು ಸೃಷ್ಟಿಸಲು ಸದಾ ತುದಿಗಾಲ ಮೇಲೆ ನಿಂತಿರುವ ಚುನಾವಣಾ ವಿಶ್ಲೇಷಣಾ ತಜ್ಞರು ಇಂತಹ ಫಲಿತಾಂಶಗಳನ್ನು ವಿವರಿಸಲು 'ಅಧಿಕಾರಸ್ಥರಾಗಿರುವ ಅಂಶ', 'ವಿರೋಧಿ ಐಕ್ಯತೆಯ ಸೂಚ್ಯಂಕ' ಇತ್ಯಾದಿ ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಆದರೆ ತ್ರಿಪುರಾದಲ್ಲಿ ಎಡರಂಗ ತನ್ನ ಮೂರನೇ ಎರಡು ಬಹುಮತವನ್ನು ಉಳಿಸಿಕೊಂಡು ಭಾರೀ ಜಯ ಸಾಧಿಸಿರುವುದು, ಪಶ್ಚಿಮ ಬಂಗಾಳ ಹಾಗೂ ಕೇರಳಗಳಲ್ಲಿ ಸಿಪಿಐ (ಎಂ) ಒಂದೊಂದು ಸ್ಥಾನಗಳನ್ನು ಹೆಚ್ಚಿಸಿಕೊಂಡಿರುವುದನ್ನು ನೋಡಿದಾಗ ಇಂತಹ ಪದಗಳು ನಿರರ್ಥಕ, ಅವು ಏನನ್ನು ವಿವರಿಸು ವುದಿಲ್ಲ ಎಂಬುದು ಸ್ಪಷ್ಟವಾಗು ತ್ತದೆ. ಈ ಫಲಿತಾಂಶಗಳ ಬಗ್ಗೆ ಕೊಡ ಬಹು ದಾದ ನಿಜವಾದ ವಿವರಣೆಯೆಂದರೆ ಎಲ್ಲೆಲ್ಲಾ ರಾಜ್ಯ ಸರಕಾರಗಳು ಜನಗಳ ಹಿತಗಳನ್ನು ಗಮನಿಸಿ ಕೆಲಸ ಮಾಡಿದ್ದವೋ, ಅವರ ಹಕ್ಕುಗಳನ್ನು ರಕ್ಷಿಸಿದ್ದವೋ ಅಲ್ಲೆಲ್ಲಾ ಅವಕ್ಕೆ ಜನಗಳ ಬೆಂಬಲ ಸಿಕ್ಕಿದೆ ಈ ಬಾರಿಯ ತೀರ್ಪಿನಿಂದ ಎದ್ದು ಕಾಣುವ ಒಂದು ಅಂಶವೆಂದರೆ ತಮ್ಮ ಬದುಕನ್ನು ದುರ್ಭರಗೊಳಿಸಿದ, ಆರ್ಥಿಕಕ್ಕೆ ಹಾಗೂ ಇಡೀ ದೇಶಕ್ಕೆ ವಿನಾಶಕಾರಿಯೆಂದು ಸಾಬೀತಾಗಿರುವ ಉದಾರೀಕರಣ ಆರ್ಥಿಕ ನೀತಿಗಳಿಂದ ಜನ ಹೆಚ್ಚೆಚ್ಚು ಭ್ರಮನಿರಸ ಗೊಳ್ಳುತ್ತಿದ್ದಾರೆ.

'ರಾಷ್ಟ್ರೀಯ ಅಜೆಂಡಾ' ವೆಂಬ ಮೋಸದ ಹಿನ್ನೆಲೆಯಲ್ಲಿ ವಾಜಪೇಯಿ ಸರಕಾರದ ಅಧಿಕಾರ ಸ್ವೀಕಾರ

'ಸಮರ್ಥ' ಪ್ರಧಾನಿಗಳೇ, 'ಸುಭದ್ರ' ಸರಕಾರ ನೀಡಬಲ್ಲಿರಾ ಎಂದು ರಾಷ್ಟ್ರಪತಿಗಳು ಕೇಳಿದ ಒಂಭತ್ತು ದಿನಗಳ ನಂತರ ಕೊನೆಗೂ ಬಿಜೆಪಿ ನೇತೃತ್ವದ ಮಂತ್ರಿಮಂಡಳ ಮಾರ್ಚ್ 19 ರಂದು ಪ್ರಮಾಣ ವಚನ ಸ್ವೀಕರಿಸಿತು. ಸರಿಯಾಗಿ ಒಂದು ವಾರದ ನಂತರ ಲೋಕಸಭೆಯಲ್ಲಿ ಅದು ವಿಶ್ವಾಸ ಮತವನ್ನು ಕೇಳಲಿದೆಯಂತೆ. ಇನ್ನೂ ಸ್ಪಷ್ಟ ಬಹುಮತ ಪಡೆಯದಿದ್ದರೂ ಈ ಕೂಟ ಈ ಬಾರಿ 13 ದಿನಗಳಿಗಿಂತ ಹೆಚ್ಚು ಬಾಳುವ ನಿರೀಕ್ಷೆಯಿಟ್ಟುಕೊಂಡಿದೆ. ಅದೀಗ ತೆಲುಗುದೇಶಂ ಪಕ್ಷದ ಬೆಂಬಲವನ್ನು ನೆಚ್ಚಿಕೊಂಡಿದೆ. ಇದುವರೆಗೆ ತಾನು ತಟಸ್ಥವಾಗಿರುವುದಾಗಿ ಈ ಪಕ್ಷ ಹೇಳುತ್ತಿದೆ. ಇಂತಹ ಅನಿಶ್ಚತತೆಯ ಸ್ಥಿತಿಯಲ್ಲೂ 43 ಮಂತ್ರಿಗಳ ಸಂಪುಟವನ್ನು ರಚಿಸಲಾಗಿದೆ ಯೆನ್ನುವುದೇ ಈ ಸರಕಾರದ 'ಸುಭದ್ರತೆ' ಹಾಗೂ ಹೊಸ ಪ್ರಧಾನಿಗಳ 'ಸಾಮರ್ಥ್ಯ'ದ ಪ್ರತಿಫಲನ ಎನ್ನಲಾಗುತ್ತಿದೆ. ವಾಸ್ತವವಾಗಿ ಇದೊಂದು ಸಿದ್ಧಾಂತವಿಹೀನ ಕೇವಲ ಅಧಿಕಾರ ದಾಸೆಯಿಂದ ಬೆಸೆದುಕೊಂಡ ಮೈತ್ರಿಕೂಟ ಎಂಬುದನ್ನು ಈ ಸರಕಾರ ಏರ್ಪಟ್ಟ ರೀತಿಯೇ ಸಾರಿ ಹೇಳುತ್ತಿದೆ.

ಚುನಾವಣೆಗಳ ಮೊದಲು ಒಂದು ಸಮಾನ ಕಾರ್ಯಕ್ರಮವನ್ನು ರೂಪಿಸಲು ಅಸಮರ್ಥರಾದ ಬಿಜೆಪಿ ಮತ್ತು ಅದರ ಕಿರಿಯ ಮಿತ್ರಪಕ್ಷಗಳು ಈಗ ಅಧಿಕಾರ ಹಿಡಿಯುವ ಹಿಂದಿನ ದಿನವಷ್ಟೇ ಕೊನೆಗೂ ಒಂದು 'ಅಜೆಂಡಾ' ವನ್ನು ಮುಂದಿಟ್ಟಿದ್ದಾರೆ. 'ಆಡಳಿತದ ರಾಷ್ಟ್ರೀಯ ಕಾರ್ಯಸೂಚಿ' ಎಂಬ ದೊಡ್ಡ ಹೆಸರಿನ ಇದು ಕಾರ್ಯಸೂಚಿಯೂ ಅಲ್ಲ, ಆಡಳಿತಕ್ಕೆ ಮಾರ್ಗದರ್ಶನ ನೀಡಬಲ್ಲ ದಸ್ತಾವೇಜು ಕೂಡಾ ಅಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಪ್ರತಿಕ್ರಿಯಿಸಿದೆ. ಇದ್ದು ನೀತಿ ಬೋಧೆಗಳ, ಆಡಂಬರದ ಪದಗಳ ಒಂದು ಚರ್ವಿತಚರ್ವಣವಷ್ಟೆ. ಬಿಜೆಪಿ ಬೇಕೆಂದೇ ಇಂತಹ ಅಸ್ಪಷ್ಟ ಹೇಳಿಕೆಗಳನ್ನು ಸೇರಿಸಿದೆ, ಮುಂದೆ ತನ್ನ ಅಧಿಕಾರವನ್ನು ಕ್ರೋಢೀಕರಿಸಿಕೊಂಡಾಗ ತನ್ನ ಅಜೆಂಡಾವನ್ನು ಕಳ್ಳತನದಿಂದ ತೂರಿಸಬಹುದು ಎಂಬ ನಿರೀಕ್ಷೆಯಿಂದ ಹೀಗೆ ಮಾಡಲಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅಭಿಪ್ರಾಯ ಪಟ್ಟಿದೆ.

"55 ಮುದ್ರಿತ ಪುಟಗಳ ಪ್ರಣಾಳಿಕೆಯ ನಂತರ ಬಿಜೆಪಿ ಈಗ ಸಾರ್ವತ್ರಿಕ ಮಾತುಗಳೇ ತುಂಬಿದ ಎಂಟು ಪುಟಗಳನ್ನು ಹೊರತಂದಿದೆ. ಇದರಲ್ಲಿ ಅನುಷ್ಠಾನಕ್ಕೆ ತರಬಹುದಾದ ನಿರ್ದಿಷ್ಟ ಅಂಶಗಳು ಏನೂ ಇಲ್ಲ. ಆದರೆ ಬಿಜೆಪಿಯ ರಾಜಕೀಯ ಸಿದ್ಧಾಂತ ತಿಳಿದಿರುವ ಯಾರಿಗಾದರೂ ವಾಜಪೇಯಿ ಸರಕಾರ ಎಲ್ಲಕ್ಕೂ ಮೊದಲು ಭಾರತೀಯ ಸಂವಿಧಾನದ ಮೇಲೆ ಧಾಳಿ ಮಾಡಲಿದೆ ಎಂಬುದು ಸ್ವಯಂವೇದ್ಯ. ಈ ಅಜೆಂಡಾದಲ್ಲಿ ಸೇರಿಸದ ಬಿಜೆಪಿ ಪ್ರಣಾಳಿಕೆಯ ಕೆಲವು ಅಂಶಗಳಲ್ಲಿ ಒಂದೆಂದರೆ ಸಂವಿಧಾನದ ವಿಮರ್ಶೆ ನಡೆಸಲು ಒಂದು ಆಯೋಗದ ರಚನೆ. ಧರ್ಮನಿರಪೇಕ್ಷತೆ ಸಂವಿಧಾನದ ಒಂದು ಮೂಲಭೂತ ಅಂಶ ಎಂಬುದನ್ನು ಬಿಜೆಪಿ ಒಪ್ಪುವುದಿಲ್ಲ. ಅದು ಒಂದು ಅಧ್ಯಕ್ಷೀಯ ಮಾದರಿ ಸರಕಾರ ಬಯಸುತ್ತದೆ, 370ನೇ ಕಲಮು ಹಾಗೂ 30ನೇ ಕಲಮನ್ನು ರದ್ದು ಮಾಡಬಯಸುತ್ತದೆ. ಅದು ವಿಮರ್ಶೆಯ ನೆಪದಲ್ಲಿ ಗಣತಂತ್ರ ಧರ್ಮನಿರಪೇಕ್ಷ ಸಂವಿಧಾನವನ್ನು ಬುಡಮೇಲು ಮಾಡಬಯಸುತ್ತದೆ" ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ಅನಿಷ್ಟಕಾರಿ ಕ್ರಮವನ್ನು ಎಲ್ಲಾ ನಾಗರೀಕರು ಸಂಪೂರ್ಣವಾಗಿ ವಿರೋಧಿಸಬೇಕು ಎಂದು ಹೇಳಿದೆ. ಇದು ಅಲ್ಪಮತದ ಪಕ್ಷ, ಇಂತಹ ಮೂಲಭೂತ ಪ್ರಶ್ನೆಯನ್ನು ಸಂಸತ್ತು ಮಾತ್ರವೇ ನಿರ್ಧರಿಸಲು ಸಾಧ್ಯ ಎಂದು ಸಿಪಿಐ(ಎಂ) ಹೇಳಿದೆ.


ಆರ್ಥಿಕ ಧೋರಣೆಯಲ್ಲಿ ಈ 'ಅಜೆಂಡಾ' ಒಂದು ಬಲಪಂಥೀಯ ದಾರಿಯ ಶಿಫಾರಸು ಮಾಡಿದೆ. ವಾಜಪೇಯಿ ಸರಕಾರ ಖಾಸಗೀಕರಣ ಮತ್ತು ಉದಾರೀಕರಣವನ್ನು ಮುಂದುವರಿಸುತ್ತದೆ, ಕಳಚಿ ಹಾಕುವ ಪಟ್ಟಿಯಲ್ಲಿ ಸಾರ್ವಜನಿಕ ವಲಯವೇ ಅದರ ಮೇಲೆ ಮೊದಲ ಗುರಿ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಇನ್ನು ಈ ಕಾರ್ಯಸೂಚಿಯ ಇತರ ಅಂಶಗಳಲ್ಲಿ ಎಲ್ಲರಿಗೂ ಎಲ್ಲವನ್ನೂ ನೀಡುವ ಅಮೋಘ ವಚನಗಳು ತುಂಬಿಕೊಂಡಿವೆ - ಉದ್ಯೋಗ ವಚನ, ಆಹಾರದ ವಚನ, ಆರೋಗ್ಯದ ವಚನ, ವಸತಿಯ ವಚನ, ಶಿಕ್ಷಣದ ವಚನ ಇತ್ಯಾದಿ. ವಿದೇಶಾಂಗ ನೀತಿಯ ಬಗ್ಗೆ ಹೇಳುವಾಗ ನಮ್ಮ ವಿದೇಶಾಂಗ ನೀತಿಯ ಮೂಲಾಧಾರವಾದ ಅಲಿಪ್ತ ನೀತಿಯನ್ನು ಅನುಸರಿಸಲಾಗುವುದು ಎಂಬ ನಟನೆಯ ಮಾತು ಕೂಡಾ ಇಲ್ಲ. ಪರಮಾಣು ಆಯ್ಕೆಯನ್ನು ಪ್ರಯೋಗಿಸುವ ವಚನವಂತೂ ತಪ್ಪಾದ ಹಾಗೂ ಅಪಾಯಕಾರಿಯಾದ ಕ್ರಮ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಸಹಜವಾಗಿಯೇ ಬಿಜೆಪಿಯ ನಿಜವಾದ ಅಜೆಂಡಾ ಮತ್ತು ಜಯಲಲಿತಾರಂತಹ ಅದರ ಮಿತ್ರರ ಸಮಯಸಾಧಕ ಬೇಡಿಕೆಗಳು ಈ ದಸ್ತಾವೇಜಿನಲ್ಲಿ ಬರಲು ಸಾಧ್ಯವಿಲ್ಲ. ಬಿಜೆಪಿ-ಆರ್.ಎಸ್.ಎಸ್. ಕೂಟ ಮುಂದಿಟ್ಟ ರಾಷ್ಟ್ರೀಯ ಅಜೆಂಡಾ ಸ್ವಯಂ-ಖಂಡನೆಯಿಂದ ಕೂಡಿದ್ದು, ಅದು ಸಮಯಸಾಧಕ ಮೈತ್ರಿಕೂಟದ ದಿವಾಳಿಯ ಬಹಿರಂಗ ಘೋಷಣೆ, ಅದು ಜನಗಳಿಗೆ ಮಾಡಿರುವ ಮೋಸ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ.

ಭ್ರಷ್ಟಾಚಾರದ ಆಪಾದನೆಗೊಳಗಾದ ವರೊಡನೆ, ಅಷ್ಟೇ ಅಲ್ಲ ತಾನೇ ಈ ಹಿಂದೆ ಭ್ರಷ್ಟಾಚಾರಕ್ಕಾಗಿ ಬಲವಾಗಿ ಖಂಡಿಸಿದ ಸುಖ್‌ರಾಂರಂತವರೊಡನೆ ಅಧಿಕಾರಕ್ಕಾಗಿ ಮೈತ್ರಿ ಮಾಡಿಕೊಂಡಿರುವ ಬಾಬ್ರಿಮಸೀದಿ ಯನ್ನು ಧ್ವಂಸ ಮಾಡಿದ ಬಿಜೆಪಿ ನೇತೃತ್ವದ ಈ ದಸ್ತಾವೇಜು 'ಒಂದು ಪ್ರಾಮಾಣಿಕ ಪಾರದರ್ಶಕ ಹಾಗೂ ದಕ್ಷವಾದ ಭ್ರಷ್ಟಾಚಾರದ ವಿರುದ್ಧ ಹೋರಾಡುವ ಸರಕಾರ' ಕೊಡುವುದಾಗಿ ವಚನ ನೀಡಿದೆ! 'ನೈಜ ಧರ್ಮನಿರಪೇಕ್ಷತೆಯನ್ನು ಎತ್ತಿ ಹಿಡಿದು ಒಂದು ನಾಗರಿಕ ಮಾನವೀಯ ಹಾಗೂ ನ್ಯಾಯಯುತ ನಾಗರಿಕ ವ್ಯವಸ್ಥೆ' ಸ್ಥಾಪಿಸುವ ವಚನ ನೀಡಿದೆ! ಜನ ಇದರ ಹಿಂದಿರುವ ಮೋಸವನ್ನು ಅರ್ಥ ಮಾಡಿಕೊಳ್ಳುತ್ತಾರೆ ಎಂದು ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಜ್ಯೋತಿಬಸು ಹೇಳಿದ್ದಾರೆ.

ಬಿಜೆಪಿಯ ಈ ಮೋಸವನ್ನು ಅದು ಕೇಂದ್ರದಲ್ಲಿ ಅಧಿಕಾರಕ್ಕೇರಿರುವ ಅಪಾಯದ ಅರಿವನ್ನು ಜನರಲ್ಲಿ ಮೂಡಿಸಬೇಕಾಗಿದೆ. ತಕ್ಷಣದ ಭವಿಷ್ಯದಲ್ಲಿ ಏನೇ ಆಗಲಿ, ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ನಮ್ಮ ಸಮಾಜದ ಧರ್ಮನಿರಪೇಕ್ಷ ಆಧಾರವನ್ನು ರಕ್ಷಿಸಲು ಟೊಂಕಕಟ್ಟಬೇಕಾಗಿದೆ. ಮೂಲಭೂತ ವರ್ಗಗಳನ್ನು ಅಣಿನೆರೆಸಲು ಅತ್ಯಂತ ಅಗತ್ಯವಾದ ಆರ್ಥಿಕ ಹೋರಾಟಗಳು ಪರಿಣಾಮ ಕಾರಿಯಾಗಬೇಕಾದರೆ ರಾಜಕೀಯ ಮತ್ತು ಸೈದ್ಧಾಂತಿಕ ಸಮರ ನಡೆಸುವುದು ಅಗತ್ಯ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು ಪಕ್ಷದ ಕೇಂದ್ರ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಬರೆದಿರುವ ಲೇಖನದಲ್ಲಿ ಎಚ್ಚರಿಸಿದ್ದಾರೆ.



ಬೆಂಬಲ ಪತ್ರಗಳಿಗಾಗಿ ಕಾದಿರುವ ವಾಜಪೇಯಿ

'ಹಿಂದೂ'ನಲ್ಲಿ ಸುರೇಂದ್ರನ್ ವ್ಯಂಗ್ಯ

ಬಿಜೆಪಿ ನೇತೃತ್ವದ ಸರಕಾರದ ಭವಿಷ್ಯದ ಇಣುಕುನೋಟ ನೀಡಿದ 'ಅಜೆಂಡಾ' ಬಿಡುಗಡೆ ಸಮಾರಂಭ

ಮಾರ್ಚ್ ೧೮ ರಂದು ಅಸಹಿಷ್ಣು ಕಾವಿಪಡೆಗಳ ಉದಾರವಾದಿ ಮುಖವಾಡವೆನಿಸಿದ ವಾಜಪೇಯಿ ಯವರು ಬಿಜೆಪಿ ಮೈತ್ರಿಕೂಟದ 'ಆಡಳಿತದ ರಾಷ್ಟ್ರೀಯ ಕಾರ್ಯಸೂಚಿ'ಯನ್ನು ಬಿಡುಗಡೆ ಮಾಡಿದರು. ವಾಜಪೇಯಿ ಯವರ ನಿವಾಸದಲ್ಲಿ ಬೃಹತ್ ಶಾಮಿಯಾನ ಹಾಕಿ ನಡೆಸಿದ ಈ ಸಮಾರಂಭವೇ ಬಿಜೆಪಿ ನೇತೃತ್ವದ ಸರಕಾರದಲ್ಲಿನ ತಿಕ್ಕಾಟಗಳು, ಸೆಳೆತಗಳು ಹಾಗೂ ಅಪಾಯಗಳ ಮುನ್ಸೂಚನೆ ನೀಡಿದೆ.

ಈ ಪತ್ರಿಕಾ ಸಮ್ಮೇಳನವೇ ಒಂದು ದೊಡ್ಡ ತಮಾಷೆಯಾಗಿತ್ತು. ನೂರಾರು ಕ್ಯಾಮರಾಗಳು, ತಿಂಡಿ-ತಿನಿಸುಗಳು ತುಂಬಿದ್ದ ಟೇಬಲ್‌ಗಳು, ಪತ್ರಕರ್ತರ ವಿವಿಧ ಗುಂಪುಗಳೊಡನೆ ದರ್ಬಾರು ನಡೆಸುತ್ತಿದ್ದ ಬಿಜೆಪಿ ಕಾರ್ಯದರ್ಶಿಗಳು. ಆದರೆ ಅಜೆಂಡಾ ಕುರಿತ ಪ್ರಶ್ನೋತ್ತರಗಳು ಮಾತ್ರ ಅತ್ಯಂತ ನಿರಾಸಕ್ತಿದಾಯಕ ವಾಗಿದ್ದವು. ಗೌರವ, ಆಶ್ಚರ್ಯಗಳಿಂದ ಅವಾಕ್ಕಾದಂತಿದ್ದ ಪತ್ರಕರ್ತರೇ ನೆರೆದಿದ್ದರೂ ಕೂಡಾ ಕೆಲವೊಂದು ಕಷ್ಟಕರ ಪ್ರಶ್ನೆ ಬಂದಾಗ ವಾಜಪೇಯಿ ಅದನ್ನು ಬದಿಗೆ ತಳ್ಳಿದರು ಅಥವಾ ಒಂದೆರಡು ಬಾರಿ ಮುಖ ಸಿಂಡರಿಸಿಕೊಂಡರು.

ಇಡೀ ಮೈತ್ರಿ ಕೂಟದ ಎಲ್ಲಾ ಮುಖಂಡರು ಇದ್ದರೂ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರ ನೀಡಿದವರು 'ವಾಜಪೇಯಿಜೀ' ಮಾತ್ರ. ಪತ್ರಿಕಾ ಸಮ್ಮೇಳನವನ್ನು ನಿರ್ವಹಿಸಿಕೊಟ್ಟವರು ಜಸ್ವಂತ್ ಸಿಂಗ್ - ತನ್ನ ಮತದಾರರು ನಿರಾಕರಿಸಿದರೂ ಅಸಮರ್ಥ ಪ್ರಧಾನಿಯ ಸಮರ್ಥ ಸಹಾಯಕರು ಎಂದೆನಿಸಿ ಕೊಂಡವರು. ಅವರು ಮೈತ್ರಿಕೂಟದ ಇತರ ಮುಖಂಡರಿಗೆ ಪ್ರಶ್ನೆ ಕೇಳುವು ದನ್ನೂ ನಿರಾಕರಿಸಿದರು. ಮಮತಾ ಬ್ಯಾನರ್ಜಿಯಂತವರು ಉತ್ತರ ಕೊಡಲು ಕಾತುರರಾಗಿದ್ದರೂ ಜಸ್ವಂತ್ ಸಿಂಗ್ ಅದಕ್ಕೆ ಅವಕಾಶವನ್ನೇ ಕೊಡಲಿಲ್ಲ. ವಾಜಪೇಯಿಯವರು ತಡವರಿಸಿದಾಗ ಅವರ ನೆರವಿಗೆ ರಥಯಾತ್ರೆಯ ಅಡ್ವಾಣಿ ಹಾಗೂ ಜಸ್ವಂತ ಸಿಂಗ್ ಇದ್ದರು. 'ಸಮರ್ಥ' ಪ್ರಧಾನಿಯ ನೆರವಿಗೆಂದು ಒಂದೆರಡು ಟಿಪ್ಪಣಿಗಳನ್ನೂ ಜಸ್ವಂತ್ ಸಿಂಗ್ ಅಲ್ಲೇ ಬರೆದು ಪ್ರಧಾನಿಗೆ ಕೊಟ್ಟರು! ಬಹುಶಃ ಈ ಸರಕಾರ ಹೀಗೇ ನಡೆಯುತ್ತದೆ - ಒಂದೆಡೆ ಮಿತ್ರ ಪಕ್ಷಗಳ ಮುಖಂಡರ ವೈಯಕ್ತಿಕ ಸ್ವಾರ್ಥಗಳ ಮಸಾಜು ನಡೆಯುತ್ತಿರುತ್ತದೆ; ಇನ್ನೊಂದೆಡೆ 'ಸರ್ವಸಮ್ಮತಿ'ಯ ಮಂತ್ರ ಹೇಳುತ್ತಾ ವಿವಾದಾತ್ಮಕ ಪ್ರಶ್ನೆಗಳು ಬಂದಾಗ 'ಸಮಿತಿ'ಗಳನ್ನು ನೇಮಿಸುತ್ತಾ ಇರುತ್ತಾರೆ. ಈ ಸಮಿತಿಗಳಲ್ಲಿ ಸಿಬ್ಬಂದಿ ಹಾಗೂ ಅಂತಿಮ ನಿರ್ಣಯಗಳು ಬಿಜೆಪಿ ಮತ್ತು ಸರಕಾರದಲ್ಲಿರದ ಅದರ ಮಿತ್ರರಿಂದ (ಪರಿವಾರದವರು!) ಬರುತ್ತದೆ! ಇದು ಈ ಸಮಾರಂಭದಲ್ಲಿ ಯಾರಾದರೂ ಊಹಿಸಿ ಕೊಳ್ಳಬಹುದಾದ ಭವಿಷ್ಯದ ಚಿತ್ರ.

ವಾಜಪೇಯಿಯವರು 'ಸಮಯ ಬದ್ಧ' ಕಾರ್ಯಕ್ರಮಗಳ ಪಟ್ಟಿಯನ್ನೇ ಇಟ್ಟರೂ ಈ ಸಮಯದ ಚೌಕಟ್ಟಿನ ಬಗ್ಗೆ ನಿರ್ದಿಷ್ಟ ಪ್ರಶ್ನೆ ಕೇಳಿದಾಗ ಒಂದೇ ಒಂದು ಕಾರ್ಯಕ್ರಮವನ್ನಾದರೂ ಒಂದು ನಿರ್ದಿಷ್ಟ ಸಮಯಮಿತಿಯೊಳಗೆ ಮಾಡುತ್ತೇವೆ ಎಂದು ಹೇಳಲು ಅವರಿಗಾಗಲಿಲ್ಲ. ಎಲ್ಲದಕ್ಕೂ ಒಂದೇ ಉತ್ತರ 'ಜಲ್ದಿ ಜಲ್ದಿ'(ಬೇಗ ಬೇಗನೇ).

ಕಾವೇರಿ ಪ್ರಶ್ನೆ ಎತ್ತಿದಾಗ ಜಸ್ವಂತ್ ಸಿಂಗ್ ಹಿಂದಿನಿಂದ ನೆರವಾದರು - ವಾಜಪೇಯಿ ಅಜೆಂಡಾದ ೫ನೇ ಪರಿಚ್ಛೇದವನ್ನು ಓದಿ ಹೇಳಿದರಷ್ಟೆ. 'ಪಶ್ಚಿಮ ಬಂಗಾಳ, ತಮಿಳುನಾಡಿಗೆ 'ವಿಶೇಷ ಪ್ಯಾಕೇಜು'ಗಳ ಬಗ್ಗೆ ಕೇಳಿದಾಗ ಗೊಣಗಿದ ವಾಜಪೇಯಿ ಅದನ್ನು ಈಗಲೇ ತೆರೆದಿಡುವುದಿಲ್ಲ ಎಂದರು. ತನ್ನ ಮಿತ್ರರನ್ನು ಸಂತುಷ್ಟ ಪಡಿಸಲು ಎಲ್ಲಾ ರೀತಿಯ ವಚನಗಳನ್ನು ಕೊಟ್ಟರೂ ಅವನ್ನು ಸಾರ್ವಜನಿಕವಾಗಿ ಹೇಳಲಾಗುತ್ತಿಲ್ಲ ಎಂದೇ ಇದರ ಅರ್ಥವಿರಬೇಕು.

ಭ್ರಷ್ಟಾಚಾರದ ಬಗ್ಗೆ ಕೇಳಿದಾಗಲೂ 'ಅಜೆಂಡಾ' ಓದಿದ ವಾಜಪೇಯಿ ಆರ್ಥಿಕ ಪ್ರಶ್ನೆಗಳ ಬಗ್ಗೆ ಕೇಳಿದಾಗ ನಿರ್ದಿಷ್ಟವಾಗಿ ಉತ್ತರಿಸಲು ಇನ್ನೂ ಸಮಯ ಬಂದಿಲ್ಲ ಎಂದು ತಪ್ಪಿಸಿಕೊಂಡರು. 'ಪರಮಾಣು ಅಸ್ತ್ರಗಳನ್ನು ಹೊಂದುವ ಆಯ್ಕೆ' ಯ ಬಗ್ಗೆ ವಿದೇಶಿ ಪತ್ರಕರ್ತರು ಕೇಳಿದ ಪ್ರಶ್ನೆಗೂ ಮೌನವೇ ಉತ್ತರ.

ಬಿಜೆಪಿ ಪ್ರಣಾಳಿಕೆಯ ಮೂರು ವಿವಾದಾತ್ಮಕ ಪ್ರಶ್ನೆಗಳನ್ನು (ರಾಮ ದೇವಸ್ಥಾನ, ೩೭೦ನೇ ಕಲಮು ಹಾಗೂ ಏಕರೂಪ ನಾಗರೀಕ ಸಂಹಿತೆ) 'ರಾಷ್ಟ್ರೀಯ ಅಜೆಂಡಾ' ದಲ್ಲಿ ಕೈ ಬಿಟ್ಟುದರ ಅರ್ಥ ಅವು ರಾಷ್ಟ್ರೀಯ ಹಿತಾಸಕ್ತಿಗಳಿಗೆ ಅನುಗುಣವಾಗಿಲ್ಲವೆಂದೇ ಎಂದು ಪತ್ರಕರ್ತರೊಬ್ಬರು ಕೇಳಿದಾಗ ಈ ಪ್ರಶ್ನೆಯು ನ್ಯಾಯಸಮ್ಮತವಲ್ಲ ಎಂದರು. ಏಕೆಂದರೆ ಒಂದು ಸಮ್ಮಿಶ್ರ ಸರಕಾರದಲ್ಲಿ ಬೇರೆ ಬೇರೆ ಪಕ್ಷಗಳು ತಂತಮ್ಮ ಪ್ರಣಾಳಿಕೆಗಳಿಗೆ ಅಂಟಿಕೊಂಡಿರಲು ಸಾಧ್ಯವಿಲ್ಲ' ವಂತೆ. ಕೊನೆಗೂ ಈ ಪ್ರಶ್ನೆಗೆ ಅವರು ಉತ್ತರ ಕೊಡಲೇ ಇಲ್ಲ.

ಅಜೆಂಡಾದ ಕೊನೆಯ ಪುಟದಲ್ಲಿ ಹೀಗೆ ಹೇಳಿದೆ- 'ಬಹುಸಂಖ್ಯಾತರ ಬುದ್ದಿಗೇಡಿ ಪ್ರಾಬಲ್ಯದ ವಿಧಾನ ದಿಂದಾಗಿಯೇ ಕಟುತ್ವ, ವೈಷಮ್ಯ ಮತ್ತು ತಿಕ್ಕಾಟ ಉಂಟಾಗಿದೆ' ಇದರ ಅರ್ಥವೇನು ಎಂದು ಪತ್ರಕರ್ತರೊಬ್ಬರು ಕೇಳಿದಾಗ ವಾಜಪೇಯಿ ಚಡಪಡಿಸಿದರು. ಯಥಾಪ್ರಕಾರ ಅಡ್ವಾಣಿ ಮತ್ತು ಜಸ್ವಂತ್ ಸಿಂಗ್ ಅವರ ನೆರವಿಗೆ ಧಾವಿಸಿದರು. ಇಲ್ಲಿ 'ಮೆಜಾರಿಟಿ' ಎಂದರೆ ಶಾಸಕಾಂಗದಲ್ಲಿನ ಬಹುಮತ ಎಂದಷ್ಟೇ ಅರ್ಥ, ಬಹುಮತ ಪಡೆದ ಪಕ್ಷ ಸಣ್ಣ ಪಕ್ಷಗಳನ್ನು ಪ್ರತಿಪಕ್ಷಗಳನ್ನು ಬೆದರಿಸಿ ಕೂರಿಸಬಾರದು ಎಂದು ಅರ್ಥವಂತೆ. ಕಳೆದ ಒಂದು ದಶಕದಿಂದ ಅಲ್ಪಮತದ ಸರಕಾರಗಳನ್ನೇ ನೋಡಿರುವ ಭಾರತದ ಇಂದಿನ ಸ್ಥಿತಿಯಲ್ಲಿ ಈ ವಾಕ್ಯದ ಅಗತ್ಯವೇನಿತ್ತು ಎಂಬ ಪ್ರಶ್ನೆ ಸಹಜವಾಗಿಯೇ ಬರುತ್ತದೆ. ಆದರೆ ಬಹುಶಃ ಈ ದೇಶದ ವಾಸ್ತವತೆ ಈ ಅಜೆಂಡಾದಲ್ಲಿ ಆಕಸ್ಮಾತ್ತಾಗಿಯಾದರೂ ನುಸುಳಿಯೇ ಬಿಟ್ಟಿದೆ - ಆರ್.ಎಸ್. ಎಸ್.ನ 'ಮೆಜಾರಿಟಿ' ಎಂದರೆ ಬಹುಸಂಖ್ಯಾತ ಕೋಮು ಎಂದೇ ತಾನೆ? ಬಹುಸಂಖ್ಯಾತ ಪ್ರಾಬಲ್ಯವನ್ನು ಪ್ರತಿಪಾದಿಸುವ 'ಬುದ್ದಿಗೇಡಿ' ವಿಧಾನ ದಿಂದ ಈ ಭಾವನೆಗಳು, ವೈಷಮ್ಯಗಳು ಹಾಗೂ ತಿಕ್ಕಾಟಗಳು ಕಳೆದ ಒಂದು ದಶಕದಲ್ಲಿ ಭಾರತೀಯ ಸಮಾಜದಲ್ಲಿ ಹರಡಿದೆ ಎಂಬುದಂತೂ ನಿಜ ತಾನೆ?

(ಐಎನ್‌ಎನ್)

ದೇಶದೊಳಗೆ

ಪಂಚಾಯತ್ ಚುನಾವಣೆಗೆ ಬಂಗಾಳ ಸಜ್ಜು

ಪಶ್ಚಿಮಬಂಗಾಳದ ಗ್ರಾಮೀಣ ಸ್ವಯಮಾಡಳಿತದ ಮೂರು ಹಂತದ ಪಂಚಾಯತ್ ಸಂಸ್ಥೆಗಳ 71 ಸಾವಿರಕ್ಕೂ ಹೆಚ್ಚು ಸ್ಥಾನಗಳಿಗೆ ಇದೇ ಮೇ 31 ರಂದು ಚುನಾವಣೆ ನಡೆಯಲಿದೆ.

ಏಪ್ರಿಲ್ ಮಧ್ಯಭಾಗದಲ್ಲಿ ಪ್ರಕಟಣೆ ಹೊರಬೀಳಲಿದೆ. ಏಪ್ರಿಲ್ ಅಂತ್ಯದೊಳಗೆ ನಾಮಪತ್ರಗಳ ಪರಿಶೀಲನೆ ಕಾರ್ಯ ಮುಕ್ತಾಯವಾಗಲಿದೆ.

ಸ್ಥಾನಗಳ ಮೀಸಲಾತಿ ಈ ವರ್ಷದ ಪಂಚಾಯತ್ ಚುನಾವಣೆಯ ವಿಶೇಷ ಅಂಶವಾಗಲಿದೆ. ಪಂಚಾಯತ್ ಕಾನೂನಿನ 'ಎರಡನೇ ರೋಸ್ಟರ್' ಅನ್ವಯ ಮಹಿಳೆಯರು ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗಾಗಿ ಸ್ಥಾನಗಳನ್ನು ಮೀಸಲಿಡಲಾಗುತ್ತದೆ. ಪ್ರತಿ ಎರಡನೇ, ಐದನೇ, ಎಂಟನೇ ಹಾಗೂ ಹನ್ನೊಂದನೇ ಸ್ಥಾನ 'ಮೀಸಲು ಕ್ಷೇತ್ರ' ಆಗಿರುತ್ತದೆ.

ಇದು ಪಶ್ಚಿಮ ಬಂಗಾಳದಲ್ಲಿ ನಡೆಯಲಿರುವ ಐದನೇ ಪಂಚಾಯತ್ ಚುನಾವಣೆ. ನಾಲ್ಕನೇ ಚುನಾವಣೆ 1993 ರ ಮೇ ತಿಂಗಳಲ್ಲಿ ನಡೆದಿತ್ತು. ಆಗ 3.3 ಕೋಟಿ ಜನರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದ್ದರು.

3.5 ಕೋಟಿ ಮತದಾರರು

ಈ ಬಾರಿ 16 ಜಿಲ್ಲೆಗಳಲ್ಲಿ ಸುಮಾರು 3.5 ಕೋಟಿ ಜನರು ಪಂಚಾಯತ್ ಚುನಾವಣೆಗಳಲ್ಲಿ ಮತ ಚಲಾಯಿಸುವ ಹಕ್ಕನ್ನು ಪಡೆದಿದ್ದಾರೆ.

ಅಧಿಕಾರ ವಿಕೇಂದ್ರೀಕರಣದ ಪರಿಕಲ್ಪನೆಯನ್ನು ಯಶಸ್ವಿಯಾಗಿ ಜಾರಿಗೆ ತಂದು ಇಡೀ ದೇಶಕ್ಕೆ ಮಾದರಿಯಾಗಿರುವ ಪಶ್ಚಿಮ ಬಂಗಾಳದತ್ತ ಮತ್ತೊಮ್ಮೆ ದೇಶದ ಗಮನ ಹೋಗುತ್ತಿದೆ. ಈ ವಿಚಾರದಲ್ಲಿ 'ಮಹಾತ್ಮ ಗಾಂಧಿಯವರ ಪರಿಕಲ್ಪನೆಯನ್ನು ಸಾಕಾರಗೊಳಿಸಿದ ಮಾರ್ಕ್ಸ್‌ವಾದಿಗಳು' ಎಂಬ ಖ್ಯಾತಿಯೇ ಪಶ್ಚಿಮಬಂಗಾಳಕ್ಕಿದೆ.

ಈಚೆಗಷ್ಟೇ ಮುಕ್ತಾಯಗೊಂಡ ಲೋಕಸಭೆ ಚುನಾವಣೆಗಳಲ್ಲಿ ಎಡರಂಗ ತನ್ನ ಪ್ರಾಬಲ್ಯವನ್ನು ಎಂದಿನಂತೆ ಕಾಯ್ದುಕೊಂಡಿರುವ ಹಿನ್ನೆಲೆಯಲ್ಲಿ ಈ ಪಂಚಾಯತ್ ಚುನಾವಣೆಗೆ ಇನ್ನಷ್ಟು ಮಹತ್ವವಿದೆ.

ಬಹುತೇಕವಾಗಿ ಕಾಂಗ್ರೆಸ್‌ಗೆ ನಷ್ಟವುಂಟು ಮಾಡಿ ಲೋಕಸಭೆ ಚುನಾವಣೆಯಲ್ಲಿ ಏಳು ಸ್ಥಾನಗಳನ್ನು ಗೆದ್ದ ತೃಣಮೂಲ ಕಾಂಗ್ರೆಸ್(ಟಿಎಂಸಿ)ನೊಂದಿಗೆ ಸೇರಿಕೊಂಡು ಪಂಚಾಯತ್ ಚುನಾವಣೆಯಲ್ಲಿ ಎಡರಂಗದ ವಿರುದ್ಧ ಸೆಣಸುವುದಾಗಿ ಬಿಜೆಪಿ ಘೋಷಿಸಿದೆ. ಬಿಜೆಪಿ ಕೂಡ ಲೋಕಸಭೆಯಲ್ಲಿ ಒಂದು ಸ್ಥಾನಗಳಿಸಿದೆ.

ಆದರೆ, ಬಿಜೆಪಿ ಜತೆಗೆ ಲೋಕಸಭೆ ಚುನಾವಣೆಗಾಗಿ ಮಾಡಿಕೊಂಡ ಹೊಂದಾಣಿಕೆಯೇ ಅಂತಿಮವಾದುದಲ್ಲ ಎಂದು ಟಿಎಂಸಿ ಹೇಳಿದೆ. ತನ್ನ ಅವಕಾಶ ಮುಕ್ತವಾಗಿದೆ ಎಂದಿರುವ ಅದು ಏಕಾಂಗಿಯಾಗಿ ಹೋರಾಡುವ ಆಲೋಚನೆ ಮಾಡುತ್ತಿದೆ. ಇದು ಬಿಜೆಪಿಯ ಉತ್ಸಾಹಕ್ಕೆ ತಣ್ಣೀರೆರಚಿದೆ.

ತೃಣಮೂಲ ಕಾಂಗ್ರೆಸ್ ಗೂಂಡಾಗಿರಿ

ಕಲ್ಕತ್ತಾದ ಬಸ್ತಿ ಪ್ರದೇಶಗಳ ಮೇಲೆ ತೃಣಮೂಲ ಕಾಂಗ್ರೆಸ್ಸಿನ ಕಾರ್ಯಕರ್ತರು ಮಾರ್ಚ್ 5 ರಿಂದ 7 ರವರೆಗೆ ಯೋಜಿತ ಆಕ್ರಮಣ ನಡೆಸಿದರು. ಲೂಟಿ, ದೊಂಬಿ ನಡೆಸಿದ್ದಲ್ಲದೆ ಬಸ್ತಿ ಸಮಿತಿಗಳ ಪ್ರಮುಖ ಮುಖಂಡರನ್ನು ಕೊಲ್ಲಲೂ ಅವರು ಪ್ರಯತ್ನಿಸಿದರು.

ಹರಿತವಾದ ಆಯುಧಗಳಿಂದ ಸನ್ನದ್ಧರಾಗಿದ್ದ ಟಿಎಂಸಿ ದುಷ್ಕರ್ಮಿಗಳು ದಕ್ಷಿಣ ಕಲ್ಕತ್ತದ ಬಗ್ದಿಪಾರ ಬಸ್ತಿ ಮೇಲೆ ಧಾಳಿ ಮಾಡಿದರು. ಈಚೆಗಷ್ಟೇ ಜಾಮೀನಿನ ಮೇಲೆ ಬಿಡುಗಡೆ ಹೊಂದಿದ್ದ ಕುಖ್ಯಾತ ಕ್ರಿಮಿನಲ್‌ಗಳಾದ ದಿಲು ಮತ್ತು ಕಚಿ ಈ ಧಾಳಿಯ ನೇತೃತ್ವ ವಹಿಸಿದ್ದರು.

ಬಸ್ತಿಯಲ್ಲಿ ವ್ಯವಸ್ಥಿತವಾಗಿ ಲೂಟಿಗೈದ ದುಷ್ಕರ್ಮಿಗಳು ಅನೇಕ ಗುಡಿಸಲುಗಳಿಗೆ ಬೆಂಕಿ ಹಾಕಿದರು. ಈ ಹೇಯ ಗೂಂಡಾಗಿರಿಯ ನಡುವೆಯೇ ಗೊಂದಲದಿಂದಾಗಿ ಅವರು ತಮ್ಮದೇ ಪಕ್ಷದ 20 ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿ ಗಾಯಗೊಳಿಸಿದರು.

ಬಸ್ತಿಯ ಜನರು ಒಟ್ಟಾಗಿ ಪ್ರತಿರೋಧಿಸತೊಡಗಿದಾಗ ದಾಳಿಕೋರರು ಕಾಲಿಗೆ ಬುದ್ಧಿ ಹೇಳಿದರು.

ಇದೇ ಗೂಂಡಾಗಳು ಒಂದು ವರ್ಷದ ಹಿಂದೆ ಇದೇ ಬಸ್ತಿಯಲ್ಲಿ ಪತ್ರಿಕೆ ಮಾರಾಟ ಮಾಡುವ, ಸಿಐಟಿಯು ಕಾರ್ಯಕರ್ತ ಕಾಮ್ರೇಡ್ ಚಾಂದಿ ಸೇನ್ ಅವರನ್ನು ಕೊಂದು ಹಾಕಿದ್ದರೆನ್ನುವುದನ್ನು ಇಲ್ಲಿ ಸ್ಮರಿಸಬಹುದು.

ಬಾಂಬ್ ಧಾಳಿ

ಉತ್ತರ ಕಲ್ಕತ್ತಾದ ಕಂಕುರ್‌ಗಟ್ಟಿ, ಕಂಕಾಡಿಘಿ, ಮಥುರಾಪುರ ಮತ್ತು ದಕ್ಷಿಣ 24 ಪರಗಣ ಜಿಲ್ಲೆಯ ಸಿಬ್‌ರ್‌ಬಾಲಿ ಮೊದಲಾದ ಕಡೆಯೂ ತೃಣಮೂಲ ಕಾಂಗ್ರೆಸ್ಸಿನವರು ಗೂಂಡಾಗಿರಿ ನಡೆಸಿದ್ದಾರೆ.

ಮಥುರಾದಲ್ಲಿ ಸಿಪಿಐ(ಎಂ) ಬೆಂಬಲಿಗ ಪಂಚನ ಸಮಂತಾ ಅವರನ್ನು ಹೊಡೆದು ಅವರ ಮನೆಗೆ ಕೊಳ್ಳಿಯಿಡಲಾಯಿತು.

ಸಿಬರಬಾಲಿಯಲ್ಲಿ ಟಿಎಂಸಿ ದುರುಳರು ಎಸೆದ ಬಾಂಬ್‌ನಿಂದಾಗಿ ಸಿಪಿಐ(ಎಂ) ಕಾರ್ಯಕರ್ತ ಕಾಲಿಪುರ ಗೈನ್ ಗಾಯಗೊಂಡರು. ದಕ್ಷಿಣ 24ಪರಗಣ ಜಿಲ್ಲೆಯ ಮೊಂಡಲ್‌ಪುರ ಎಂಬಲ್ಲಿ ಮಧ್ಯರಾತ್ರಿ ಆಕ್ರಮಣ ಮಾಡಿದ ಟಿಎಂಸಿ ಗೂಂಡಾಗಳು ಸುಮಾರು ಎರಡು ಡಜನ್ ಗುಡಿಸಲುಗಳನ್ನು ಸುಟ್ಟುಹಾಕಿದರು. ಈ ಪ್ರಕರಣದಲ್ಲಿ ಅನೇಕನಿವಾಸಿಗಳಿಗೆಸುಟ್ಟ ಗಾಯಗಳಾದವು.

ಭಯೋತ್ಪಾದನೆ ವಿರೋಧಿ ಮೆರವಣಿಗೆ

ಅಸ್ಸಾಂನಲ್ಲಿ ಹೆಚ್ಚುತ್ತಿರುವ ಭಯೋತ್ಪಾದನೆ ಹಾಗೂ ಉಗ್ರಗಾಮಿ ಚಟುವಟಿಕೆಗಳನ್ನು ವಿರೋಧಿಸಿ ರಾಜಧಾನಿ ಗುವಾಹಟಿಯಲ್ಲಿ ಮಾರ್ಚ್ 9 ರಂದು ಬೃಹತ್ ಮೆರವಣಿಗೆಯೊಂದು ನಡೆಯಿತು. ಸಿಪಿಐ(ಎಂ), ಸಿಪಿಐ, ಎಜಿಪಿ ಮತ್ತು ಯುಪಿಪಿಎ ನೀಡಿದ ಕರೆಗೆ ಸ್ಪಂದಿಸಿ ಸಾವಿರಾರು ಜನರು ಇದರಲ್ಲಿ ಪಾಲ್ಗೊಂಡಿದ್ದರು.

ಫೆಬ್ರವರಿಯಲ್ಲಿ ನಡೆದ ಲೋಕಸಭೆ ಚುನಾವಣೆಯನ್ನು ಅಸ್ತವ್ಯಸ್ತಗೊಳಿಸಲು ಉಲ್ಫಾ ಮತ್ತು ಎನ್‌ಡಿಎಫ್‌ಬಿ ಸಂಘಟನೆಗಳು ಹತಾಶರಾಗಿ ಹಿಂಸಾತ್ಮಕ ಚಟುವಟಿಕೆಗಳನ್ನು ತೀವ್ರಗೊಳಿಸಿದ್ದವು. ಚುನಾವಣೆ ಬಹಿಷ್ಕಾರಕ್ಕೆ ಕರೆಕೊಟ್ಟಿದ್ದ ಅವು ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರು ಕೆಟ್ಟ ಪರಿಣಾಮ ಎದುರಿಸಬೇಕಾಗುತ್ತದೆಂದು ಬೆದರಿಕೆಯನ್ನು ಹಾಕಿದ್ದವು. ಆದರೆ ಉಗ್ರಗಾಮಿಗಳ ಬೆದರಿಕೆಯನ್ನು ಜನರು ಕಡೆಗಣಿಸಿದ್ದರು. ಶೇಕಡ 50 ರಷ್ಟು ಮತದಾರರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದ್ದರು.

ಮಾ. 9 ರಂದು ಗುವಾಹಟಿಯ ಬೀದಿಗಿಳಿದ ಸುಮಾರು ಒಂದು ಸಾವಿರ ಕಾರ್ಯಕರ್ತರು ಹಿಂಸಾಚಾರದ ಕೃತ್ಯಗಳನ್ನು ಖಂಡಿಸಿ ಘೋಷಣೆಗಳನ್ನು ಕೂಗಿದರು. ಇದಕ್ಕೆ ಮುನ್ನ ಪಕ್ಷದ ಜಿಲ್ಲಾ ಸಮಿತಿ ಕಚೇರಿ ಮುಂದೆ ನೆರೆದ ಸಿಪಿಐ(ಎಂ) ಸ್ವಯಂ ಸೇವಕರು ಅಸ್ಸಾಂ ಗಣಪರಿಷತ್(ಎಜಿಪಿ) ಕೇಂದ್ರ ಕಚೇರಿಯತ್ತ ತೆರಳಿದರು. ಅಲ್ಲಿ ಇತರ ಪಕ್ಷಗಳ ಕಾರ್ಯಕರ್ತರು ಜೊತೆಗೂಡಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ಬ್ಯಾನರ್, ಭಿತ್ತಿಪತ್ರಗಳನ್ನು ಹಿಡಿದಿದ್ದ ಕಾರ್ಯಕರ್ತರು ಉಗ್ರಗಾಮಿಗಳು ನಡೆಸುವ ಕೊಲೆ, ಅಪಹರಣ ಕೃತ್ಯಗಳು ಕೊನೆಯಾಗಲಿ ಎಂದು ಆಗ್ರಹಿಸಿದರು. ಶಾಂತಿಯುತ ರಾಜಕೀಯ ಚರ್ಚೆಯ ಮೂಲಕ ಸಮಸ್ಯೆಯನ್ನು ಇತ್ಯರ್ಥಗೊಳಿಸುವಂತೆ ಒತ್ತಾಯಿಸಿದರು.

ಕೇಂದ್ರ-ರಾಜ್ಯ ಸಂಬಂಧಗಳನ್ನು ಪುನರ್‌ರಚಿಸಬೇಕು ಹಾಗೂ ಅಸ್ಸಾಂನ ಹಿಂದುಳಿದ ರಾಜ್ಯಗಳ ಶೀಘ್ರ ಅಭಿವೃದ್ಧಿಗಾಗಿ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕು ಎಂದು ಮೆರವಣಿಗೆಕಾರರು ಒತ್ತಾಯಿಸಿದರು.

ಸಿಪಿಐ(ಎಂ) ನಾಯಕರಾದ ಅನಂತ ದೇತಾ, ಪೂರ್ಣ ಬೋರೊ, ಸಮೀರ್ ದಾಸ್, ಇಕಾಕುರ್ ರಹಮಾನ್, ಎಜಿಪಿ ಉಪಾಧ್ಯಕ್ಷ ದುರ್ಗಾ ದಾಸ್ ಬೋರೋ, ಎಜಿಪಿ ಪ್ರಧಾನ ಕಾರ್ಯದರ್ಶಿ ನಾಗೇನ್ ಶರ್ಮ, ಅಸ್ಸಾಂ ಮೇಯರ್ ಸೋನೋಧರ್ ದಾಸ್ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಪ್ರಮುಖ ಮುಖಂಡರು.

ಸಿಐಟಿಯು ರಾಜ್ಯಕಾರ್ಯದರ್ಶಿ ದೇತೀನ್ ಭಟ್ಟಾಚಾರ್ಯ, ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಸುಪ್ರಕಾಶ ತಾಲೂಕ್‌ದಾರ್, ಅಧ್ಯಕ್ಷ ನಯನ್ ಭೂಯಾನ್, ಜನವಾದಿ ಮಹಿಳಾ ಸಂಘಟನೆ ರಾಜ್ಯ ಕಾರ್ಯದರ್ಶಿ ರೆಝಿನಾ ಖಾತೂನ್ ಮೊದಲಾದವರೂ ಭಯೋತ್ಪಾದನೆ ವಿರೋಧಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವರಲ್ಲಿ ಸೇರಿದ್ದರು.

ಹೋರಾಟಕ್ಕೆ ಸಿಕ್ಕ ವಿಜಯ: 'ಕ್ವಿನಾಕ್ರಿನ್' ಮಾತ್ರೆ ನಿಷೇಧ

ಮಹಿಳೆಯರ ಸಂತಾನೋತ್ಪತ್ತಿ ಶಕ್ತಿಯನ್ನು ನಾಶಮಾಡಲು ದುರ್ಬಳಕೆಯಾಗುತ್ತಿದ್ದ 'ಕ್ವಿನಾಕ್ರಿನ್' ಮಾತ್ರೆಯನ್ನು ಭಾರತ ಸರ್ಕಾರ ನಿಷೇಧಿಸಿದೆ.


ಈ ವಿವಾದಾತ್ಮಕ ಗರ್ಭ ನಿರೋಧಕ ಮಾತ್ರೆ ಬಳಕೆಯ ವಿರುದ್ಧ ದೇಶಾದ್ಯಂತ ಮಹಿಳಾ ಸಂಘಟನೆಗಳು, ವಿಶೇಷವಾಗಿ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ (AIDWA) ನೇತೃತ್ವದಲ್ಲಿ ಹೋರಾಟ ನಡೆಸಿದ್ದವು.

ಮಹಿಳಾ ವಿರೋಧಿ, ಜೀವ ವಿರೋಧಿಯಾದ ಈ ಮಾತ್ರೆ ಬಳಕೆಯನ್ನು ನಿಷೇಧಿಸಲು ಸರಕಾರ ನಿರ್ಧರಿಸಿರುವುದು ಹೋರಾಟಕ್ಕೆ ಸಂದ ಜಯ ಎಂದು AIDWA ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್ ಹೇಳಿದ್ದಾರೆ.

ಕ್ವಿನಾಕ್ರಿನ್ ಮಾತ್ರೆ ಬಳಕೆ ನಿಷೇಧಕ್ಕೆ ಸಂಬಂಧಿಸಿ ಭಾರತದ ಔಷಧಗಳ ನಿಯಂತ್ರಕರು ಮಾರ್ಚ್ 16 ರಂದು ಸುಪ್ರೀಂ ಕೋರ್ಟಿಗೆ ಲಿಖಿತ ಆಶ್ವಾಸನೆ ನೀಡಿದರು.

ಬಳಕೆಯ ನಿಷೇಧದ ನಂತರವೂ ಮಹಿಳಾ ಸಂತಾನಶಕ್ತಿ ಹರಣಕ್ಕಾಗಿ ಈ ಮಾತ್ರೆಯನ್ನು ಬಳಸುವವರನ್ನು ಶಿಕ್ಷೆಗೆ ಒಳಪಡಿಸಲಾಗುತ್ತದೆ ಎಂದು ಔಷಧಗಳ ನಿಯಂತ್ರಕರು ಸರ್ವೋನ್ನತ ನ್ಯಾಯಾಲಯಕ್ಕೆ ತಿಳಿಸಿದ್ದಾರೆ ಎಂದು ಬೃಂದಾ ಕಾರಟ್ ಮಾರ್ಚ್ 17 ರಂದು ದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಈ ಸಂಬಂಧ್ದ ಅಧಿಕೃತ ಗೆಜೆಟ್ ಪ್ರಕಟಣೆ ಸದ್ಯದಲ್ಲೇ ಹೊರಬೀಳಲಿದೆ ಎಂದು ಬೃಂದಾ ತಿಳಿಸಿದರು.



ತ್ರಿಪುರಾದ ಹೊಸಮುಖ್ಯಮಂತ್ರಿ ಮಾಣಿಕ್ ಸರ್ಕಾರ್

ತ್ರಿಪುರಾ ವಿಧಾನಸಭೆಯ ಚುನಾವಣೆಗಳ ಅಂತಿಮ ಫಲಿತಾಂಶ ಹೀಗಿದೆ.

ಎಡರಂಗ	**41**
ಸಿಪಿಐ(ಎಂ)	38
ಆರ್.ಎಸ್.ಪಿ.	2
ಸಿಪಿಐ	1
ಕಾಂಗ್ರೆಸ್(ಐ)ಮೈತ್ರಿಕೂಟ	**18**
ಕಾಂಗ್ರೆಸ್(ಐ)	13
ಟಿಯುಜೆಎಸ್	4
ಟಿಎನ್‌ವಿ	1
ಪಕ್ಷೇತರ	
ಭಿನ್ನಮತೀಯ ಕಾಂಗ್ರೆಸ್ಸಿಗ	1
ಒಟ್ಟು	**60**

ಎರಡು ಲೋಕಸಭಾ ಚುನಾವಣೆಗಳ ಸ್ಥಾನಗಳಲ್ಲಿನ ವಿವರ ಹೀಗಿದೆ

ತ್ರಿಪುರಾ ಪಶ್ಚಿಮ	
ಒಟ್ಟು ಮತಗಳು	904977
ಮತದಾನ	745574
ಕುಲಗೆಟ್ಟ ಮತಗಳು	12766
ಸಿಪಿಐ(ಎಂ)	347970
ಕಾಂಗ್ರೆಸ್(ಐ)	329094
ಬಿಜೆಪಿ	50391
ಆಮ್ರ ಬಂಗಾಲಿ	1873
ಇತರರು	3480
ತ್ರಿಪುರಾ ಪೂರ್ವ(ಎಸ್‌ಟಿ ಮೀಸಲು)	
ಒಟ್ಟು ಮತಗಳು	822682
ಮತದಾನ	631186
ಕುಲಗೆಟ್ಟ ಮತಗಳು	13529
ಸಿಪಿಐ(ಎಂ)	320766
ಟಿಯುಜೆಎಸ್	248080
ಬಿಜೆಪಿ	61840
ಇತರರು	6971

ಬೀದರ್ ರೈತರು ಆತ್ಮಹತ್ಯೆಗೇಕೆ ಇಳಿದಿದ್ದಾರೆ?

ಪುಟ 3 ರಿಂದ

ಬೀಜ ರಸಾಯನಿಕ ಗೊಬ್ಬರ ಕ್ರಿಮಿನಾಶಕ ಔಷದಿಗಳು ದೋಷದಿಂದ ಕೂಡಿದ್ದು ಪ್ರಮುಖ ಕಾರಣವಾಗಿದೆ. ಬಿತ್ತನೆ ಬೀಜ ಪಡೆದ ಕಂಪನಿಯಿಂದಲೇ ಗೊಬ್ಬರ ಔಷದಿಯನ್ನು ಖರೀದಿಸಬೇಕು ಎಂಬ ಷರತ್ತು ರೈತರ ಪಾಲಿಗೆ ಕುತ್ತಾಯಿತು. ಅವರು ಹೇಳುವ ರೀತಿಯಲ್ಲಿ ಅವರು ಹೇಳುವ ಕಂಪನಿಯಲ್ಲಿ ಔಷದಿ ಖರೀದಿಸಿ 5-6 ಬಾರಿ ಸಿಂಪಡಿಸಿದರೂ ಕ್ರಿಮಿಗಳು ನಾಶವಾಗಿಲ್ಲ. ಬೀದರ್ ಜಿಲ್ಲೆಯಲ್ಲಿ 3 ತಿಂಗಳಲ್ಲಿ 225-250 ಕೋಟಿ ರೂ. ಔಷದಿ ಮಾರಾಟವಾಗಿದೆ ಯೆಂದರೆ ರೈತರ ಸಾಲದ ಮಟ್ಟವನ್ನು ಅಳೆಯಬಹುದಾಗಿದೆ ಇದರ ಜೊತೆಗೆ 17 ನಕಲಿ ಕಂಪನಿಗಳು ಕೂಡ ಔಷದಿ ಮಾರಾಟ ಮಾಡಿವೆ. ಬಹು ರಾಷ್ಟ್ರೀಯ ಕಂಪನಿಗಳ ಸ್ವಾಗತ ಕಮಾನು ಮಹಾರಾಷ್ಟ್ರದಿಂದಲೇ. ರೈತರು ಬೀಜ, ಗೊಬ್ಬರ, ಔಷದಿ ಖರೀದಿಸಿರುವುದು ಅಲ್ಲಿಂದಲೇ ಎನ್ನುವುದು ಇಲ್ಲಿ ಗಮನಾರ್ಹವಾಗಿದೆ.

ಬಾಗೇಪಲ್ಲಿಯಿಂದ ಬೀದರ್‌ಗೆ:

ಬೀದರ್‌ನಲ್ಲಿ ವಾರಕ್ಕೆ ಒಬ್ಬಿಬ್ಬ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೆ, ಇತ್ತ ಬೆಂಗಳೂರಿನಲ್ಲಿ ರಾಜ್ಯ ಸರ್ಕಾರದ ಮಂತ್ರಿಗಳು ಜಿಲ್ಲಾ ಜನ ಪ್ರತಿನಿಧಿಗಳು ಆತ್ತಗಮನ ಹರಿಸದೆ ಚುನಾವಣೆಯಲ್ಲಿ ತಮ್ಮ ತಮ್ಮ ಪಕ್ಷದ ಗೆಲುವಿನ ಬಗ್ಗೆ ತಂತ್ರ ಕುತಂತ್ರಗಳಲ್ಲಿ ತೊಡಗಿದ್ದು ರೈತರನ್ನು ಮತ್ತಷ್ಟು ಹತಾಶೆಯ ಅಂಚಿಗೆ ಕೊಂಡೊಯ್ಯತು. ಇಲ್ಲಿಯವರೆಗೆ ಯಾವುದೇ ಮಂತ್ರಿ, ಶಾಸಕರು ಆ ಹಳ್ಳಿಗಳಿಗೆ ಭೇಟಿ ನೀಡಿಲ್ಲ.

ಹುಲಸೂರು ವಿಧಾನ ಸಭಾ ಕ್ಷೇತ್ರದಲ್ಲೇ 4 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಲ್ಲಿಯ ಶಾಸಕ ಎಲ್.ಕೆ.ಚೌಹಾಣ್ ದೇಶದಲ್ಲಿ ರಾಮ ರಾಜ್ಯಸ್ಥಾಪನೆಯ ಗುತ್ತಿಗೆ ಪಡೆದ ಬಿಜೆಪಿ ಪಕ್ಷದವರು. ಅವರು ಇನ್ನೂ ಬೀದರ್ ಕಡೆ ಮುಖ ಮಾಡಿಲ್ಲ. 5 ಬಾರಿ ಜಾತಿ ಆಧಾರದಲ್ಲಿ ಮತ ಪಡೆದು ಎಂ.ಪಿ. ಯಾಗಿರುವ ರಾಮಚಂದ್ರಪ್ಪ ನವರು ದೆಹಲಿಯ ಅಧಿಕಾರ ರುಚಿ ಉಣ್ಣಲು ದೆಹಲಿದ್ವಾರ ಕಾಯುತ್ತಿದ್ದಾರೆ. ನಾಗಮಾರಪಲ್ಲಿಯವರು ಹೆಗಡೆ ಪರ ಸ್ವಾಮಿನಿಷ್ಠೆ ಪ್ರದರ್ಶಿಸಲು ಬೆಂಗಳೂರಿನಲ್ಲಿ ಬಿಡಾರ ಹೂಡಿದ್ದಾರೆ. ಇನ್ನುಳಿದವರು ರೈತರ ಗೋಳು ಸಾರ್ವಜನಿಕ ಸ್ವತ್ತು ಎಂಬಂತೆ ವರ್ತಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸಿಪಿಐ(ಎಂ)ನ ಬಾಗೇಪಲ್ಲಿ ಶಾಸಕರಾದ ಶ್ರೀರಾಮರೆಡ್ಡಿ ಮತ್ತು ತಂಡದವರು ಹಳ್ಳಿಗಳಿಗೆ ಭೇಟಿ ನೀಡಿದಾಗ ನಮ್ಮ ಜನ ಇನ್ನೂ ಬಂದಿಲ್ಲ, ದೂರದ ಬಾಗೇಪಲ್ಲಿ ಯಿಂದ ಬೀದರ್‌ಗೆ ಬಂದಿದ್ದೀರಿ, ನಮ್ಮ ಕಷ್ಟ ಕೇಳುತಿದ್ದೀರಿ ನಿಮಗೆ ಕೃತಜ್ಞತೆ ಎಂದಷ್ಟೇ ಹೇಳಲು ರೈತರು ಶಕ್ತರಿದ್ದರು.

ರೈತರನ್ನು ಕೀಟವಾಗಿ ಕೊರೆಯುತ್ತಿರುವ ಬಿತ್ತನೆ ಬೀಜ, ಗೊಬ್ಬರದ ಜೊತೆಗೆ ಖಾಸಗಿಯವರಿಂದ ಪಡೆದಿರುವ ಸಾಲವೇ ಅವರ ಕೊರಳಿಗೆ ಉರುಳಾಗಿದೆ. ಗುಲ್ಬರ್ಗಾ ಬೀದರ್‌ನಲ್ಲಿ ಬೆಳೆಯುವ ತೊಗರಿ ಬೆಳೆಗೆ ರಾಷ್ಟ್ರಮಟ್ಟದಲ್ಲಿ ತುಂಬಾ ಬೇಡಿಕೆ ಇದೆ. ಲಾಭದ ಕೃಷಿಯಿಂದ ಬೀದರ್ ಗುಲ್ಬರ್ಗದಲ್ಲಿ ಖಾಸಗಿ ದಾಲ್‌ಮಿಲ್ ಸ್ಥಾಪನೆ ಮಾಡಿ ರೈತರು ಬೆಳೆದ ಕೆ.ಜಿ. ತೊಗರಿಗೆ 9-10 ರೂ. ನೀಡಿ ಖರೀದಿಸಿ 25 ರಿಂದ 30 ರೂಗಳಿಗೆ ಮಾರಾಟ ಮಾಡಿ ಮಧ್ಯವರ್ತಿಗಳು ಬಂಪರ್ ಲಾಭ ಪಡೆದರೆ, ರೈತರು ಖಾಸಗಿಯವರ ಸಾಲಕ್ಕೆ ತಲೆ ಕತ್ತರಿಸಿಕೊಳ್ಳುವತ್ತ ಸಾಗಿದ್ದಾರೆ. ಸರ್ಕಾರವಾಗಲಿ, ಬ್ಯಾಂಕುಗಳಾಗಲೀ ಮಧ್ಯ ಪ್ರವೇಶಿಸದೆ ಸಣ್ಣ ಮತ್ತು ಮಧ್ಯಮ ರೈತರು ಕಂಗೆಟ್ಟಿದ್ದಾರೆ.

ಬೀದರನಲ್ಲಿ 1972 ರಲ್ಲಿ ಪ್ರಾರಂಭವಾದ ಕಾರಂಜ ಯೋಜನೆ 1984 ರಲ್ಲಿ ಪೂರ್ಣಗೊಂಡು ಡ್ಯಾಂ ನಿರ್ಮಾಣ ಗೊಂಡಿದೆ ಆದರೆ ನಾಲೆ ತೋಡುವ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಇದು ರಾಜ್ಯ ಸರ್ಕಾರಗಳಿಗೆ ಜನಪರವಾದ, ರೈತ ಪರವಾದ ಕಾಳಜಿ ಎಷ್ಟಿದೆ ಎಂಬುದಕ್ಕೆ ಇದೇ ಸಾಕ್ಷಿ ಎನ್ನುತ್ತಾರೆ ಶ್ರೀರಾಮರೆಡ್ಡಿ. ಇಲ್ಲಿನ ರೈತರು ಮಳೆಯನ್ನು ಅವಲಂಬಿಸಿ ಬೇಸಾಯ ಮಾಡುತ್ತಾರೆ. ಮಳೆ ಬೀಳದಿದ್ದರೆ ಬದುಕು ದುಬಾರಿಯಾಗಿ ಆತ್ಮಹತ್ಯೆಯೇ ಪರಿಹಾರ ಎನ್ನುವಂತಾಗಿದೆ.

ಬೇಡಿಕೆಗಳು

ರೈತರು ಆತ್ಮಹತ್ಯೆ ಮಾಡಿಕೊಂಡ ಪ್ರದೇಶಗಳಲ್ಲಿ ಭೇಟಿ ನೀಡಿದ ಸಿಪಿಐ(ಎಂ)ನ ಸತ್ಯ ಶೋಧನ ತಂಡ ಹೊಸ ಕೃಷಿ ನೀತಿಯನ್ನು ಕೂಡಲೇ ಕೈಬಿಡಬೇಕು, ಸತ್ತ ಕುಟುಂಬದವರಿಗೆ ಒಂದು ಲಕ್ಷ ರೂಪಾಯಿ ಪರಿಹಾರ ನೀಡಬೇಕು, ಒಂದು ಎಕರೆಗೆ 3 ಸಾವಿರ ರೂ. ಬೆಳೆ ಪರಿಹಾರ ನೀಡಬೇಕು, ಔಷಧಿ, ಬಿತ್ತನೆ ಬೀಜ, ಗೊಬ್ಬರ ಮಾರಾಟ ಮಾಡಿದ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು, ಬ್ಯಾಂಕ್ ಸಾಲ ಮನ್ನಾ ಮಾಡಬೇಕು, ಸಾಲ ವಸೂಲಿಯನ್ನು ಜೂನ್‌ನಿಂದ ಡಿಸೆಂಬರ್ ವರೆಗೆ ಮುಂದೂಡಬೇಕು, ಜಿಲ್ಲಾಧಿಕಾರಿಯನ್ನು ಕೂಡಲೇ ಅಮಾನತ್ತುಗೊಳಿಸಬೇಕು ಎಂದು ಒತ್ತಾಯಿಸಿದೆ. ಮಾರ್ಚ್ 24 ರಂದು ಗುಲ್ಬರ್ಗ ವಿಭಾಗಾಧಿಕಾರಿ ಕಛೇರಿ ಮುಂದೆ ಪ್ರಾಂತ ರೈತ ಸಂಘ ಹಾಗೂ ಸಿಪಿಐ(ಎಂ) ನೇತೃತ್ವದಲ್ಲಿ ಒಂದು ಬೃಹತ್ ಪ್ರತಿಭಟನೆ ನಡೆಸಲಾಗುವುದೆಂದು ಶ್ರೀರಾಮರೆಡ್ಡಿ ಹಾಗೂ ಮಾರುತಿಮಾನ್ಪಡೆ ತಿಳಿಸಿದ್ದಾರೆ.

ಬೀದರ್ ಜಿಲ್ಲೆಯಲ್ಲಿ ಸಂಚರಿಸಿ, ರೈತರ ದುಖಃ ದುಮ್ಮಾನಗಳನ್ನು ಹತ್ತಿರದಿಂದ ನೋಡಿರುವ ತಂಡ ರೈತರು ಹತಾಶೆಯಿಂದ ಆತ್ಮಹತ್ಯೆ ಚಳುವಳಿಯಿಂದ ಹೊರಬಂದು ಒಂದು ದಿಟ್ಟ ಧೀರೋದಾತ್ತ ಹೋರಾಟದ ಮೂಲಕ ತಮ್ಮ ಸಂಕಷ್ಟಗಳನ್ನು ಪರಿಹರಿಸಿಕೊಳ್ಳಬೇಕು ಹಾಗೂ ಸಿಪಿಐ(ಎಂ) ಸದಾ ಇದರಲ್ಲಿ ಜೊತೆಗಿರುತ್ತದೆ ಎಂಬ ಭರವಸೆಯನ್ನು ರೈತರಿಗೆ ನೀಡಿದೆ.

ಜಿಯಾಂಗ್ ಜೆಮಿನ್ ಚೀಣೀ ಅಧ್ಯಕ್ಷರಾಗಿ ಪುನರಾಯ್ಕೆ: ಝು ರೋಂಗ್ಜಿ ಹೊಸ ಪ್ರಧಾನಿ

ಚೀಣಾ ಜನತಾ ಗಣತಂತ್ರದ ಸಂಸತ್ತು ರಾಷ್ಟ್ರೀಯ ಜನತಾ ಸಮ್ಮೇಳನದ 9ನೇ ಅಧಿವೇಶನ ಆರಂಭವಾಗಿದ್ದು ಅಧ್ಯಕ್ಷ ಜಿಯಾಂಗ್ ಜೆಮಿನ್ ಗಣತಂತ್ರದ ಅಧ್ಯಕ್ಷರಾಗಿ ಪುನರಾಯ್ಕೆಗೊಂಡಿದ್ದಾರೆ.



ಚೀಣಾದ ಪ್ರಧಾನ ಮಂತ್ರಿಯಾಗಿ ಆಯ್ಕೆಯಾದ ಝುರೊಂಗ್ಜಿ ತನ್ನನ್ನು ಆರಿಸಿದ ರಾಷ್ಟ್ರೀಯ ಜನತಾ ಸಭೆಯ ಸದಸ್ಯರಿಗೆ ವಂದಿಸುತ್ತಿದ್ದಾರೆ. ಪಕ್ಕದಲ್ಲಿರುವವರು ಅಧ್ಯಕ್ಷರಾಗಿ ಪುನರಾಯ್ಕೆಯಾದ ಜಿಯಾಂಗ್ ಜೆಮಿನ್

ಇದುವರೆಗೆ ಪ್ರಧಾನಿಯಾಗಿದ್ದ ಲಿಪೆಂಗ್ ಎರಡು ಅವಧಿಗಳನ್ನು ಪೂರ್ಣಗೊಳಿಸಿರುವುದರಿಂದ ರಾಷ್ಟ್ರೀಯಜನತಾ ಸಮ್ಮೇಳನ ಝುರೊಂಗ್ಜಿಯವರನ್ನು ಗಣತಂತ್ರದ ಹೊಸ ಪ್ರಧಾನಿಯಾಗಿ ಆಯ್ಕೆ ಮಾಡಿದೆ. ಲಿಪೆಂಗ್‌ರವರು ರಾಷ್ಟ್ರೀಯ ಜನತಾ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ.

ಈ ಮೊದಲು ಚೀಣಾ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಚೀಣಾದ ಇತರ ಪ್ರಜಾಸತ್ತಾತ್ಮಕ ಪಕ್ಷಗಳ ಪ್ರಾತಿನಿಧ್ಯವಿರುವ ಚೀಣೀ ಜನತಾ ಸಲಹಾ ಸಮಿತಿಯಲ್ಲಿ ಇದ್ದ ಸೂಚನೆಗಳನ್ನು ಇತರ ಪಕ್ಷಗಳು ಅಂಗೀಕರಿಸಿದವು. ಈ ಸೂಚನೆಗಳನ್ನು ರಾಷ್ಟ್ರೀಯ ಜನತಾ ಸಮ್ಮೇಳನದ ಎದುರು ಇಡಲಾಯಿತು.

ಅಧ್ಯಕ್ಷ ಸ್ಥಾನದ ಸೂಚನೆಗೆ ಪರವಾಗಿ 2882 ಮತಗಳು ದೊರೆತವು. ಕೇವಲ 26 ಪ್ರತಿನಿಧಿಗಳು ವಿರೋಧಿಸಿದರು 29 ಮಂದಿ ಗೈರುಹಾಜರಾದರು. ಪ್ರಧಾನಿ ಹುದ್ದೆಯ ಸೂಚನೆಗೆ 2890 ಮತಗಳ ಬೆಂಬಲ ದೊರೆಯಿತು. 29 ಜನ ವಿರೋಧಿಸಿದರು, 31 ಜನ ಗೈರುಹಾಜರಾದರು. ಸಮ್ಮೇಳನದ ಅಧ್ಯಕ್ಷರ ಸ್ಥಾನದ ಸೂಚನೆಗೆ 2616 ಪ್ರತಿನಿಧಿಗಳ ಬೆಂಬಲ ದೊರೆಯಿತು. 200 ಮಂದಿ ವಿರೋಧಿಸಿದರು, 126 ಪ್ರತಿನಿಧಿಗಳು ಗೈರು ಹಾಜರಾದರು.

ಹೊಸ ಪ್ರಧಾನಿ ಝು ರೊಂಗ್ಜಿ ಇದುವರೆಗೆ ಚೀಣಾಜನತಾ ಗಣತಂತ್ರದ ಉಪಪ್ರಧಾನಿಯಾಗಿದ್ದರು.

ರಾಷ್ಟ್ರೀಯ ಜನತಾ ಸಮ್ಮೇಳನದ ಒಂಭತ್ತನೇ ಅಧಿವೇಶನ ಹುಜಿನ್ ತಾವೋರವನ್ನು ಗಣತಂತ್ರದ ಉಪಾಧ್ಯಕ್ಷರನ್ನಾಗಿ ಹಾಗೂ ಜನತಾ ಸಮ್ಮೇಳನದ ಲಿಪೆಂಗ್‌ರವರಿಗೆ ಮುಂದಿನ ಐದು ವರ್ಷಗಳಲ್ಲಿ ನೆರವಾಗಲು 19 ಉಪಾಧ್ಯಕ್ಷರುಗಳುಳ್ಳ ಸ್ಥಾಯೀ ಸಮಿತಿಯನ್ನು ಆರಿಸಿತು.

ದಕ್ಷಿಣ ಆಫ್ರಿಕಾದ ಭಾರತೀಯ ಮೂಲದವರೂ ಕ್ಷಮೆ ಕೋರಬೇಕೇ?

ಇದೀಗ ದಕ್ಷಿಣ ಆಫ್ರಿಕಾದಲ್ಲಿ ಚರ್ಚೆಯಲ್ಲಿರುವ ಪ್ರಶ್ನೆ. 'ಸತ್ಯ ಮತ್ತು ಸರಿಹೊಂದಾಣಿಕೆ ಆಯೋಗ'ದ ಅಧ್ಯಕ್ಷ ಡೆಸ್ಮಂಡ್ ಟುಟುರವರು ದಕ್ಷಿಣ ಆಫ್ರಿಕಾದ ಬಿಳಿಯರು ವರ್ಣದ್ವೇಷ ನೀತಿಗಾಗಿ ಕ್ಷಮೆಕೋರಬೇಕು ಎಂದು ಇತ್ತೀಚಿಗೆ ಕರೆ ನೀಡಿದ್ದರು. ಇದಕ್ಕೆ ಪ್ರತಿಕ್ರಿಯಿಸುತ್ತಾ ಮಹಾತ್ಮಗಾಂಧಿಯವರ ಕುಟುಂಬದವರಾದ ಹಾಗೂ ಈಗ ದಕ್ಷಿಣ ಆಫ್ರಿಕಾದ ಸಂಸತ್ತಿನಲ್ಲಿ ಎ.ಎನ್.ಸಿ. ಪರವಾಗಿ ಸದಸ್ಯೆಯಾಗಿರುವ ಇಳಾ ಗಾಂಧಿಯವರು 'ನಾವು ಭಾರತೀಯರು ವರ್ಣದ್ವೇಷಿ ಆಡಳಿತದೊಂದಿಗೆ ಸಹಕರಿಸಲು ನಿರಾಕರಿಸಿದರೂ ನಮ್ಮ ಇಡೀ ಸಮುದಾಯವನ್ನು ಅಣಿನೆರೆಸಿ ವರ್ಣದ್ವೇಷಿ ಆಡಳಿತದಿಂದ ದೂರ ನಿಲ್ಲಿಸುವಲ್ಲಿ ವಿಫಲವಾದದ್ದಕ್ಕೆ ನಾವೂ ಕ್ಷಮೆ ಕೋರಬೇಕು' ಎಂದರು.

ಆದರೆ ಎ.ಎನ್.ಸಿ. ಯ ಕರಿಯ ಮುಖಂಡ ದುಮಿಸಾನಿ ಅಕಾಯೆ ಇದನ್ನು ಬಲವಾಗಿ ವಿರೋಧಿಸಿದ್ದಾರೆ. ಭಾರತೀಯರು ಇತರ ವರ್ಣೀಯರು ಹಾಗೂ ಕರಿಯರ ಜೊತೆ ಸೇರಿ ಬಿಳಿಯರ ವಿರುದ್ಧ ಹೋರಾಡಿರುವಾಗ ಅವರು ಕ್ಷಮೆ ಕೋರಬೇಕೆಂದು ಹೇಳುವುದರಲ್ಲಿ ಅರ್ಥವಿಲ್ಲ ಎಂದಿದ್ದಾರೆ.

ಬಿಳಿಯರ ಆಡಳಿತ ಭಾರತೀಯರು ಮತ್ತು ಕರಿಯರ ನಡುವೆ ವ್ಯತ್ಯಾಸ ಮಾಡುತ್ತಿತ್ತು ಎಂಬುದು ನಿಜವಾದರೂ, ಭಾರತೀಯರು ಬಿಳಿಯರು ನಡೆಸಿದ ವಿಪರೀತ ಶೋಷಣೆಯಲ್ಲಿ ಪಾಲುದಾರರಾಗಿರಲಿಲ್ಲ. ಕರಿಯರಲ್ಲೂ ಕೆಲವು ಕೈಗೊಂಬೆ ಮುಖಂಡರು ವರ್ಣದ್ವೇಷಿ ಆಡಳಿತದ ಹೊಲಸು ಕೆಲಸಗಳಿಗೆ ನೆರವಾಗಿದ್ದರು ಎಂಬುದನ್ನು ಅಖಾಯೆಯವರು ನೆನಪಿಸುತ್ತಾ ಭಾರತೀಯರು ಕ್ಷಮೆ ಕೋರಬೇಕಾದರೆ, ಎಲ್ಲರೂ ಕ್ಷಮೆ ಕೋರಬೇಕು ಎಂದಿದ್ದಾರೆ 'ನಾವು ಒಟ್ಟಿಗೇ ಸಮೃದ್ಧಿ ಹೊಂದುತ್ತೇವೆ, ಅಥವಾ ಒಟ್ಟಿಗೆ ನಾಶವಾಗುತ್ತೇವೆ. ಶಾಶ್ವತ ಪರಿಹಾರವೆಂದರೆ ನಮ್ಮೆಲ್ಲರ ಉತ್ತಮ ಭವಿಷ್ಯಕ್ಕಾಗಿ ಟೊಂಕ ಕಟ್ಟಿ ನಿಲ್ಲುವುದು" ಎಂದು ಅವರು ಹೇಳಿದ್ದಾರೆ.

ಶ್ರೀಲಂಕಾದಲ್ಲಿ ಮತ್ತೆ ಕದನ

ಮಾರ್ಚ್ 15 ರಂದು ಮತ್ತೆ ಶ್ರೀಲಂಕಾದ ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ಎಲ್.ಟಿ.ಟಿ.ಇ. ಮತ್ತು ಶ್ರೀಲಂಕಾ ಸೇನೆಯ ನಡುವೆ ಕದನ ನಡೆಯಿತು. ಇದರಲ್ಲಿ 18 ಎಲ್.ಟಿ.ಟಿ.ಇ. ನವರು, 13 ಸೈನಿಕರು ಸಾವಿಗೀಡಾದರು, 46 ಮಂದಿ ಗಾಯಗೊಂಡರು. ಶ್ರೀಲಂಕಾ ಸೇನೆ ಎಲ್.ಟಿ.ಟಿ.ಇ. ಯ ಒಂದು ರಕ್ಷಣಾ ವ್ಯೂಹವನ್ನು ಭೇದಿಸಿ ವಶಪಡಿಸಿ ಕೊಂಡಾಗ ಈ ಕದನ ನಡೆಯಿತು ಎಂದು ಹೇಳಲಾಗಿದೆ.

ಈ ನಡುವೆ 1992 ರಲ್ಲಿ ಸೇನಾಧಿಕಾರಿಯೊಬ್ಬರ ಹತ್ಯೆಯ ಕುರಿತು ತನಿಖೆ ನಡೆಸುತ್ತಿರುವ ನ್ಯಾಯಾಂಗ ಆಯೋಗ ಹಿಂದಿನ ಅಧ್ಯಕ್ಷ ಪ್ರೇಮದಾಸರವರ ಮಂತ್ರಿ ಮಂಡಳದ ಹಿರಿಯ ಸದಸ್ಯರೊಬ್ಬರು ಎಲ್.ಟಿ.ಟಿ.ಐ. ಗೆ ಶಸ್ತ್ರಾಸ್ತ್ರ ಪೂರೈಸುತ್ತಿದ್ದ ಅಂಶ ತನ್ನ ಗಮನಕ್ಕೆ ಬಂದಿದೆ ಎಂದು ಹೇಳಿದೆ.

1994 ರಲ್ಲಿ ಚಂದ್ರಿಕಾ ಕುಮಾರತುಂಗಾ ಅಧ್ಯಕ್ಷರಾದಾಗ ಎಲ್‌ಟಿಟಿಇ ಮುಖ್ಯಸ್ಥ ಪ್ರಭಾಕರನ್ ತನ್ನ ಕಾರ್ಯಕರ್ತರನ್ನು ಪೋಲೀಸ್ ಪಡೆಯಾಗಿ ಪರಿವರ್ತಿಸಿದರೆ ಹತ್ತು ವರ್ಷಗಳ ಕಾಲ ತಮಿಳು ಪ್ರದೇಶಗಳಲ್ಲಿ ಆಳ್ವಿಕೆ ನಡೆಸಲು ಅವಕಾಶ ಕೊಡುವುದಾಗಿ ಹೇಳಿದ್ದರು ಎಂಬ ಸುದ್ದಿಯ ವಿರುದ್ಧ ಈಗ ಶ್ರೀಲಂಕಾದ ಪ್ರತಿಪಕ್ಷ ಚಳುವಳಿ ನಡೆಸುತ್ತಿದೆ. ತಮ್ಮದೇ ಅಧ್ಯಕ್ಷರ ಕಾಲದಲ್ಲಿ ಎಲ್‌ಟಿಟಿಇಗೆ ಬೆಂಬಲ ನೀಡುವ ಕೃತ್ಯ ನಡೆದಿದೆಯೆಂಬ ಈಗ ಬಯಲಾಗಿರುವ ಅಂಶ ಅವರ ಚಳುವಳಿಗೆ ತಣ್ಣೀರೆರಚಬಹುದು ಎಂದು ಹೇಳಲಾಗುತ್ತಿದೆ.

ನಾಝಿಗಳಿಂದ ಯೆಹೂದ್ಯರ ನರಹತ್ಯೆ : 50 ವರ್ಷಗಳ ನಂತರ ಪೋಪರ ವಿಷಾದ!

ನಾಝಿಗಳು ಎರಡನೇ ಮಹಾಯುದ್ಧ ಕಾಲದಲ್ಲಿ ಯೆಹೂದಿಯರಿಗೆ ಭಾರೀ ಕಿರುಕುಳ ಕೊಡುತ್ತಿದ್ದಾಗ ಅದನ್ನು ವಿರೋಧಿಸುವಲ್ಲಿ ಕ್ರಿಶ್ಚಿಯನ್ನರು ವಿಫಲರಾದ ಬಗ್ಗೆ ತನಗೆ ತೀವ್ರ ವಿಷಾದವಿದೆ ಎಂದು ಇತ್ತೀಚಿಗೆ ರೋಮನ್ ಕ್ಯಾಥೋಲಿಕ್ ಚರ್ಚ್‌ನ ಮುಖ್ಯಾಲಯ ವ್ಯಾಟಿಕನ್ ಪ್ರಕಟಿಸಿದ ದಸ್ತಾವೇಜು ಹೇಳಿದೆ. ಈ ದಸ್ತಾವೇಜಿನ ಪ್ರಕಟಣೆಯನ್ನು ಕಳೆದ ಹತ್ತು ವರ್ಷಗಳಿಂದ ನಿರೀಕ್ಷಿಸಲಾಗಿತ್ತು.

ನಾಝಿಗಳ ನರಹತ್ಯೆಯನ್ನು ಪ್ರತಿರೋಧಿಸುವಲ್ಲಿ ಕಮ್ಯುನಿಸ್ಟರು ಮತ್ತು ಇತರ ಪ್ರಜಾಪ್ರಭುತ್ವವಾದಿಗಳು ಮುಂಚೂಣಿಯಲ್ಲಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆದರೆ ಆಗ ಪೋಪ್ ಹಾಗೂ ರೋಮನ್ ಕ್ಯಾಥೋಲಿಕ್ ಮುಖಂಡರು ಅಧಿಕೃತವಾಗಿ ಈ ಪ್ರತಿರೋಧ ಕಾರ್ಯಕ್ರಮಗಳಲ್ಲಿ ಭಾಗ ವಹಿಸಿರಲಿಲ್ಲ. 'ನಾಝಿ ಶಕ್ತಿಗಳ ಆಕ್ರಮಣಕ್ಕೊಳಗಾದ ದೇಶಗಳಲ್ಲಿ ಎಷ್ಟೊಂದು ಕ್ರಿಶ್ಚಿಯನ್ ಜನ ತಮ್ಮ ಯೆಹೂದಿ ನೆರೆಕರೆಯವರು ಮಾಯವಾದಾಗ ಭಯಾನಕ ಪೀಡೆ ಅನುಭವಿಸಿದ್ದರೋ ಗೊತ್ತಿಲ್ಲ. ಆದರೂ ಅವರು ತಮ್ಮ ಪ್ರತಿಭಟನೆಯ ದನಿಯೆತ್ತುವಷ್ಟು ಬಲಿಷ್ಟರಾಗಿರಲಿಲ್ಲ' ಎಂದು ಈ ದಸ್ತಾವೇಜು ಖೇದ ವ್ಯಕ್ತಪಡಿಸಿದೆ.

ಆದರೆ ಈ ವಿಫಲತೆ ಕೇವಲ ಆಕಸ್ಮಿಕವೇ? ಕಟ್ಟಾ ಕ್ರಿಶ್ಚಿಯನ್ ಅನುಯಾಯಿಗಳಲ್ಲಿ ಮನೆ ಮಾಡಿದ್ದ ಯೆಹೂದಿ-ವಿರೋಧಿ ಪೂರ್ವಗ್ರಹಗಳಿಂದಾಗಿ ನಾಝಿಗಳ ಆ ನರಹತ್ಯೆಯ ಕೆಲಸ ಸುಲಭ ಸಾಧ್ಯವಾಯಿತು ಎಂದರೆ ತಪ್ಪಾಗುತ್ತದೆಯೋ ಎಂದು ಕೆಲವರು ಪ್ರಶ್ನಿಸುತ್ತಾರೆ. ಜನಾಂಗ-ದ್ವೇಷದ ಭಾವನೆ, ಸಂಕುಚಿತ ಮತೀಯ ಭಾವನೆ ಎಷ್ಟು ವಿನಾಶಕಾರಿಯಾಗಬಲ್ಲದು ಎಂಬುದಕ್ಕೆ ಇದು ಉದಾಹರಣೆಯೆಂದು ಅವರು ಹೇಳುತ್ತಾರೆ.

ಇಂಡೋನೇಶ್ಯಾದಲ್ಲಿ ಚಮಚಾ ಬಂಡವಾಳಶಾಹಿ ಮುಂದುವರಿಕೆ?

ವಿದ್ಯಾರ್ಥಿಗಳು 'ಚಮಚಾ ಬಂಡವಾಳ ಶಾಹಿಯ ವಿರುದ್ಧ ಆಂದೋಲನ ನಡೆಸುತ್ತಿದ್ದರೂ ಇಂಡೋನೇಶ್ಯಾದ ಅಧ್ಯಕ್ಷ ಸುಹಾರ್ತೊ ತನ್ನ 'ಚಮಚಾ' ಆಳ್ವಿಕೆಯನ್ನು ಮುಂದುವರೆಸುವಂತೆ ಕಾಣುತ್ತಿದೆ. ತನ್ನ ಕೋಟ್ಯಾಧಿಪತಿ ಮಗಳನ್ನು ಹಾಗೂ ತನ್ನ ನಿಕಟ ಸ್ನೇಹಿತ ಹಾಗೂ ಟಿಂಬರ್ ದೊರೆಯೆನಿಸಿದ ಮಹಮ್ಮದ್ ಬಾಬ್ ಹಸನ್‌ರನ್ನು ತನ್ನ ಹೊಸ ಮಂತ್ರಿಮಂಡಳದಲ್ಲಿ ಸೇರಿಸಿರುವುದಾಗಿ ಆತ ಪ್ರಕಟಿಸಿದ್ದಾರೆ.

'ಒಂದೊಮ್ಮೆ ಭಾರೀ ಬೆಳವಣಿಗೆ ಹೊಂದುತ್ತಿದ್ದ ಇಂಡೋನೇಶ್ಯಾದ ಆರ್ಥಿಕ ಈಗ ಭಾರೀ ಹಣದುಬ್ಬರ ಹಾಗೂ ನಿರುದ್ಯೋಗವನ್ನು ಎದುರಿಸುತ್ತಿದೆ' ಎಂದು ಒಪ್ಪಿಕೊಂಡ ಅಧ್ಯಕ್ಷ ಸುಹಾರ್ತೊ ಅದರ ಕಾರಣಗಳ ಬಗ್ಗೆ ಮಾತ್ರ ಏನೂ ಹೇಳಿಲ್ಲ.

ದಕ್ಷಿಣ ಕೊರಿಯಾದಲ್ಲಿ ರಾಜಕೀಯ ಬಂಧಿಗಳ ಬಿಡುಗಡೆ ಹೊಸ ಅಧ್ಯಕ್ಷರೂ ವಚನ ಈಡೇರಿಸಿಲ್ಲ

ದಕ್ಷಿಣ ಕೊರಿಯಾದ ಅಧ್ಯಕ್ಷತೆಯನ್ನು ವಹಿಸಿಕೊಂಡ ಕಿಮ್‌ದೇ ಜುಂಗ್ ಕ್ಷಮಾದಾನದ ಒಂದು ಯೋಜನೆಯನ್ನು ಪ್ರಕಟಿಸಿದ್ದು ಇದು 'ಅಸಮರ್ಪಕ ಹಾಗೂ ಶೋಚನೀಯ' ಎಂದು ಆ ದೇಶದ ಮಾನವ ಹಕ್ಕುಗಳ ಪ್ರತಿಪಾದಕರು ಟೀಕಿಸಿದ್ದಾರೆ.

ಸುಮಾರು 500 ಮಂದಿಯನ್ನು ಅವರ ರಾಜಕೀಯ ನಂಬಿಕೆಗಳಿಗಾಗಿ ಜೈಲಿನಲ್ಲಿ ಹಾಕಿದ್ದು ಅವರಲ್ಲಿ 23 ಮಂದಿ ದೀರ್ಘಾವಧಿ ಶಿಕ್ಷೆ ಅನುಭವಿಸುತ್ತಿರುವವರು. ಈಗ ಕೇವಲ ಬಿಡುಗಡೆ ಹೊಂದಿದವರಲ್ಲಿ ಹೆಚ್ಚಿನವರು ಬೇರೆ ಅಪರಾಧಗಳನ್ನು ಮಾಡಿ ಜೈಲಿಗೆ ಕಳಿಸಲ್ಪಟ್ಟವರು. ಈ ಕ್ಷಮಾದಾನ ನೋಡಿದರೆ ಹೊಸ ಸರಕಾರಕ್ಕೂ ಸುಧಾರಣೆಯ ಇಚ್ಛಾಶಕ್ತಿಯಿಲ್ಲವೇನೋ ಎಂದನಿಸುತ್ತದೆ, ದೇಶದ ಸಂಪ್ರದಾಯಕ ಗುಂಪುಗಳ ಭಯದಿಂದಾಗಿ ಹೀಗೆ ಮಾಡುತ್ತಿರಬಹುದು ಎಂದು ಅವರು ಟೀಕಿಸಿದ್ದಾರೆ.

ಲ್ಯಾಮ್ಮೆಸ್ಟಿಕ್ ಕಾರ್ಮಿಕರ ಅನಿರ್ದಿಷ್ಟಕಾಲ ಉಪವಾಸ ಸತ್ಯಾಗ್ರಹ ಮುಂದುವರಿಕೆ

ಜಿಗಣಿ ಪ್ರದೇಶದಲ್ಲಿರುವ ಲಾಮ್ಮೆಸ್ಟಿಕ್ ಅಪರೆಲ್ಸ್ ಕಾರ್ಮಿಕರು ದುಡಿದ ಸಂಬಳ ಪಡೆಯಲು ದಿನಾಂಕ28-2-98 ರಿಂದ ಅನಿರ್ದಿಷ್ಟ ಕಾಲ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ.

ಪೋಲೀಸರು ಮಾಲೀಕರ ಮೇಲೆ ಒತ್ತಾಯ ತಂದು ದುಡಿದ ಸಂಬಳ ಕೊಡಿಸುವ ಬದಲು ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಜೆ.ಸಿ.ರಾಜು, ನಂತರ ಶ್ರೀನಾಥ ಎಂಬುವರನ್ನು ಬಂಧಿಸಿ ಆಸ್ಪತ್ರೆಗೆ ಸೇರಿಸಿರುತ್ತಾರೆ.

ದಿನಾಂಕ 13-3-98 ರಿಂದ ಶ್ರೀಮತಿ ಮುಮತಾಜ್ ಉಪವಾಸ ಸತ್ಯಾಗ್ರಹವನ್ನು ಮುಂದುವರೆಸುತ್ತಿದ್ದಾರೆ.

ಮಾಲೀಕರು ದುಡಿದ ಸಂಬಳವನ್ನು ಕಳೆದ ಮೂರು ತಿಂಗಳಿಂದ ಕಾರ್ಮಿಕರಿಗೆ ನೀಡದೆ ಕೆಲಸಕ್ಕೆ ಕಾರ್ಮಿಕರು ರಾಜಿನಾಮೆ ನೀಡಿದರೆ ಮಾತ್ರ ನೀಡುವುದಾಗಿ ಹೇಳುತ್ತಿದ್ದಾರೆ.

ಸರ್ಕಾರ ಕಾರ್ಮಿಕರ ಸಂಬಳವನ್ನು ನೀಡುವಂತೆ ಮಾಲೀಕರ ಮೇಲೆ ಒತ್ತಾಯ ತರುವಲ್ಲಿ ವಿಫಲವಾಗಿರುವುದು ನಿಜಕ್ಕೂ ನಾಚಿಕೆಗೇಡು. ಸರ್ಕಾರ ಕೂಡಲೇ ಕಾರ್ಮಿಕರಿಗೆ ಸಂಬಳವನ್ನು ಕೊಡಿಸಲು ಪ್ರಯತ್ನ ಮಾಡದಿದ್ದರೆ ಕಾರ್ಮಿಕರು ಬೇರೆ ಮಾರ್ಗವಿಲ್ಲದೆ ರಸ್ತೆ ತಡೆ ಚಳುವಳಿಗೆ ಇಳಿಯಬೇಕಾಗುತ್ತದೆ ಎಂದು ಸಂಘ ಎಚ್ಚರಿಸಿದೆ.

➔



ಹುಬ್ಬಳ್ಳಿ ನಗರದಲ್ಲಿ ಶಾಂತಿಗಾಗಿ ಸಿಪಿಐ(ಎಂ) ಕರೆ

ದಿ. 17 ರಂದು ಹುಬ್ಬಳ್ಳಿ ನಗರದ ಕೆಲವು ಸೂಕ್ಷ್ಮ ಪ್ರದೇಶಗಳಲ್ಲಿ ಹೋಳಿ ಹಬ್ಬ ಆಚರಣೆಯ ಸಂದರ್ಭ ಗುಂಪು ಘರ್ಷಣೆಗಳಾಗಿದ್ದು, ಪೋಲೀಸರು ಮಧ್ಯೆ ಪ್ರವೇಶ ಮಾಡಿದ್ದರೂ, ಭಾರೀ ಪ್ರಮಾಣದಲ್ಲಿ ಸಾಮಾನ್ಯ ಜನರು ಮತ್ತು ಕಾನೂನು ರಕ್ಷಕರು ಗಾಯಗೊಂಡಿದುದಕ್ಕಾಗಿ ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿ ತನ್ನ ತೀವ್ರ ಆತಂಕ ವ್ಯಕ್ತಪಡಿಸಿದೆ.

ಹಬ್ಬಗಳ ಆಚರಣೆಗಳು ಸಂಪತ್ ಸಮೃದ್ಧಿಯ ಸಂತೋಶಗಳನ್ನು ಜನರ ನಡುವೆ ಹಂಚಿಕೊಂಡು, ಸ್ನೇಹ, ಸೌಹಾರ್ದತೆಯನ್ನು ಹೆಚ್ಚಿಸುವಂತಾಗಬೇಕೇ ಹೊರತು, ಪರಸ್ಪರ ಘರ್ಷಣೆ, ದೊಂಬಿ, ಲೂಟಿ, ಹಿಂಸೆ ಮುಂತಾದ ಸಮಾಜ ಘಾತುಕ ಕೃತ್ಯಗಳಿಗೆ ಆಸ್ಪದ ಕೊಡುವಂತಾಗಬಾರದೆಂದು ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಸಿ.ಆರ್.ಭಟ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಶಾಂತಿ ಕಾಪಾಡಲು ಸಿಪಿಐ(ಎಂ) ಕಾರ್ಯಕರ್ತರು ಜನರೊಂದಿಗೆ ವಿಶೇಷವಾಗಿ ಸಹಕರಿಸರು ಪ್ರಕಟಣೆಯಲ್ಲಿ ಕರೆಕೊಡಲಾಗಿದೆ. ಇಂತಹ ಸಂದರ್ಭಗಳಲ್ಲಿ ಪೋಲೀಸರು ಇನ್ನಷ್ಟು ಹೆಚ್ಚಿನ ಮುಂಜಾಗ್ರತಾ ಕ್ರಮ ವಹಿಸಿಕೊಳ್ಳಬೇಕಿತ್ತೆಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಲಪ್ರಭಾ ಕಾಲುವೆಗೆ ನೀರು ಬಿಡುವ ಅವಧಿಯನ್ನು ವಿಸ್ತರಿಸಲು ಒತ್ತಾಯ:

ಮಾರ್ಚ್ 15 ರಿಂದ ಮಲಪ್ರಭಾ ಎಡ ಮತ್ತು ಬಲದಂಡೆ ಕಾಲುವೆಗೆ ನೀರು ಬಿಡುವುದನ್ನು ನಿಲ್ಲಿಸುವುದಾಗಿ ಸಂಬಂಧಪಟ್ಟ ಅಧಿಕಾರಿಗಳು ಪ್ರಕಟಣೆ ಹೊರಡಿಸಿದ್ದಾರೆ.

ಹಿಂಗಾರಿ ಬೆಳೆಗಳಿಗೆ ಇನ್ನೂ ನೀರು ಬೇಕಾಗಿರುವುದರಿಂದ ಕನಿಷ್ಟ ಮಾರ್ಚ್ ತಿಂಗಳ ಅಂತ್ಯದವರೆಗೆ ವಿಸ್ತರಿಸುವಂತೆ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ವಿ ಪಿ ಕುಲಕರ್ಣಿ ಒತ್ತಾಯಿಸಿದ್ದಾರೆ ಮಾರ್ಚ್ 15 ರಿಂದ ನೀರು ನಿಲ್ಲಿಸಿದರೆ ಕೈಗೆ ಬಂದಿರುವ ಬೆಳೆಗಳಿಗೆ ಶೇ 25 ರಷ್ಟು ಹಾನಿಯಾಗುವುದರಿಂದ ತಮ್ಮ ತೀರ್ಮಾನವನ್ನು ಪುನರ್ ಪರಿಶೀಲಿಸಬೇಕಾಗಿ ಕರ್ನಾಟಕ ಪ್ರಾಂತ ರೈತ ಸಂಘದ ರಾಮದುರ್ಗ ತಾಲೂಕು ಘಟಕದ ಕಾರ್ಯದರ್ಶಿ ವಿಪಿ ಕುಲಕರ್ಣಿಯವರು ಆಗ್ರಹಪಡಿಸಿದ್ದಾರೆ.



ಮೂರು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ದೇವಿಪ್ರಸಾದ್ ಚಟ್ಟೋಪಾಧ್ಯಾಯ ಸ್ಮಾರಕ ವಿಚಾರಸಂಕಿರಣವನ್ನು ಉದ್ಘಾಟಿಸುತ್ತಿರುವ ಇ.ಎಂ.ಎಸ್.

ಇ.ಎಂ.ಎಸ್. ಕೃತಿಗಳು

ಇ.ಎಂ.ಎಸ್. ಒಬ್ಬ ಪ್ರಖ್ಯಾತ ಕ್ರಾಂತಿಕಾರಿ, ರಾಜಕೀಯ ಮುತ್ಸದ್ದಿಯಷ್ಟೇ ಅಲ್ಲ ಅತ್ಯುತ್ತಮ ಲೇಖಕರೂ ಆಗಿದ್ದರು. ತಮ್ಮ ಅನುಭವಗಳನ್ನು, ಮಂಥನಗಳನ್ನು, ಸಮಕಾಲೀನ ಬೆಳವಣಿಗೆಗಳ ಕುರಿತ ಹರಿತವಾದ ವಿಶ್ಲೇಷಣೆಗಳನ್ನು ಅತ್ಯಂತ ಸರಳ ಹಾಗೂ ಸ್ಪಷ್ಟ ರೀತಿಯಲ್ಲಿ ಬರವಣಿಗೆಗಿಳಿಸುತ್ತಿದ್ದ ಇಎಂಎಸ್ ಲೇಖನ ಗಳು ಇನ್ನು ಮುಂದೆ ನಮಗೆ ಸಿಗುವುದಿಲ್ಲ. ಆದರೆ ತನ್ನ ಜೀವನದ ಕೊನೆಯ ಉಸಿರಿನವರೆಗೂ ಅವರು ನೀಡಿದ ಬರವಣಿಗೆಗಳೇ ಇನ್ನು ಮುಂದೆಯೂ ಈ ದೇಶದಲ್ಲಿ ಶೋಷಣಾರಹಿತ ಸಮಾನತೆಯ ನವ ಸಮಾಜವೊಂದಕ್ಕಾಗಿ ಹೋರಾಡುತ್ತಿರುವವರಿಗೊಂದು ದೊಡ್ಡ ಆಸ್ತಿ ಹಾಗೂ ಅಸ್ತ್ರ.

ಕೇರಳ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ವಿಜೇತರಾದ ಇ.ಎಂ.ಎಸ್. ರವರ ಮಲೆಯಾಳಂನಲ್ಲಿ ಪ್ರಕಟವಾದ ಲೇಖನಗಳು, ಕೃತಿಗಳು ಅಸಂಖ್ಯಾತ. ಇಂಗ್ಲೀಷಿನಲ್ಲಿ ಅವರ ಆಯ್ದ ಲೇಖನಗಳ ಎರಡು ಸಂಪುಟಗಳಲ್ಲದೆ ಈ ಕೆಳಗಿನ ಕೃತಿಗಳು ಪ್ರಕಟವಾಗಿವೆ.

Mahatma and the Ism(ಮೊದಲ ಪ್ರಕಟಣೆ 1958 ಪರಿಷತ ಆವೃತ್ತಿ-1981)
Conflicts and Crisis-Political India 1974
Crisis Into Chaos - Political India 1984
India's Planning in Crisis
Kerala: Society & Politics(1984)
A History of Indian Freedom Struggle(1986)
Reminiscences of an Indian Communist(1987)
Nehru: Idealogy & Practice (1988)
The Communist Party in Kerala(1994)

ಕನ್ನಡದಲ್ಲಿ 'ಭಾರತೀಯ ಕಮ್ಯುನಿಸ್ಟನೊಬ್ಬನ ನೆನಪುಗಳು' ಹಾಗೂ ಮಲೆಯಾಳಂನಿಂದ ಅವರ ಆತ್ಮಚರಿತ್ರೆ 'ನನ್ನ ಬದುಕು' ಮತ್ತು 'ಭಾರತೀಯ ತತ್ವದರ್ಶನ' ಅನುವಾದಗೊಂಡಿವೆ. `Mahatma and the Ism ಕೃತಿಯ ಕೆಲವು ಅಧ್ಯಾಯಗಳನ್ನು ಚಿಂತನ-ಉತ್ತರ ಕನ್ನಡ ಕಿರುಹೊತ್ತಿಗೆಯಾಗಿ ಪ್ರಕಟಿಸಿದೆ.

ಶ್ರದ್ಧಾಂಜಲಿ........

ಪುಟ 1 ರಿಂದ

ರಾಜ್ಯ ಸಮಿತಿ ಕಚೇರಿಯಲ್ಲಿ ಶ್ರದ್ಧಾಂಜಲಿ ಸಭೆ

ಇ.ಎಂ.ಎಸ್. ರ ನಿಧನದ ಸುದ್ದಿ ತಲುಪುತ್ತಿದ್ದಂತೆ ಬೆಂಗಳೂರಿನಲ್ಲಿ ಹಲವು ಸಂಗಾತಿಗಳು ಪಕ್ಷದ ರಾಜ್ಯ ಸಮಿತಿ ಕಚೇರಿಯಲ್ಲಿ ನೆರೆದರು. ಒಂದು ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸ ಲಾಯಿತು. ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರೂ ರಾಜ್ಯ ಕಾರ್ಯದರ್ಶಿಗಳೂ ಆದ ಪಿ.ರಾಮಚಂದ್ರರಾವ್ ಹಾಗೂ ಇನ್ನೊಬ್ಬ ಹಿರಿಯ ಮುಖಂಡ ಸೂರ್ಯನಾರಾಯಣ ರಾವ್ ರವರು ಇ.ಎಂ.ಎಸ್.ರವರ ಬದುಕನ್ನು ನೆನಪಿಸಿಕೊಳ್ಳುತ್ತಾ ಅವರು ಕರ್ನಾಟಕದಲ್ಲಿ ಪಕ್ಷವನ್ನು ಕಟ್ಟಿಬೆಳೆಸುವ ಬಗ್ಗೆ ಹೊಂದಿದ್ದ ತೀವ್ರ ಆಸಕ್ತಿ ಹಾಗೂ ಅದಕ್ಕೆ ನೀಡಿದ ನೆರವನ್ನು ಸ್ಮರಿಸಿಕೊಂಡರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ವಿ.ಶ್ರೀರಾಮರೆಡ್ಡಿಯವರು ಸೈದ್ಧಾಂತಿಕ ರಂಗದಲ್ಲಿ ಅವರ ಕೊಡುಗೆಗಳನ್ನು ಬುದ್ಧಿಮತ್ತೆಯನ್ನು ಸ್ಮರಿಸಿಕೊಂಡರು. 'ಇಎಂಎಸ್ ಭಾರತದ ಕ್ರಾಂತಿ ಮಾರ್ಗದಲ್ಲಿನ ಹೊನಲು ಬೆಳಕು' ಎಂದು ಶ್ರದ್ಧಾಂಜಲಿ ಅರ್ಪಿಸಿದ ಮತ್ತೊಬ್ಬ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್‌ರವರು ಇ.ಎಂ.ಎಸ್. ರ ಮಾರ್ಗದರ್ಶನವನ್ನು ನೆನಪಿಸಿಕೊಂಡರು.

ಸಿಐಟಿಯು ಶ್ರದ್ಧಾಂಜಲಿ:

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಕರ್ನಾಟಕ ರಾಜ್ಯ ಸಮಿತಿಯು ಕಾ|| ಇ.ಎಂ.ಎಸ್. ನಂಬೂದರಿಪಾಡ್‌ರವರ ನಿಧನಕ್ಕೆ ಸಂತಾಪ ಸೂಚಿಸುತ್ತಾ ದೇಶದಲ್ಲಿ ಎಡ-ಪ್ರಜಾಸತ್ತಾತ್ಮಕ ಚಳುವಳಿಯ ಹರಿಕಾರರಾದ ಅವರು ದುಡಿಯುವ ವರ್ಗದ ಸ್ನೇಹಿತರಾಗಿ ಅದಕ್ಕಾಗಿ ಅವಿರತ ಶ್ರಮ ಪಟ್ಟವರಾಗಿದ್ದರು, ಅವರ ಸಾವು ಒಬ್ಬ ಮಹಾನ್ ನೇತಾರನ ಐತಿಹ್ಯದ ಅಂತ್ಯವಾಗಿದೆ ಎಂದು ಹೇಳಿದೆ. ಅವರೊಬ್ಬ ಮಹಾನ್ ಲೇಖಕರು, ತತ್ವಜ್ಞಾನಿಗಳು ಹಾಗೂ ಚಿಂತಕರಾಗಿದ್ದರು. ರಾಜಕೀಯ ಬೆಳವಣಿಗೆಗಳನ್ನು ಅವರು ಸುಸ್ಪಷ್ಟವಾದ ಸಮಾಜದ ಬಗೆಗಿನ ತಿಳುವಳಿಕೆಯೊಂದಿಗೆ ಸಮರ್ಪಕವಾಗಿ ವಿಮರ್ಶಿಸುತ್ತಿದ್ದರುಎಂದಿರುವ ಸಿಐಟಿಯು ರಾಜ್ಯ ಸಮಿತಿ ದುಡಿಯುವ ವರ್ಗಕ್ಕೆ ಹಾಗೂ ಎಡ ಚಳುವಳಿಗೆ ಅವರ ಮಹತ್ತರ ಸೇವೆಯನ್ನು ಅವರ ಸರಳ ನಡೆ, ನುಡಿ, ಜೀವನ ಉನ್ನತ ಚಿಂತನೆಯನ್ನು ಸ್ಮರಿಸುತ್ತ ಶ್ರದ್ಧಾಂಜಲಿ ಸಲ್ಲಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಹಾಗೂ ಕುಂದಾಪುರಗಳಲ್ಲಿ ಮಾರ್ಚ್ 20 ರಂದು ಹಂಚಿನ ಕಾರ್ಮಿಕರು ತಮ್ಮ ಕಾರ್ಖಾನೆಗಳಿಗೆ ರಜೆ ಹಾಕಿ ಶ್ರದ್ಧಾಂಜಲಿ ಸಭೆಗಳಲ್ಲಿ ಭಾಗವಹಿಸಿದರು. ಮಂಗಳೂರಿನಲ್ಲಿ ಪಕ್ಷದ ಹಿರಿಯ ಮುಖಂಡ ಜನಾರ್ಧನ್ ನಾಯಕ್‌ರವರ ಅಧ್ಯಕ್ಷತೆಯಲ್ಲಿ ಶ್ರದ್ಧಾಂಜಲಿ ಸಭೆ ನಡೆಯಿತು. ರಾಜ್ಯ ಸೆಕ್ರೆಟಾರಿಯಾಟ್ ಸದಸ್ಯರಾದ ಕೆ.ಆರ್. ಶ್ರೀಯಾನ್ ಹಾಗೂ ಬಿ.ಮಾಧವ ಹಾಗೂ ಸಾರಿಗೆ ನೌಕರರ ಮುಖಂಡರಾದ ವಸಂತ ಆಚಾರಿ ಇ.ಎಂ.ಎಸ್. ರ ಕೊಡುಗೆಗಳನ್ನು ನೆನಪಿಸಿದರು.

ಕುಂದಾಪುರದಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರುಗಳಾದ ಅಬ್ರಾಹಂ ಕರ್ಕಡ ಹಾಗೂ ಕೆ.ಶಂಕರ್ ಮತ್ತು ಜಿಲ್ಲೆಯ ಇನ್ನೊಬ್ಬ ಹಿರಿಯ ಮುಖಂಡ ಸಿ.ನಾರಾಯಣರವರು ಇ.ಎಂ.ಎಸ್. ರವರನ್ನು ನೆನಪಿಸಿಕೊಂಡರು.

ಬೆಂಗಳೂರಿನಲ್ಲಿ

ಜಿಲ್ಲಾ ಸಮಿತಿಯ ಮುತುವರ್ಜಿಯಿಂದ ಸಂಜೆ 4.00 ಗಂಟೆಗೆ (ತಿರುವನಂತಪುರದಲ್ಲಿ ಇಎಂಎಸ್‌ರವರ ಅಂತಿಮ ವಿದಾಯದ ವೇಳೆಗೆ) ಒಂದು ಶ್ರದ್ಧಾಂಜಲಿ ಮೆರವಣಿಗೆ ಏರ್ಪಟ್ಟಿತ್ತು. ನಂತರ ಜಿಲ್ಲಾ ಕಾರ್ಯದರ್ಶಿ ಪಿ.ಜಗನ್ನಾಥ್‌ರವರ ಅಧ್ಯಕ್ಷತೆಯಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಎಸ್.ಸೂರ್ಯ ನಾರಾಯಣ ರಾವ್, ಜಿ.ವಿ.ಶ್ರೀರಾಮ ರೆಡ್ಡಿ, ಸಿಪಿಐನ ಜಯತೀರ್ಥ ಹಾಗೂ ಡಾ.ಜಿ.ರಾಮಕೃಷ್ಣ ಮಾತನಾಡಿದರು.

ಬಳ್ಳಾರಿಯಲ್ಲಿ

ಬಳ್ಳಾರಿಯಲ್ಲಿ ಮೌನವಾಗಿ ಸಾಗಿದ ಶ್ರದ್ಧಾಂಜಲಿ ಮೆರವಣಿಗೆಯ ನಂತರ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್ ಹಾಗೂ ಎಸ್.ವೈ. ಗುರುಶಾಂತ್, ಪ್ರಸನ್ನ ಮತ್ತು ಬಸವರಾಜ್ ಮಾತನಾಡಿದರು.



ಇತ್ತೀಚಿನ ಚುನಾವಣೆಗಳಲ್ಲಿ ಮತದಾನ ಮಾಡುತ್ತಿರುವ ಇ.ಎಂ.ಎಸ್.



ಕಾಂ. ಇ.ಎಂ.ಎಸ್. ನಂಬೂದರಿಪಾಡ್ ನಾನು ಕಂಡಂತೆ

ಎನ್.ಕೆ.ಉಪಾಧ್ಯಾಯ

ನಾಲ್ವತ್ತೈದು ವರ್ಷಕ್ಕೂ ಮೇಲ್ಪಟ್ಟು ನಾನು ಇ.ಎಂ.ಎಸ್‌ರವರನ್ನು ಕಂಡಿದ್ದೇನೆ. ಅವರನ್ನು ಅಂದರೆ ಅವರ ಜೀವನ, ರಾಜಕೀಯ ನಿಲುಮೆ, ಪಕ್ಷದ ಆಗು ಹೋಗುಗಳಲ್ಲಿ ಅವರ ಮಧ್ಯಪ್ರವೇಶಗಳನ್ನು ಅಭ್ಯಾಸ ಮಾಡಿದ್ದೇನೆ. 1964 ರಲ್ಲಿ ಭಾರತ ಕಮ್ಯುನಿಸ್ಟ್ ಪಾರ್ಟಿ ತಾತ್ವಿಕ ತಳಹದಿಯ ಮೇಲೆ ವಿಭಜನೆಗೊಂಡಾಗ ಇ.ಎಂ.ಎಸ್. -ಎಕೆಜಿಯವರ ಪ್ರಭಾವದಿಂದಾಗಿ ನಾನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸೇರಿದೆ. ಇ.ಎಂ.ಎಸ್. - ಎಕೆಜಿಯವರ ವ್ಯಕ್ತಿತ್ವ ಮತ್ತು ರಾಜಕೀಯದಿಂದ ನಾನ್ಯಾಕೆ ಆಕರ್ಷಿತನಾದೆ?

ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ ಕಮ್ಯುನಿಸ್ಟ್ ಪಕ್ಷದ ಪಾತ್ರವನ್ನು ಕಂಡಿದ್ದೆ. ಅದರಲ್ಲಿ ಪಾಲ್ಗೊಂಡಿದ್ದೆ. ತೆಲಂಗಾಣ ಸಶಸ್ತ್ರ ಕ್ರಾಂತಿಯನ್ನು ಮೆಚ್ಚಿದ್ದೇನೆ. ಅದರಿಂದ ಸ್ಫೂರ್ತಿ ಪಡೆದಿದ್ದೇನೆ. ಅದರಂತೆಯೇ ಪಕ್ಷ ರೈತ ಸಂಘಟನೆ ಕಟ್ಟಿ ಅದೇ ದಾರಿ ತುಳಿಯ ಬೇಕೆಂದು ಪ್ರತಿಪಾದನೆ ಮಾಡಿದ್ದೇನೆ. ಅನಂತರ ಕೇರಳದಲ್ಲಿ ಇ.ಎಂ.ಎಸ್. ಅವರ ನೇತೃತ್ವದ ಸರಕಾರ ಅದರ ಧ್ಯೇಯೋದ್ದೇಶಗಳನ್ನು ತಿಳಿದು ಕೊಂಡಿದ್ದೇನೆ. ಇವುಗಳೆಲ್ಲವುಗಳ ಅನುಭವದಿಂದ 1962 ರಲ್ಲಿ ವಿಜಯವಾಡದಲ್ಲಿ ನಡೆದ ಅಖಿಲ ಭಾರತ ಕಮ್ಯುನಿಸ್ಟ್ ಪಾರ್ಟಿಯ ಕಾಂಗ್ರೆಸ್ಸಿನಲ್ಲಿ ಎಡ-ಬಲಗಳ ಸೈದ್ಧಾಂತಿಕ ಭಿನ್ನಾಭಿಪ್ರಾಯ ದಿಂದಾಗಿ ಪಕ್ಷ ಹೋಳಾಗುವ ಸಂದಿಗ್ಧ ಪರಿಸ್ಥಿತಿ ಉಂಟಾದಾಗ, ಕೇರಳದ ರಾಜಕೀಯ ಅನುಭವಗಳ ನೆಲೆಯಲ್ಲಿ ಎಡ-ಬಲಗಳನ್ನು ಸಮನ್ವಯ ಮಾಡುವ ತಮ್ಮದೇ ಆದ ರಾಜಕೀಯ ತಿದ್ದುಪಡಿ ಮಂಡಿಸಿ ಪಕ್ಷ ಹೋಳಾಗದೆ ಒಗ್ಗಟ್ಟಿನಿಂದಲೇ ಮುಂದುವರಿಯುವಂತೆ ಮಾಡಿದ್ದು, ಆನಂತರ ಅವರು ತಳೆದ ನಿಲುಮೆಗಳು ನನ್ನನ್ನು ಆಕರ್ಷಿಸಿವೆ. ತೆಲಂಗಾಣದಂಥ ಸಶಸ್ತ್ರ ಕ್ರಾಂತಿಗಿಂತಲೂ, ಕಾಂಗ್ರೆಸ್ಸಿನಲ್ಲಿರುವಾಗಲೇ ಮಾರ್ಕ್ಸ್‌ವಾದ ಸಿದ್ಧಾಂತದ ತಳಹದಿಯಲ್ಲಿ ಕಾಂಗ್ರೆಸ್ ಚಳುವಳಿಯನ್ನೂ, ತಿರುವಾಂಕೂರು ಮಹಾರಾಜರ ವಿರುದ್ಧದ ಚಳುವಳಿಯನ್ನೂ ರೈತ-ಕಾರ್ಮಿಕರ ವಿಮೋಚನೆಯ ಚಳುವಳಿಯನ್ನಾಗಿ ಪರಿವರ್ತಿಸಿ ಇಡೀ ಕಾಂಗ್ರೆಸ್ಸನ್ನೇ ಕಾಂಗ್ರೆಸ್ ಸೋಶಲಿಸ್ಟ್ ಪಾರ್ಟಿಯಾಗಿ, ಆನಂತರ ಕಮ್ಯುನಿಸ್ಟ್ ಪಾರ್ಟಿಯಾಗಿ ಬದಲಾಯಿಸಿ, ರೈತ- ಕಾರ್ಮಿಕರ ಹೋರಾಟಗಳನ್ನು ಹುಟ್ಟುಹಾಕಿ ಕೇರಳದ ಬಹುಸಂಖ್ಯ ಜನವಿಭಾಗ ಸ್ವಾತಂತ್ರ್ಯ ಸಂಗ್ರಾಮದ ಕಾಲಘಟ್ಟ ದಲ್ಲಿಯೇ ಕಮ್ಯುನಿಸ್ಟ್ ಚಳುವಳಿಯ ಪರವಾಗಿಯೇ ಮೂಡಿ ಬರುವಂತೆ ಮಾಡಿದ ಕ್ರಮ ನನ್ನಲ್ಲಿ ಅಪಾರ ಪರಿಣಾಮ ಬೀರಿತ್ತು. ತೆಲಂಗಾಣದ ಸಶಸ್ತ್ರ ಕ್ರಾಂತಿ ಸ್ಥಗಿತಗೊಳ್ಳುವಂತಾಯಿತು. ಕೇರಳದಲ್ಲಿ ಚುನಾವಣೆ ಮೂಲಕ ಅಧಿಕಾರಕ್ಕೆ ಬರಲು ಸಾಧ್ಯವಾಯಿತು. ರೈತ ಸಂಘದ ಸ್ವತಂತ್ರ ಚಳುವಳಿ ಮೂಲಕ ಸಮಗ್ರ ಭೂಸುಧಾರಣೆ ತರುವಂತೆ ಸರಕಾರದ ಮೇಲೆ ಒತ್ತಡ ತರಲಾಯಿತು. ನಮ್ಮ ದೇಶದ ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಧೋರಣೆ ಕಾರ್ಯಕ್ರಮದಲ್ಲಿ ಹೇಳಿದಂತೆ ನಮ್ಮ ಚಟುವಟಿಕೆಯು ಪಾರ್ಲಿಮೆಂಟರಿ ಮತ್ತು ನಾನ್ ಪಾರ್ಲಿಮೆಂಟರಿ ಎರಡೂ ಆಗಿರಬೇಕು. ಚುನಾವಣೆಯಲ್ಲಿ ಆರಿಸಿ ಬರಲು ನೇರ ಜನ ಸಂಪರ್ಕ ಬೇಕು, ಅದಕ್ಕಾಗಿ ಸಾಮೂಹಿಕ ಸಂಘಟನೆ ಕಟ್ಟಬೇಕು, ಸ್ವತಂತ್ರ ಚಳುವಳಿ ನಡೆಸಬೇಕು. ಸಾರ್ವಜನಿಕರಲ್ಲಿ ಆ ಮೂಲಕ ರಾಜಕೀಯ ಪ್ರಜ್ಞೆ ಮೂಡಿಸಬೇಕು. ಚುನಾವಣೆಯಲ್ಲಿ ಗೆಲುವಿಗೆ ಅದೇ ನಮ್ಮ ಸಾಧನ. ಇಂದಿನ ಸಂವಿಧಾನದ ಆಯಕಟ್ಟಿನಲ್ಲಿ ಜನಪರ ಧೋರಣೆ ಅನುಷ್ಠಾನದಲ್ಲಿ ತರಲು ಸಾಧ್ಯವಾಗದಿರುವುದರಿಂದ ವಿಧಾನಸಭೆಗಳ ಮೇಲೆ ಒತ್ತಾಯ ತರಲು ತೀವ್ರ ಚಳುವಳಿ ಅಗತ್ಯ. ಅದಕ್ಕೆ ಆಯಾ ರಾಜ್ಯದ ಜನರ ಸಂಸ್ಕೃತಿಯ, ಅವರ ಜೀವನದ ಪರಂಪರೆಯ ಅನುಭವ ಅಗತ್ಯ. ಮಾರ್ಕ್ಸ್‌ವಾದವನ್ನು ಅದಕ್ಕೆ ಹೊಂದಿಸಿಕೊಂಡು ಹೋಗುವುದು ಅಗತ್ಯ. ಅಂಥ ತಿಳುವಳಿಕೆಯಿಂದ ಪಕ್ಷ ಸಾಮೂಹಿಕ ಸಂಘಟನೆಗಳನ್ನು ಕಟ್ಟಿ ಜನರ ನಡುವೆ ನೇರ ಸೈದ್ಧಾಂತಿಕ ನೆಲೆಗಟ್ಟನ್ನು ಸ್ಥಾಪಿಸುವುದರಿಂದಲೇ ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷ ಬಲಿಷ್ಠವಾದ ಮತೀಯ ಶಕ್ತಿಗಳನ್ನೆದುರಿಸಿ ಪಕ್ಷದ ನೆಲೆಗಟ್ಟನ್ನು ಭದ್ರಗೊಳಿಸಿ ಉಳಿಸಿಕೊಳ್ಳಲು ಸಾಧ್ಯವಾಗಿದೆಂದು ನಮ್ಮ ಅನಿಸಿಕೆ. ಎ.ಕೆ.ಜಿಯವರ ಭೂಮಿಗಾಗಿ ಹೋರಾಟ, ಇ.ಎಂ.ಎಸ್. ಅವರ ಸರಿಯಾದ ರಾಜಕೀಯ ಹೋರಾಟ ನನ್ನ ಮೇಲೆ ಪರಿಣಾಮ ಬೀರಿ ಸಿಪಿಐ(ಎಂ) ಪಕ್ಷದತ್ತ ಸೆಳೆಯಿತೆಂದು ಹೇಳಲು ಹೆಮ್ಮೆ ಪಡುತ್ತೇನೆ.

ಇ.ಎಂ.ಎಸ್. ಅವರ ಅಗಲಿಕೆ ಸೈದ್ಧಾಂತಿಕ ಚರ್ಚೆ ಮತ್ತು ವಿಶ್ಲೇಷಣೆಗೆ ದೊಡ್ಡ ಹಾನಿಯಾಗಿದೆ. ಅದನ್ನು ತುಂಬುವುದು ಕಷ್ಟವಾದೀತು. ಆದರೂ ತುಂಬಲೇಬೇಕು.

KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27